

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 11 ಗುರುವಾರ 2022

ಸಂಪುಟ: 43 | ಸಂಚಿಕೆ: 117 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರು ಅರಮನೆ ಅಂಗಳದಲ್ಲೀಗ ಗಜಪಡೆ ದರ್ಬಾರ್

- ಜಯಮಾರ್ತಾಂಡ ದ್ವಾರದ ಮೂಲಕ ಅರಮನೆಗೆ ಅಡಿಯಿಟ್ಟ ಅಭಿಮನ್ಯು ಪಡೆ
- ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಸಾಂಪ್ರದಾಯಿಕ ಸ್ವಾಗತ



ಮೈಸೂರು,ಆ.10(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೂರು ದಿನದ ಹಿಂದಷ್ಟೇ ಮೈಸೂರಿಗೆ ಆಗಮಿಸಿ ಅಶೋಕಪುರಂನ ಅರಣ್ಯ ಭವನದಲ್ಲಿ ಬೀಡುಬಿಟ್ಟಿದ್ದ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ದಸರಾ ಗಜಪಡೆ ಬುಧವಾರ ಕನ್ಯಾ ಲಗ್ನದಲ್ಲಿ ಅರಮನೆ ಆವರಣ ಪ್ರವೇಶಿಸಿದವು.

ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಬೆಳಗ್ಗೆ 9.20ರಿಂದ 10ರೊಳಗೆ ಸಲ್ಲುವ ಕನ್ಯಾ ಲಗ್ನದ ಶುಭ ಮುಹೂರ್ತದಲ್ಲಿ ಜಿಲ್ಲಾಡಳಿತ ಹಾಗೂ ಅರಮನೆ ಮಂಡಳಿ ವತಿಯಿಂದ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸುವ ಮೂಲಕ ಗಜಪಡೆಯನ್ನು ಬರಮಾಡಿ ಕೊಳ್ಳಲಾಯಿತು. ಗಜಪಡೆ ಬೆಳಗ್ಗೆ 8.20ರಷ್ಟರಲ್ಲೇ ಜಯ ಮಾರ್ತಾಂಡ ದ್ವಾರದ ಬಳಿ ಆಗಮಿಸಿದ್ದವು. ಅರಮನೆಯ ಬಿಡದಿ ಬ್ಲಾಕ್‌ನಲ್ಲಿ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ನೇತೃತ್ವ ದಲ್ಲಿ 8.30ರಿಂದ 8.40ರೊಳಗೆ ಗಣಪತಿ ಪೂಜೆ ನೆರವೇರಿಸಿ, ಪೂರ್ಣ ಕುಂಭ ಹಸ್ತಾಂತರ ಮಾಡಲಾಯಿತು. ಗಜಪಡೆಗೆ ಪೂಜೆ ನಂತರ ದ್ವಾರಪಾಲಕ, ಪಾದ ಪೂಜೆ ಮಾಡಲಾಯಿತು. ಈ ವೇಳೆ ಗಣ್ಯರಿಂದಲೂ ಸಂಕಲ್ಪ ಸೇವೆ ನಡೆಯಿತು. ಬಳಿಕ ಚಾಮರಸೇವೆಯೊಂದಿಗೆ ಮುತ್ತೈದೆಯರಿಂದ ಆರತಿ ಬೆಳಗಿಸಿ, ಬೂದುಗುಂಬಳ ಕಾಯಿ ಒಡೆಯಲಾಯಿತು. ಅಂತಿಮವಾಗಿ ಪುಷ್ಪಾರ್ಚನೆ ಮಾಡಿ ಜಯ ಮಾರ್ತಾಂಡ ದ್ವಾರ ದಾಟಿಸಿದ ನಂತರ ಪೊಲೀಸ್ ಇಲಾಖೆ ವತಿಯಿಂದ ಗಜಪಡೆಗೆ 'ಗಾರ್ಡ್ ಆಫ್ ಹಾನರ್' ಗೌರವ ನೀಡಲಾಯಿತು.

> ಈ ಬಾರಿ ಅದ್ಧೂರಿಯಾಗಿ ದಸರಾ ಆಚರಣೆ ಮಾಡಲಾಗುತ್ತಿದೆ. ಅರಮನೆ ಆವರಣದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಅರಮನೆ ಮಂಡಳಿಯಿಂದಲೇ ಅನುದಾನ ನೀಡಲಿದೆ. ಮುಡಾ 10 ಕೋಟಿ ನೀಡಿದೆ. ಉಳಿದ ಹಣವನ್ನು ಸರ್ಕಾರ ನೀಡುತ್ತದೆ. ಈ ಬಾರಿ ವಿಶೇಷವಾಗಿ ದಸರಾ ಆಚರಣೆ ಮಾಡಲಾಗುವುದು. ಫಲಪುಷ್ಪ ಪ್ರದರ್ಶನ ವಿಶೇಷವಾಗಿರಲಿದ್ದು, ಮೊದಲ ದಿನ ಉಚಿತ ಪ್ರವೇಶಾ ವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ. ನವರಾತ್ರಿ ಆರಂಭಕ್ಕೂ 15 ದಿನ ಮುನ್ನವೇ ದಸರಾ ವಸ್ತು ಪ್ರದರ್ಶನವನ್ನು ಉದ್ಘಾಟಿಸಲಾಗುವುದು. ದಸರಾ ಉದ್ಘಾಟಕರನ್ನು ಶೀಘ್ರದಲ್ಲೇ ಆಯ್ಕೆ ಮಾಡುತ್ತೇವೆ.
>
> – ಎಸ್.ಟಿ.ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವ

ಗಜಪಡೆಗೆ ಪಂಚಫಲ ಸಮರ್ಪಣೆ: ಪೂಜೆ ನೆರವೇರಿದ ಬಳಿಕ ಅಂಬಾರಿ ಹೊರುವ ಅಭಿಮನ್ಯು, ಅರ್ಜುನ, ಧನಂಜಯ, ಗೋಪಾಲಸ್ವಾಮಿ, ಮಹೇಂದ್ರ, ಭೀಮ, ಕಾವೇರಿ, ಚೈತ್ರ ಹಾಗೂ ಲಕ್ಷ್ಮೀ ಆನೆಗಳಿಗೆ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್, ಬೆಲ್ಲ, ಕಬ್ಬು, ಮೋದಕ, ಕಡುಬು, ಪಂಚಕಜ್ಜಾಯ, ಎಲೆ, ಅಡಿಕೆಗಳನ್ನು ಇಟ್ಟು ಪೂಜೆ ಸಲ್ಲಿಸಿದ ನಂತರ

▶ 7ನೇ ಪುಟಕ್ಕೆ

ಮುಡಾಗೆ ಸೇರಿದ 13 ಸಾವಿರ ನಿವೇಶನ, 300 ಎಕರೆ ಭೂಮಿ ಖಾಲಿ ಬಿದ್ದಿವೆ

- ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಬಹಿರಂಗ
- ಇವುಗಳ ಒಟ್ಟು ಮೌಲ್ಯ 5000 ಕೋಟಿ
- ಹಂಚಿಕೆ ಇಲ್ಲವೇ ಹರಾಜು ಮೂಲಕ ವಿಲೇವಾರಿಗೆ ಚಿಂತನೆ



ಬೆಂಗಳೂರು, ಆ.10(ಕೆಎಂಶಿ)–ಜನರಿಗೆ ಹಂಚಿಕೆಯಾಗದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಉಳಿದುಕೊಂಡಿದ್ದ 5000 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಪತ್ತೆ ಹಚ್ಚಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಇಂದಿಲ್ಲಿ ಬಹಿರಂಗಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜನರಿಗೆ ಹಂಚಿಕೆಯಾಗದೆ ಉಳಿದ ಹದಿಮೂರು ಸಾವಿರ ನಿವೇಶನಗಳು ಮತ್ತು 300 ಎಕರೆಗೂ ಹೆಚ್ಚಿನ ಭೂಮಿಯನ್ನು ಪತ್ತೆ ಹಚ್ಚಲಾಗಿದ್ದು,ಉಳಿದ ಅಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಹಂಚಿಕೆಯಾಗದೆ ಉಳಿದಿರುವ ಆಸ್ತಿಯ ವಿವರ ಪಡೆಯಲಾಗುತ್ತಿದೆ ಎಂದರು. ಮೈಸೂರು ಮಹಾನಗರದ ವ್ಯಾಪ್ತಿಯಲ್ಲಿ ಮುಡಾ ಹಲವಾರು ಬಡಾವಣೆಗಳನ್ನು ನಿರ್ಮಿಸಿದ್ದು ಹಲವು ಕಾರಣಗಳಿಂದ ವಿವಿಧ ಬಡಾವಣೆಯಲ್ಲಿ ತನ್ನ ವಶದಲ್ಲಿರುವ ನಿವೇಶನಗಳ ವಿವರ ಮರೆತಿತ್ತು. ಆದರೆ ಈಗ ಅಂತಹ ನಿವೇಶನ ಮತ್ತು ಭೂಮಿಯ ದಾಖಲೆಗಳನ್ನು ಸಂಗ್ರಹಿಸಿದ್ದು, ಅದರ ಮೌಲ್ಯ 4 ರಿಂದ 5 ಸಾವಿರ ಕೋಟಿ ರೂ. ಎಂದರು.

> ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಆರ್ಥಿಕವಾಗಿ ಸದೃಢಗೊಳಿಸಿ ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಎಲ್ಲ ರೀತಿಯ ಕ್ರಮಗಳನ್ನು ಕೈಗೊಂಡಿದ್ದೇವೆ. ಆದರೆ ಹಲವು ಕಡೆ ರೈತರು ಭೂಮಿ ಕೊಡಲು ಮುಂದೆ ಬರುತ್ತಿಲ್ಲ. ರೈತರು ಭೂಮಿ ಕೊಡದೆ ನಾವು ನಿವೇಶನಗಳನ್ನು ಅಭಿವೃದ್ಧಿ ಮಾಡುವುದು ಕಷ್ಟ.
>
> –ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್

ಮುಡಾ ವಶದಲ್ಲಿರುವ ಈ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಇಲ್ಲವೇ ಹರಾಜು ರೂಪದಲ್ಲಿ ಮರಾಟ ಮಾಡಲಾಗುವುದು, ಖಾಲಿ ಭೂಮಿಯಲ್ಲಿ ಹೊಸ ಬಡಾವಣೆಯನ್ನು ನಿರ್ಮಿಸಲು ಕ್ರಮ ಕೈಗೊಳ್ಳುವುದಾಗಿ

▶ 7ನೇ ಪುಟಕ್ಕೆ








ಮೈಸೂರು ಮಿತ್ರ ಗುರುವಾರ 11 ಆಗಸ್ಟ್ 2022

ಶ್ರೀ ಪ್ರಭು ಚನ್ನಬಸವಸ್ವಾಮೀಜಿ ರಚಿತ ಮಹಾತ್ಮರ ಚರಿತಾಮೃತ ಕೃತಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ

ಮೈಸೂರು,ಆ.10(ಎಸ್‌ಪಿಎನ್)–ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ಪ್ರತಿವರ್ಷ ಕೊಡಮಾಡುವ 2021ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಗೆ ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ ರಚಿತ 'ಮಹಾತ್ಮರ ಚರಿತಾಮೃತ' ಕೃತಿ ಆಯ್ಕೆಯಾಗಿದೆ. ಬೆಳಗಾವಿ ಜಿಲ್ಲೆ ಅಥಣಿ ಮೋಟಗಿ ಮಠದ ಶ್ರೀ ಪ್ರಭುಚನ್ನಬಸವ ಸ್ವಾಮೀಜಿ ಅವರು, ಸಂಸ್ಕೃತ ಮತ್ತು ಕನ್ನಡ ಎಂ.ಎ. ಪದವೀಧರರಾಗಿದ್ದಾರೆ. ಇವರು ಶ್ರೀ ಸುತ್ತೂರು ಮಠದ ಗುರುಕುಲ ಹಾಗೂ ಶಿವಯೋಗ ಮಂದಿರದಲ್ಲಿ ಅಧ್ಯಾತ್ಮ ಸಾಧನೆ ಮಾಡಿದ್ದಾರೆ. ಪ್ರಸ್ತುತ ಸಾಮಾಜಿಕ ಮತ್ತು ಧಾರ್ಮಿಕ ಕೈಂಕರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಶ್ರೀಗಳು ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಅಭಿರುಚಿಯುಳ್ಳವರಾಗಿದ್ದು, 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 30 ಧ್ವನಿಸಾಂದ್ರಿಕೆಗಳನ್ನು ಹೊರತಂದಿದ್ದಾರೆ. ಇವರ ಸಾಹಿತ್ಯ ಸೇವೆಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. 216 ವಿಶ್ವ ವಿಭೂತಿಗಳ ಜೀವನ ಹಾಗೂ ಸಾಧನೆಗಳನ್ನು ಪರಿಚಯಿಸುವ 'ಮಹಾತ್ಮರ ಚರಿತಾಮೃತ' ಕೃತಿ ಈ ಬಾರಿಯ ಶ್ರೀ ಶಿವರಾತ್ರೀಶ್ವರ ದತ್ತಿ ಪ್ರಶಸ್ತಿಗೆ ಭಾಜನವಾಗಿದೆ. ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ 1983ರಿಂದ ಸಾಹಿತ್ಯ, ಧರ್ಮ, ಸಂಸ್ಕೃತಿ ಕುರಿತಂತೆ ಪ್ರಕಟವಾಗುವ ಉತ್ತಮ ಕೃತಿಗೆ ಪ್ರತಿ ವರ್ಷವೂ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ' ನೀಡಲಾಗುತ್ತಿದೆ. ಈವರೆಗೆ 32 ಕೃತಿಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿ ಪುರಸ್ಕಾರವು 25 ಸಾವಿರ ರೂ. ಗೌರವಧನ, ಸ್ಮರಣಿಕೆ ಹಾಗೂ ಪ್ರಶಸ್ತಿ ಫಲಕಗಳನ್ನು ಕಾರ್ಯಕ್ರಮದಲ್ಲಿ ನೀಡಿ ಗೌರವಿಸಲಾಗುವುದು. ಪ್ರಶಸ್ತಿ ಪ್ರದಾನ ಸಮಾರಂಭದ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ಪ್ರಕಟಣಾ ವಿಭಾಗದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.








ಮಾಜಿ ಸಚಿವರೂ ಆದ ಕೆ.ಆರ್.ನಗರ ಶಾಸಕ ಸಾರಾ ಮಹೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ನಯನ ಕುಮಾರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸೆ ಹಾಗೂ ಡಯಾಬಿಟಿಕ್ ಹೃದಯ ತಪಾಸಣೆ ನಡೆಸಲಾಯಿತು. ಈ ವೇಳೆ ಪಿಯುಸಿ ಬೋರ್ಡ್ ಮಾಜಿ ನಿರ್ದೇಶಕ ಶ್ರೀಧರ್ ರಾಜ ಅರಸ್, ಹಾಪ್‌ಕಾಮ್ಸ್ ಅಧ್ಯಕ್ಷ ಅಣ್ಣೇಗೌಡ, ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ರೋಟರಿ ಸಂಸ್ಥೆ ಮಾಜಿ ಅಧ್ಯಕ್ಷ ಶ್ರೀನಿಧಿಮೂರ್ತಿ, ಎಸ್‌ಬಿಎಂ ಮಂಜು ಸ್ನೇಹ ಬಳಗದ ಅಧ್ಯಕ್ಷ ಮಾದೇವ್, ಕರಿಯಪ್ಪ, ಡಾ.ಚೇತನ್, ಡಾ.ಸುಜಾತ, ಡಾ.ಸ್ನೇಹ ಉಪಸ್ಥಿತರಿದ್ದರು.

ವಿದ್ಯುತ್ ಸ್ಪರ್ಶದಿಂದ ಗಾಯ: ಪರಿಹಾರ ಕಲ್ಪಿಸದ ಚೆಸ್ಕಾಂ, ಕ್ರಮ ಕೈಗೊಳ್ಳದ ಪೊಲೀಸರು

ಮೈಸೂರು,ಆ.10–ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದಾಗಿ ತಾನು ಹಾಗೂ ಪುತ್ರ ವಿದ್ಯುತ್ ಸ್ಪರ್ಶಕ್ಕೊಳಗಾಗಿ ತೀವ್ರವಾಗಿ ಗಾಯಗೊಂಡಿದ್ದರೂ ಚೆಸ್ಕಾಂ ಅಧಿಕಾರಿಗಳು

ಸಿಎಂಗೆ ಶಿಕ್ಷಕಿ ಪತ್ರ



ತನಗೆ ಪರಿಹಾರ ನೀಡಿಲ್ಲ. ಉದಯಗಿರಿ ಠಾಣೆ ಪೊಲೀಸರು ಚೆಸ್ಕಾಂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ಶಿಕ್ಷಕಿಯೊಬ್ಬರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಮೈಸೂರಿನ ಶಕ್ತಿನಗರ ನಿವಾಸಿಯಾಗಿರುವ ಶಿಕ್ಷಕಿ ವಿ.ಎಂ. ಮಂಜುಳಾ ಮತ್ತು ಅವರ ಪುತ್ರ ಹರ್ಷವರ್ಧನ (4) ಅವರುಗಳು ಕಳೆದ ಏ.12ರಂದು ಸಂಜೆ ಶಕ್ತಿನಗರ ಪಾರ್ಕ್‌ನಲ್ಲಿ ವಾಯುವಿಹಾರ ಮುಗಿಸಿ ಪಾರ್ಕ್‌ನಿಂದ ಹೊರ ಬರುವ ವೇಳೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ಪಾರ್ಕ್‌ನ ಕಬ್ಬಿಣದ ಗೇಟ್‌ಗೆ ತಗುಲಿದ್ದರಿಂದ ಅದು ಮಂಜುಳಾ ಮತ್ತು ಅವರ ಮಗನಿಗೆ ಸ್ಪರ್ಶಿಸಿ ಇಬ್ಬರೂ ತೀವ್ರವಾಗಿ ಗಾಯಗೊಂಡಿದ್ದಾರೆ.

ಇವರಿಬ್ಬರನ್ನೂ ಬೇರೆ ಬೇರೆ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ಮಂಜುಳಾ ಅವರಿಗೆ 15ರಿಂದ 16 ಹೊಲಿಗೆ ಹಾಕಲಾಗಿದೆ. ಈ ಅವಘಡದಿಂದಾಗಿ ಅವರಿಗೆ ಗಂಟಲು ಸಮಸ್ಯೆ ಉಂಟಾಗಿದೆ. ಅಂದಿನಿಂದ ಇಂದಿನವರೆಗೂ ಅವರು ಕೆಲಸಕ್ಕೂ ಹೋಗಲಾಗದೆ ವೈದ್ಯರ ಸಲಹೆ ಮೇರೆಗೆ ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ಮುಖ್ಯಮಂತ್ರಿಗಳಿಗೆ ರವಾನಿಸಿರುವ ಪತ್ರದಲ್ಲಿ ತಿಳಿಸಲಾಗಿದೆ.

ತನಗೆ ಮತ್ತು ಮಗನಿಗೆ ವಿದ್ಯುತ್ ಸ್ಪರ್ಶವಾಗುವ ಮುನ್ನ ಪಾರ್ಕ್ ಬಳಿ ಇರುವ 11 ಕೆ.ವಿ. ಟ್ರಾನ್ಸ್‌ಫಾರ್ಮರ್ ಸಿಡಿದು ವಿದ್ಯುತ್ ತಂತಿ ಕಡಿದು ಬಿದ್ದಿತ್ತು. ಆ ವೇಳೆ ವಿದ್ಯುತ್ ನಿಲುಗಡೆಯಾಗಿತ್ತು ಎಂದು ದೂರಿನಲ್ಲಿ ತಿಳಿಸಿರುವ ಮಂಜುಳಾ ಅವರು, ಈ ಸಂಬಂಧ ಸ್ಥಳೀಯರು ಜ್ಯೋತಿನಗರ ಚೆಸ್ಕಾಂ ಕಚೇರಿಗೆ ಕರೆ ಮಾಡಿ ತಿಳಿಸಿದರೂ, ಸ್ಥಳಕ್ಕೆ ಬಂದು ಪರಿಶೀಲನೆ ನಡೆಸದೇ ಅಧಿಕಾರಿಗಳು ಮತ್ತೆ ವಿದ್ಯುತ್ ಸಂಪರ್ಕ ನೀಡಿದ ಕಾರಣದಿಂದಾಗಿ ತಾನು ವಿದ್ಯುತ್ ಅವಘಡಕ್ಕೆ ಒಳಗಾಗಬೇಕಾಯಿತು ಎಂದು ಆರೋಪಿಸಿದ್ದಾರೆ.

ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ದೂರು ನೀಡಿದ್ದರೂ, ಚೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸದೇ ಕೇವಲ ಎನ್‌ಸಿಆರ್ ಮಾಡಿಕೊಂಡು ಚೆಸ್ಕಾಂ ಅಧಿಕಾರಿಗಳೊಂದಿಗೆ ರಾಜೀ ಸಂಧಾನ ಮಾಡಿಕೊಳ್ಳುವಂತೆ ತನಗೆ ಒತ್ತಾಯಿಸುತ್ತಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಅಲ್ಲದೇ ತನಗೆ ಗಂಭೀರ ಗಾಯವಾಗಿದ್ದು 15ರಿಂದ 16 ಹೊಲಿಗೆಗಳನ್ನು ಹಾಕಿದ್ದಲ್ಲಿ ತಾನು ಚಿಕಿತ್ಸೆ ಪಡೆದ ಖಾಸಗಿ ಆಸ್ಪತ್ರೆ ವೈದ್ಯರು ಗಂಭೀರ ಗಾಯ ಎಂದು ನಮೂದಿಸುವ ಬದಲು ಸಾಮಾನ್ಯ ಗಾಯ ಎಂದು ವರದಿ ನೀಡುವ ಮೂಲಕ ಅನ್ಯಾಯವೆಸಗಿದ್ದಾರೆ ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ಮೈಸೂರಿನ ಕೆಲವೆಡೆ 2 ದಿನ ನೀರು ವ್ಯತ್ಯಯ

ಮೈಸೂರು, ಆ.10–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ



2ನೇ ಹಾಗೂ 3ನೇ ಹಂತ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್ ಇಲಾಖೆಯವರು ತ್ರೈಮಾಸಿಕ ಕಾರ್ಯ ನಿರ್ವಹಣೆಯನ್ನು ಹಮ್ಮಿಕೊಂಡಿರುವುದರಿಂದ ಆ.12 ಮತ್ತು 13ರಂದು ನಗರದ ಕೆಲವೆಡೆ ನೀರು ಸರಬರಾಜುವಿನಲ್ಲಿ ವ್ಯತ್ಯಯ ಉಂಟಾಗಲಿದೆ.

ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42 ರಿಂದ 45, ವಾರ್ಡ್ ನಂ.47 ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಎನ್.ಆರ್. ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ ಎರಡನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಬೈಕ್‌ನಿಂದ ಬಿದ್ದು ಯುವಕ ಸಾವು

ಮೈಸೂರು, ಆ.10(ಆರ್‌ಕೆ)–ಬೈಕ್‌ನಿಂದ ಆಯತಪ್ಪಿ ಬಿದ್ದು ಯುವಕನೋರ್ವ ಸಾವನ್ನಪ್ಪಿರುವ ಘಟನೆ ಮೈಸೂರಿನ ನಂಜನಗೂಡು ರಸ್ತೆಯ ಉತ್ತನಹಳ್ಳಿ ಜಂಕ್ಷನ್‌ನಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ. ಮೈಸೂರಿನ ಗುಂಡೂರಾವ್‌ನಗರ ನಿವಾಸಿ ನಂಜುಂಡಯ್ಯ ಅವರ ಮಗ ಸೋಮ(21) ಸಾವನ್ನಪ್ಪಿದವರು ಬಂಡೀಪಾಳ್ಯದ ಎಪಿಎಂಸಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕ, ಮಂಗಳವಾರ ರಾತ್ರಿ 11.15 ಗಂಟೆ ವೇಳೆ ಗುಂಡೂರಾವ್‌ನಗರದ ಕಡೆಗೆ ಬರುತ್ತಿದ್ದಾಗ ಉತ್ತನಹಳ್ಳಿಗೆ ಹೋಗುವ ಜಂಕ್ಷನ್ ಬಳಿ ನಂಜನಗೂಡು ರಸ್ತೆಯಲ್ಲಿ ಆಯತಪ್ಪಿ ಬಿದ್ದಾಗ ತಲೆಗೆ ತೀವ್ರ ಗಾಯಗಳಾಗಿ ರಕ್ತಸ್ರಾವದಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಧಾವಿಸಿದ ಕೆ.ಆರ್.ಸಂಚಾರ ಠಾಣೆ ಪೊಲೀಸರು ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡರು.

ಸ್ಫೋಟಕ ಹಂತಕ್ಕೆ ಕಾಂಗ್ರೆಸ್‌ನಲ್ಲಿ ಭಿನ್ನಮತ

ಸಹಕಾರ ಸಚಿವರೂ ಆದ ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವ್ಯಂಗ್ಯೋಕ್ತಿ



ಮೈಸೂರು, ಆ.10 (ಎಂಟಿವೈ)– ರಾಜ್ಯ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆಯ ಕಿಡಿ ಇದೀಗ ಸ್ಫೋಟವಾಗುವ ಹಂತಕ್ಕೆ ತಲುಪಿದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಇಂದಿಲ್ಲಿ ಲೇವಡಿ ಮಾಡಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮೋತ್ಸವ ಕಾರ್ಯಕ್ರಮದ ನಂತರ ಕಾಂಗ್ರೆಸ್‌ನಲ್ಲಿ ಒಳಗೊಳಗೆ ಕಿಡಿಕಾರುವುದು ಹೆಚ್ಚಾಗುತ್ತಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಒಬ್ಬರಿಗೊಬ್ಬರು ಟೋಪಿ ಹಾಕಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಬೆಂಕಿ ಬಿದ್ದಿದ್ದು, ತಮ್ಮ ಬೆಂಕಿ ತಣ್ಣಗಾಗಿಸಿಕೊಳ್ಳುವ ಬದಲು ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳೆದ ಒಂದು ವರ್ಷದಿಂದ ಜನಮೆಚ್ಚುವ ಆಡಳಿತ ನೀಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಬದಲಾವಣೆ ಆಗುವುದಿಲ್ಲ. ವರ್ಷದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಎರಡು–ಮೂರು ಬಾರಿ ಭೇಟಿ ನೀಡಿರುವ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ. ರಾಜ್ಯದಲ್ಲಿ ಸರ್ಕಾರ ಉತ್ತಮವಾಗಿ ನಡೆಯುತ್ತಿದೆ. ಜಿಲ್ಲೆಯಲ್ಲಿಯೇ ನೆರೆ ಸಂತ್ರಸ್ತರಿಗೆ 15 ಕೋಟಿ ರೂ. ಹಣವನ್ನು ಈಗಾಗಲೇ ಮುಖ್ಯಮಂತ್ರಿಗಳು ನೀಡಿದ್ದಾರೆ. ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಇದನ್ನು ನೋಡಿದ ಅಮಿತ್ ಷಾ, ಜೆ.ಪಿ.ನಡ್ಡಾ ಸೇರಿದಂತೆ ಎಲ್ಲರೂ ಬೊಮ್ಮಾಯಿ ಅವರ ಆಡಳಿತಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಾನು ಸಿಎಂ ರೇಸ್‌ನಲ್ಲಿ ಇಲ್ಲ ಎಂದು ಹೇಳಿ ಕೈ ಮುಗಿದರು.

ಯಡಿಯೂರಪ್ಪ ರಾಜ್ಯದ ಪ್ರಶ್ನಾತೀತ ನಾಯಕರಾಗಿದ್ದಾರೆ. ಅವರ ಸಹಕಾರದಲ್ಲೇ ಪಕ್ಷ ಇಂದಿಗೂ ನಡೆಯುತ್ತಿದೆ. ಬೊಮ್ಮಾಯಿ ಅವರಿಗೆ ಸಲಹೆ, ಮಾರ್ಗದರ್ಶನ ನೀಡುತ್ತಿದ್ದಾರೆ. ಬಿಜೆಪಿಯಲ್ಲಿ ಯಾವುದೇ ವಿಧವಾದ ಬದಲಾವಣೆ ಇಲ್ಲ. ಇದೆಲ್ಲವೂ ಕಾಂಗ್ರೆಸ್ ಕಟ್ಟುಕಥೆಯಾಗಿದೆ ಎಂದರು. ದಸರಾ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನಿಸಿದಂತೆ ಈ ಬಾರಿ 15 ದಿನಕ್ಕೂ ಮುನ್ನವೇ ವಸ್ತು ಪ್ರದರ್ಶನ ಉದ್ಘಾಟಿಸುವ ಸಂಬಂಧ ಚರ್ಚೆ ನಡೆಯುತ್ತಿದೆ. ಉದ್ಘಾಟನೆಗೆ ಸಿದ್ಧತೆ ಮಾಡಲಾಗುವುದು. ಉಳಿದಂತೆ ಕಲಾವಿದರೂ ಸೇರಿ ಎಲ್ಲರಿಗೂ ಈ ಹಿಂದಿನ ದಸರೆ ಹಣ ನೀಡಲಾಗಿದೆ ಹಾಗೊಂದು ವೇಳೆ ಯಾರಿಗಾದರೂ ತಲುಪಿಲ್ಲ ಎನ್ನುವುದರ ಬಗ್ಗೆ ಇದುವರೆವಿಗೂ ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು.

ನಾಳೆಯಿಂದ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಕರಕುಶಲ, ಕೈಮಗ್ಗ ವಸ್ತುಪ್ರದರ್ಶನ



ಮೈಸೂರು, ಆ.10(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಆ.12ರಿಂದ 21ರವರೆಗೆ ಕಲಾ ವೈಭವ ಜಿಲ್ಲಾ ಮಟ್ಟದ ಗುಡಿ ಕೈಗಾರಿಕೆಗಳ ಕರಕುಶಲ, ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಹೆಚ್.ಆರ್. ಮಹದೇವಸ್ವಾಮಿ ತಿಳಿಸಿದ್ದಾರೆ.





ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸಹಯೋಗದಲ್ಲಿ ಈ ಮೇಳ ಆಯೋಜಿಸಲಾಗಿದ್ದು, ಆ.12ರ ಸಂಜೆ 4ಕ್ಕೆ ಉದ್ಘಾಟನೆಗೊಳ್ಳಲಿದೆ. ಮೇಳದಲ್ಲಿ ದೇಶದ ಗ್ರಾಮೀಣ ಕರಕುಶಲ, ಕೈಮಗ್ಗ ಉತ್ಪನ್ನಗಳು ಒಂದೇ ಸೂರಿನಡಿ ದೊರೆಯುವ ಅವಕಾಶ ಕಲ್ಪಿಸಲಾಗುತ್ತಿದೆ. ಸ್ವಸಹಾಯ ಗುಂಪುಗಳು, ಸ್ತ್ರೀಶಕ್ತಿ ಸಂಘಗಳು, ಖಾದಿ ಗ್ರಾಮೋದ್ಯೋಗಗಳು, ಸ್ವಯಂ ಉದ್ಯೋಗಿಗಳು ಪಾಲ್ಗೊಂಡು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿ, ಮಾರಾಟ ನಡೆಸಲಿದ್ದಾರೆ ಎಂದರು. ಮೇಳದಲ್ಲಿ ಆಕರ್ಷಕ ಕರಕುಶಲ ಸಿದ್ಧ ಉಡುಪುಗಳು, ಕೈಮಗ್ಗ ವಸ್ತ್ರಗಳು, ಕೈಮಗ್ಗದ ರೇಷ್ಮೆ ಮತ್ತು ಕಾಟನ್ ಸೀರೆಗಳು, ಆಟಿಕೆ, ಬೊಂಬೆಗಳು, ಜರಿ ಕಸೂತಿಗಳು, ಗೃಹ ಬಳಕೆ ವಸ್ತುಗಳು, ಗಿಡಮೂಲಿಕೆ ಔಷಧಿಗಳು, ಬುಡಕಟ್ಟು ಜನಾಂಗದ ಆಭರಣ, ಬಿದ್ರಿ, ಕುಂದಣ ಕಲೆ, ಕಂಚಿನ ವಿಗ್ರಹ, ಮೇಲುಹಾಸುಗಳು, ಹೊದಿಕೆಗಳು, ಚನ್ನಪಟ್ಟಣದ ಬೊಂಬೆಗಳು, ಮಣ್ಣಿನಿಂದ ತಯಾರಿಸಿದ ಹೂಜಿಗಳು ಇತ್ಯಾದಿ ಕೈಗೆಟಕುವ ಬೆಲೆಯಲ್ಲಿ ಸಿಗಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಉಪನಿರ್ದೇಶಕ ವರದೇಗೌಡ, ಯೋಜನಾಧಿಕಾರಿ ಶಿವನಂಜಸ್ವಾಮಿ ಇದ್ದರು.

ಮೈಸೂರಲ್ಲಿ ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ಮೇಯರ್ ಚಾಲನೆ

ಮೈಸೂರು,ಆ.10(ಆರ್‌ಕೆ)–1ರಿಂದ 19 ವರ್ಷದೊಳಗಿನ ಮಕ್ಕಳಿಗೆ ಮಾತ್ರೆ ವಿತರಿಸುವ ಮೂಲಕ ಮೈಸೂರಲ್ಲಿ ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಆ.10 ಮತ್ತು 17ರಂದು ದೇಶಾದ್ಯಂತ ಜಂತುಹುಳು ನಿವಾರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಅದರನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 1ರಿಂದ 19 ವರ್ಷದೊಳಗಿನ ಎಲ್ಲಾ ಮಕ್ಕಳನ್ನು ಗುರಿಯಾಗಿಸಿಕೊಂಡು ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ಮಕ್ಕಳಿಗೆ ಜಂತುಹುಳು ಮಾತ್ರೆಗಳನ್ನು ವಿತರಿಸುತ್ತಿವೆ.

ಮೈಸೂರಿನ ಮಹಾರಾಜ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಜಂತುಹುಳು ಮಾತ್ರೆ ವಿತರಿಸುವ ಮೂಲಕ ಮೇಯರ್ ಸುನಂದಾ ಪಾಲನೇತ್ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ಇತ್ತೀಚಿನ ಆಹಾರ ಪದ್ಧತಿ, ಜೀವನ ಶೈಲಿ, ಕಾರ್ಯ ಒತ್ತಡದಿಂದಾಗಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿದ್ದು, ಅಗತ್ಯ ಮುಂಜಾಗ್ರತೆ ಮೂಲಕ ರೋಗ ಬಾರದಂತೆ ತಡೆಗಟ್ಟುವುದು ಅತ್ಯವಶ್ಯ ಎಂದರು.

ಸರ್ಕಾರವು ಆರೋಗ್ಯ ಇಲಾಖೆ ಮೂಲಕ ಜನಜಾಗೃತಿ ಹಾಗೂ ಮಕ್ಕಳಲ್ಲಿ ಉಂಟಾಗುವ ರೋಗ ನಿಯಂತ್ರಿಸಲು ಕಾಲ ಕಾಲಕ್ಕೆ ಔಷಧಿ, ಚಿಕಿತ್ಸೆ ನೀಡುತ್ತಿದ್ದು, ಅದರ ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು. ಶಾಸಕ



ಎಲ್.ನಾಗೇಂದ್ರ, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಇತರರು ಉಪಸ್ಥಿತರಿದ್ದರು. ನೈರ್ಮಲ್ಯ ಕಾಪಾಡದೇ ಕೊಳಕು ಸ್ಥಿತಿಯ ಸ್ಥಳ, ಜಂತುಹುಳು ಸೋಂಕಿತ ಮಣ್ಣಿನ ಸಂಪರ್ಕದಿಂದ ಜಂತುಹುಳು ಕಾಣಿಸಿಕೊಳ್ಳಲಿದ್ದು, ಅದರಿಂದ ರಕ್ತಹೀನತೆ, ಅಪೌಷ್ಟಿಕತೆ, ಬೆಳವಣಿಗೆಯು ಕುಂಠಿತವಾಗಲಿದೆ. ಸೋಂಕಿನಿಂದ ದೂರವಿರಲು ಕೈಗಳ ಉಗುರುಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು, ಶುದ್ಧ ನೀರು, ಮುಚ್ಚಿಟ್ಟು ಆಹಾರ ಸೇವನೆ, ಶೌಚಾಲಯ ಬಳಸಿದ ನಂತರ ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳಬೇಕೆಂದು ಡಿಹೆಚ್‌ಓ ಸಲಹೆ ನೀಡಿದರು.

ತೊಳಸಿ ಜ್ಯುವೆಲ್ಸ್ ಮಳಿಗೆಗೆ ಮೈಸೂರು ವಾರಿಯರ್ಸ್ ತಂಡದ ನಾಯಕ, ಉಪನಾಯಕ ಭೇಟಿ



ಮೈಸೂರು ವಾರಿಯರ್ಸ್ ತಂಡದ ನಾಯಕ ಕರುಣ್ ನಾಯರ್ ಹಾಗೂ ಉಪನಾಯಕ ಶ್ರೇಯಸ್ ಗೋಪಾಲ್ ಮೈಸೂರಿನ ಅಶೋಕ ರಸ್ತೆಯ ತೊಳಸಿ ಜ್ಯುವೆಲ್ಸ್ ಮಳಿಗೆಗೆ ಭೇಟಿ ನೀಡಿದ್ದರು. ಮಹಾರಾಜ ಕಪ್ ಟಿ–20 ಕ್ರಿಕೆಟ್ ಪಂದ್ಯಾವಳಿಯ ಪ್ರಾಯೋಜಕರಲ್ಲಿ ತೊಳಸಿ ಜ್ಯುವೆಲ್ಸ್ ಕೂಡ ಒಂದಾಗಿದ್ದು, ಈ ಹಿನ್ನೆಲೆಯಲ್ಲಿ ಮಳಿಗೆಗೆ ಸೌಜನ್ಯ ಭೇಟಿ ನೀಡಿದ್ದರು. ಚಿತ್ರದಲ್ಲಿ (ಎಡದಿಂದ) ಅಶೋಕ್ ತೊಳಸಿ, ತಿಲಕ್ ತೊಳಸಿ, ತೇಜಸ್ ತೊಳಸಿ ಹಾಗೂ ಮನೋಹರ್ ಬಾಬು ಅವರನ್ನು ಕಾಣಬಹುದು.

ನಾಳೆ ಮೈಸೂರಿಗೆ ಶಿಕ್ಷಣಕ್ಕಾಗಿ ನಡಿಗೆ

ಮೈಸೂರು,ಆ.10(ಎಂಟಿವೈ)–ಭಾರತ ವಿದ್ಯಾರ್ಥಿ ಫೆಡರೇಷನ್ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಣಕ್ಕಾಗಿ ನಡಿಗೆ ಜಾಥಾ ಆ.12ರಂದು ಸಂಜೆ 4ಕ್ಕೆ ಮೈಸೂರಿಗೆ ಆಗಮಿಸುತ್ತಿದ್ದು, ಮಾನಸಗಂಗೋತ್ರಿ ಕುವೆಂಪು ಪ್ರತಿಮೆ ಬಳಿ ಜಾಥಾವನ್ನು ಬರಮಾಡಿಕೊಳ್ಳಲಾಗುತ್ತಿದೆ ಎಂದು ಹಿರಿಯ ರಂಗಕರ್ಮಿ ಜನಾರ್ಧನ್ (ಜನ್ನಿ) ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಥಾ ಮೈಸೂರಿಗೆ ಆಗಮಿಸಿದ ಬಳಿಕ ನಡೆಯುವ ಸಭೆಯಲ್ಲಿ ಎಸ್‌ಎಫ್‌ಐ ಅಖಿಲ ಭಾರತ ಅಧ್ಯಕ್ಷ ವಿ.ಪಿ.ಸಾನು, ಜಂಟಿ ಕಾರ್ಯದರ್ಶಿ ನಿತೀಶ್ ನಾರಾಯಣ್ ಮಾತನಾಡಲಿದ್ದಾರೆ. ಜಾಥಾವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿದ್ಯಾರ್ಥಿ ವಿರೋಧಿ ನೀತಿಗಳು, ರಾಷ್ಟ್ರೀಯ ಶಿಕ್ಷಣ ನೀತಿ, ಖಾಸಗೀಕರಣ, ವ್ಯಾಪಾರೀಕರಣ, ದೇಶದೊಳಗೆ ಶಿಕ್ಷಣದ ಕೇಸರೀಕರಣ ವಿರೋಧಿಸುತ್ತಿದೆ. ಅಲ್ಲದೆ ಇವುಗಳ ವಿರುದ್ಧ ದೇಶದಲ್ಲಿ ಚಳವಳಿ ಕಟ್ಟುವ ಉದ್ದೇಶ ಹೊಂದಿದೆ ಎಂದರು. ದೇಶದಲ್ಲಿ ಖಾಸಗೀಕರಣ, ಕೋಮುವಾದೀಕರಣದಿಂದಾಗಿ ಶಿಕ್ಷಣ ಕ್ಷೇತ್ರ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕೋವಿಡ್–19 ಸಂದರ್ಭದಲ್ಲಿ ರಾಷ್ಟ್ರವ್ಯಾಪಿ ಶಿಕ್ಷಣಕ್ಕೆ ಹಿನ್ನಡೆ ಉಂಟಾಗಿದೆ. ಸಂಪೂರ್ಣ ಡಿಜಿಟಲ್ ವಿಭಜನೆ, ಆನ್‌ಲೈನ್ ಶಿಕ್ಷಣವನ್ನು ಪ್ರವೇಶಿಸುವ ಲಿಂಗ ಅಂತರ, ಶೈಕ್ಷಣಿಕ ಹಕ್ಕುಗಳ ಒಳಗೊಳ್ಳುವಿಕೆ ಕೊರತೆ ಸೇರಿದಂತೆ ಹಲವು ಸಮಸ್ಯೆಗಳು ಶಿಕ್ಷಣವನ್ನು ಇನ್ನಷ್ಟು ಹದಗೆಡಿಸಿವೆ. ಹೀಗಾಗಿ ಇವುಗಳ ವಿರುದ್ಧ ಸರ್ಕಾರದ ಮೇಲೆ ಒತ್ತಡ ಹೇರುವುದಾಗಿ ತಿಳಿಸಿದರು. ವಿಜಯಕುಮಾರ್, ಯತೀಶ್, ಭರತ್, ಕೇಶವಮೂರ್ತಿ ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.08.2022 ಗುರುವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ : ಉಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘ:** ಸಾಮೂಹಿಕ ಯಜುರುಪಾಕರ್ಮ, ಸ್ಥಳ: ಶ್ರೀ ಮರುಳೇಶ್ವರ ದೇವಸ್ಥಾನ (ಶ್ರೀ ರಮಣ ಜ್ಞಾನ ಕೇಂದ್ರದ ಪಕ್ಕ), ಕುವೆಂಪುನಗರ, ಬೆಳಗ್ಗೆ 7.30ರಿಂದ.

■ **ಶ್ರೀ ವೈಷ್ಣವ ಸಭಾ :** ಯಜುರ್ ಉಪಾಕರ್ಮ, ಸ್ಥಳ: ಶ್ರೀ ವೈಷ್ಣವ ಸಭಾಂಗಣ, ಬೆಳಗ್ಗೆ 8.30ಕ್ಕೆ.

■ **ಅರ್ಚಕರ ಸಂಘ ಹಾಗೂ ವೀರಾಂಜನೇಯ ಸ್ವಾಮಿ ಟ್ರಸ್ಟ್:** ಯಜುರ್ ಉಪಾಕರ್ಮ, ನಿತ್ಯ ಸಂಧ್ಯಾವಂದನೆ ಪುಸ್ತಕ, ಗಾಯತ್ರಿ ಮಂತ್ರ ಪುಸ್ತಕ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸುಬ್ರಹ್ಮಣ್ಯ ತಂತ್ರಿ, ವಿಕ್ರಂ ಅಯ್ಯಂಗಾರ್, ಸ್ಥಳ: ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಆರ್ಯ ಸಮಾಜ:** ಶ್ರಾವಣಿ ಉಪಾಕರ್ಮ, ಯಜ್ಞೋಪವಿತ ಧಾರಣೆ, ಸ್ಥಳ: ಮೈಸೂರು ಆರ್ಯ ಸಮಾಜ, ದೇವರಾಜ ಮೊಹಲ್ಲಾ, ಬೆಳಗ್ಗೆ 10 ಗಂಟೆಗೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್:** ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಎ.ರಾಜಶೇಖರ್, ಭಾರತೀಯ ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷೆ ಸುಪ್ರಿಯಾ ಸಾಲಿಯಾನ್, ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಅಧ್ಯಕ್ಷತೆ: ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ.ಎಚ್.ಆರ್. ಮಹದೇವಸ್ವಾಮಿ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಔಷಧ ವಿಜ್ಞಾನ ಮಹಾವಿದ್ಯಾಲಯ:** ಆಜಾದಿ ಕಾ ಅಮೃತ ಮಹೋತ್ಸವ ಕುರಿತು ಸಂವಾದ, ಉದ್ಘಾಟನೆ: ಮಹಾವಿದ್ಯಾಲಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಮುಖ್ಯ ಅತಿಥಿಗಳು: ಕರ್ನಲ್ ರವಿ ಶಿರಹಟ್ಟಿ (ನಿವೃತ್ತ), ಗೌರವ ಅತಿಥಿಗಳು: ಸಂಸ್ಥೆ ಕಾರ್ಯದರ್ಶಿ ಎನ್.ಚಂದ್ರಶೇಖರ್, ಅಧ್ಯಕ್ಷತೆ: ಪ್ರಿನ್ಸಿಪಾಲ್ ಡಾ.ಹನುಮಂತಾಚಾರ್ ಜೋಷಿ, ಸ್ಥಳ: ಪ್ರೊ.ಚಿನ್ನಸ್ವಾಮಿಶೆಟ್ಟಿ ಕಾನ್ಫರೆನ್ಸ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಋಗ್ವೇದ ಉಪಾಕರ್ಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ


■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಪಿ.ಆರ್. ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವ ಲೋಗೋ ಬಿಡುಗಡೆ, ಕಾರ್ಯಕ್ರಮಕ್ಕೆ ಚಾಲನೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಲೋಗೋ ಬಿಡುಗಡೆ : ಹಿರಿಯ ಕಲಾವಿದ ಎನ್. ರಾಘವೇಂದ್ರಮೂರ್ತಿ, ಚಿತ್ರಕಲಾ ಪ್ರದರ್ಶನ ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಅಧ್ಯಕ್ಷತೆ : ಪಿಆರ್‌ಟಿ ಪ್ರತಿಷ್ಠಾನ ಅಧ್ಯಕ್ಷ ರಾಜಶೇಖರ ಕದಂಬ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 11.30ಕ್ಕೆ

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ :** ವೀರಶೈವ–ಲಿಂಗಾಯಿತ ವಧು–ವರರ ಸಮಾವೇಶ, ಸಾನ್ನಿಧ್ಯ : ಬಂಡಳ್ಳಿ ದೊಡ್ಡಮಠದ ಶ್ರೀ ಫಲಹಾರ ಪ್ರಭುದೇವ ಸ್ವಾಮಿಗಳು, ಉದ್ಘಾಟನೆ : ಹರಿಕಥಾ ವಿದ್ವಾಂಸ ಶಿವಕುಮಾರ ಶಾಸ್ತ್ರಿಗಳು, ಅಧ್ಯಕ್ಷತೆ : ಲಿಂಗಾಯಿತ ಗೌಡ ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಸ್ಥಳ : ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 2 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ವಿಶೇಷ ಪ್ರಚಾರೋಪನ್ಯಾಸ ಮಾಲೆ ಕಾರ್ಯಕ್ರಮ ಮತ್ತು ಹರ್ ಘರ್ ತಿರಂಗಾ ಪ್ರಯುಕ್ತ ರಾಷ್ಟ್ರಧ್ವಜ ವಿತರಣೆ, ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ರೈತಪರ ಹೋರಾಟಗಾರ ಪ್ರೊ.ಕೆ.ಸಿ.ಬಸವರಾಜು ಅವರಿಂದ ಉಪನ್ಯಾಸ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳ ವೃಂದಾವನ :** ಉಪಾಕರ್ಮ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ವೃಂದಾವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ –ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಗಾಯನ–ಜಯಂತಿ ವಿ.ಭಟ್ ಮತ್ತು ಎಂ.ಆರ್. ಸುಧಾ, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕ ಮರಳಿ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ನೈವೇಲಿ ಸಂತಾನ ಗೋಪಾಲನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಎ.ಎನ್.ಶೀಲಾ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 ಭಾವಗೀತೆ, 3.00 ರಾಗಲಹರಿ, ಪ್ರಸ್ತುತಿ–ಜಿ.ಪುಷ್ಪಲತಾ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಹಳ್ಳಿಹಾಡು, ಭಾಗವಹಿಸುವವರು ಬನ್ನೂರು ಕೆಂಪಮ್ಮ ಮತ್ತು ಸಂಗಡಿಗರು, 4.30 ರಸಮಂಜರಿ–ಸಂಸ್ಕೃತ ಎಂದರೆ ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್‌ರಿಂದ ಸೋದಾಹರಣ ಭಾಷಣ, 6.50 ಕೃಷಿರಂಗ–ಕಿಸಾನ್‌ವಾಣಿ–ಸಿರಿಧಾನ್ಯಗಳ ಕೃಷಿ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಬಿ.ಮಹೇಶ್‌ಕುಮಾರ್ ಮತ್ತು ಸೌಮ್ಯ ಅವರೊಂದಿಗೆ ಮಾತುಕತೆ, 9.00 ಯುವವಾಣಿ–ಗ್ರಾಮೀಣ ಆರೋಗ್ಯ ರಕ್ಷಣೆಯಲ್ಲಿ ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿಗಳ ಪಾತ್ರ ಕುರಿತು ಮಾತುಕತೆಯಲ್ಲಿ ಭಾಗವಹಿಸುತ್ತಾರೆ ಡಾ.ಹಿತೇಶ್‌ಪ್ರಸಾದ್, ಸಂಜನಾ, ರೇವಂತ್‌ಕುಮಾರ್ ಡಿ. ಮತ್ತು ರೋಜಾ, 10.00 ನಾಟಕ–ಆತ್ಮಸಾಕ್ಷಿಯ ಬೆನ್ನು ಹತ್ತಿ, ರಚನೆ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ

■ **ಸೌತ್ ಸೆಂಟ್ರಲ್ ಜೋನ್ ಕಲ್ಚರಲ್ ಸೆಂಟರ್, ನಾಗ್ಪುರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ರಂಗಾಯಣ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ:** ಆದಿವಾಸಿ ನೃತ್ಯ ಮಹೋತ್ಸವದ ಸಮಾರೋಪ ಸಮಾರಂಭ, ಉದ್ಘಾಟನೆ: ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಅಧ್ಯಕ್ಷತೆ : ಅಖಿಲ ಭಾರತ ಜಾನಪದ ಹಾಗೂ ಬುಡಕಟ್ಟು ಪರಿಷತ್ ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್ಯ, ಮುಖ್ಯ ಅತಿಥಿಗಳು : ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷ ಕೌಟಿಲ್ಯ ಆರ್. ರಘು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ರಂಗಾಯಣ ಉಪನಿರ್ದೇಶಕಿ ನಿರ್ಮಲ ಮಠಪತಿ, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ಗಂಗೋತ್ರಿ, ಸಂಜೆ 5.30ಕ್ಕೆ.

■ **ಸಂಸ್ಕೃತ ಭಾರತಿ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನಂ:** ಕೃಷ್ಣ ಯಜುರ್ವೇದ, ಸಂಸ್ಕೃತ ಸಪ್ತಾಹ–2022, ಡಾ.ಎನ್.ರುಕ್ಮಾಂಗದ ಅವರಿಂದ ದೈನಂದಿನ ಜೀವನದಲ್ಲಿ ಸಂಸ್ಕೃತ ಕುರಿತು ಪ್ರವಚನ, ಸ್ಥಳ: ವಿಶ್ವಂ ಸಭಾಂಗಣ, 8ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 5.50ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಕರ್ನಾಟಕ ಸಂಸ್ಕೃತಿ ಕುರಿತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು:** ಬೆಳದಿಂಗಳ ಸಂಗೀತ–245, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದುಷಿ ಶ್ರುತಿ ಎಸ್. ಭಟ್ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ –ವಯೋಲಿನ್, ವಿದ್ವಾನ್ ಕೆ.ವಿ.ರವಿಶಂಕರ ಶರ್ಮ–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನ ಅಭಿವೃದ್ಧಿ ಸಮಿತಿ :** ದೇವಸ್ಥಾನದ 32ನೇ ವಾರ್ಷಿಕೋತ್ಸವ, ಸಂಜೆ 7 ಗಂಟೆಯಿಂದ ಶ್ರೀ ಸತ್ಯನಾರಾಯಣ ಪೂಜೆ, ಕಥಾಶ್ರವಣ, ಮಂಗಳಾರತಿ, ತೀರ್ಥ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನ, ಬನ್ನಿಮಂಟಪ 1ನೇ ಹಂತ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ರಕ್ಷಾ ಬಂಧನ ಪಾವನ ಪರ್ವದ ಹಾರ್ದಿಕ ಶುಭಾಶಯಗಳು, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಸಂಜೆ 6.30ಕ್ಕೆ.

■ **ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನದ ಅಭಿವೃದ್ಧಿ ಸಮಿತಿ :** ದೇವಸ್ಥಾನದ 32ನೇ ವರ್ಷದ ವಾರ್ಷಿಕೋತ್ಸವ, ಶ್ರೀ ಸತ್ಯನಾರಾಯಣ ಪೂಜೆ, ಕಥಾ ಶ್ರವಣ, ಮಂಗಳಾರತಿ, ತೀರ್ಥ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಹುಡ್ಕೋ 1ನೇ ಹಂತ, ಬನ್ನಿಮಂಟಪ, ಸಂಜೆ 7 ಗಂಟೆಯಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ.ಹೆಚ್.ಬಿ.ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಸಿದ್ದಲಿಂಗಸ್ವಾಮಿ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ಗೆ ಎರಡು ಪ್ರತಿಷ್ಠಿತ ಪ್ರಶಸ್ತಿ



ಮೈಸೂರು, ಆ.10-ವಜ್ರ ಮತ್ತು ಆಭರಣ ಉದ್ಯಮದಲ್ಲಿ ಎರಡು ಪ್ರತಿಷ್ಠಿತ ಪ್ರಶಸ್ತಿಗಳನ್ನು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಪಡೆದಿದೆ.

48ನೇ ಇಂಡಿಯನ್ ಜೆಮ್ಸ್ ಅಂಡ್ ಜುವೆಲರಿ ಅವಾರ್ಡ್ (ಐಜಿಜೆಎ) ಮತ್ತು ಜೆಮ್ಸ್ ಅಂಡ್ ಜುವೆಲರಿ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ ಪ್ರಶಸ್ತಿಗಳು ಮಲಬಾರ್ ಗೋಲ್ಡ್‌ಗೆ ದೊರಕಿದ್ದು, ಮುಂಬೈನ ಗ್ರಾಂಡ್ ಹಯಾತ್‌ನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಭಾರತ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕರಾದ ಅಶರ್ ಓ. ಮತ್ತು ಮಲಬಾರ್ ಸಮೂಹದ ಉಪಾಧ್ಯಕ್ಷ ಕೆ.ಪಿ.ಅಬ್ದುಲ್ ಸಲಾಂ ಪ್ರಶಸ್ತಿ ಸ್ವೀಕರಿಸಿದರು.

48ನೇ ಐಜಿಜೆಎ-2021ರಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಗೆಲ್ಲುವುದು ಒಂದು ದೊಡ್ಡ ಗೌರವವಾಗಿದೆ. ಪ್ರಶಸ್ತಿಗಳು ನಮಗೆ ಉತ್ತೇಜನ ನೀಡುತ್ತವೆ. ನಮ್ಮ ಗ್ರಾಹಕರಿಗೆ ಸಮರ್ಥವಾಗಿ ಸೇವೆ ಸಲ್ಲಿಸಲು ನಮ್ಮ ಬದ್ಧತೆ ಹೆಚ್ಚಿಸಲು ಈ ಪ್ರಶಸ್ತಿಗಳು ಸಹಕಾರಿ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ.ಅಹಮ್ಮದ್ ತಿಳಿಸಿದ್ದಾರೆ.

ಮೈಸೂರು ಮಾನಸ ಗಂಗೋತ್ರಿ ಆವರಣದಲ್ಲಿ 'ಸ್ವಾತಂತ್ರ್ಯೋತ್ಸವ ಸಂಭ್ರಮ'

●ಕಣ್ಮನ ಸೆಳೆಯುವ ಅಲಂಕಾರ ●ಎತ್ತ ನೋಡಿದರೂ ತ್ರಿವರ್ಣ ಧ್ವಜ, ಬ್ಯಾನರ್, ಬಂಟಿಂಗ್ಸ್‌ಗಳೇ ರಾರಾಜಿಸುತ್ತಿವೆ ●ಹೆಜ್ಜೆ ಇಟ್ಟಲ್ಲೆಲ್ಲಾ ಸ್ವಾತಂತ್ರ್ಯ ನಡಿಗೆ ಅನುಭವ



ಮೈಸೂರು,ಆ.10(ಎಂಕೆ)-ಹಚ್ಚ-ಹಸಿರಿನ ಮಾನಸಗಂಗೋತ್ರಿ ಆವರಣದಲ್ಲಿ ಕಣ್ಮನ ಸೆಳೆಯುತ್ತಿದೆ 'ತ್ರಿವರ್ಣ'...!

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಡಗರ-ಸಂಭ್ರಮ ಮನೆ ಮಾಡಿದೆ. ಗಂಗೋತ್ರಿಯಲ್ಲಿ ಯಾವ ಕಡೆ ನೋಡಿದರೂ ಕೇಸರಿ, ಬಿಳಿ ಮತ್ತು ಹಸಿರಿನ ತ್ರಿವರ್ಣಗಳು ಕಂಗೊಳಿಸುತ್ತಿವೆ.

ಯುವ ಮನಸ್ಸುಗಳಲ್ಲಿ ರಾಷ್ಟ್ರ ಧ್ವಜದ ಬಗ್ಗೆ ಗೌರವ, ತ್ರಿವರ್ಣಗಳ ಮಹತ್ವ ತಿಳಿಸುವ ನಿಟ್ಟಿನಲ್ಲಿ ಆ.15ರ ಸ್ವಾತಂತ್ರ್ಯ ದಿನಕ್ಕೂ ಮುನ್ನವೇ ಅಲಂಕರಿಸಲಾಗಿದೆ. ಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಪ್ರತಿಯೊಂದು ಮರಕ್ಕೂ ಕೇಸರಿ, ಬಿಳಿ ಮತ್ತು ಹಸಿರು ಬಣ್ಣ ಬಳಿದಿದ್ದು, ಈಗಷ್ಟೇ ನಮಗೆ ಸ್ವಾತಂತ್ರ್ಯ ದೊರೆಯಿತೇನೋ ಎಂಬ ಸಂಭ್ರಮದ ಭಾವ ಮೂಡುವಂತೆ ಮಾಡಿದೆ. ಮಾನಸಗಂಗೋತ್ರಿಯ ಕ್ಯಾಂಪಸ್‌ನ ಮೂರು ಪ್ರವೇಶ ದ್ವಾರಗಳಿಂದ ಹಿಡಿದು ದೊಡ್ಡ ಗಡಿಯಾರದ ಸುತ್ತಲೂ, ರಸ್ತೆಗಳು ಹಾಗೂ ರಸ್ತೆ ಬದಿಯಲ್ಲಿರುವ ಮರಗಳಿಗೆ ಸಿಂಗರಿಸಲಾಗಿದೆ. ಕುವೆಂಪು ಪುತ್ಥಳಿಯ ಸುತ್ತಲೂ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ಸುಭಾಷ್ ಚಂದ್ರ ಬೋಸ್, ಜವಾಹರ್‌ಲಾಲ್ ನೆಹರು, ಸರ್ದಾರ್ ವಲ್ಲಭಭಾಯ್ ಪಟೇಲ್, ಬಾಲಗಂಗಾಧರ ತಿಲಕ್, ಸರೋಜಿನಿ ನಾಯ್ಡು, ಭಗತ್‌ಸಿಂಗ್ ಮುಂತಾದ ಮಹಾತ್ಮರ ಭಾವಚಿತ್ರಗಳ ಜೊತೆಗೆ ತ್ರಿವರ್ಣ ಧ್ವಜಗಳಿಂದ ಅಲಂಕರಿಸಲಾಗಿದೆ.

ಹೊಸ ಅನುಭವ: ಮಾನಸ ಗಂಗೋತ್ರಿ ಆವರಣದಲ್ಲಿ ತಿರುಗಾಡುವವರಿಗೆ ಸ್ವಾತಂತ್ರ್ಯ ಹಬ್ಬದ ಹೊಸ ಅನುಭವ ಉಂಟಾಗಲಿದೆ. ಗಿಡ-ಮರಗಳ ಜೊತೆಗೆ ಆಕರ್ಷಣೀಯ ತ್ರಿವರ್ಣ ಧ್ವಜ, ಪಟ್ಟಿ, ಬ್ಯಾನರ್, ಬಂಟಿಂಗ್ಸ್‌ಗಳು ಸೆಳೆಯುತ್ತಿವೆ. ಗ್ರಂಥಾಲಯ, ಮಾನವಿಕ ಅಧ್ಯಯನ ವಿಭಾಗದ, ರೌಂಡ್ ಕ್ಯಾಂಟೀನ್, ಎಂಕಾಂ ವಿಭಾಗಗಳ ಎದುರಿನ ರಸ್ತೆಯಲ್ಲಿ ಸಾಗುವುದೇ ವಿಶಿಷ್ಟ ಅನುಭವ ನೀಡುವಂತಿದೆ.

ರಾಷ್ಟ್ರಪ್ರೇಮ: ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿನ ರಾಷ್ಟ್ರಪ್ರೇಮವನ್ನು ಇಮ್ಮಡಿಗೊಳಿಸುವ ನಿಟ್ಟಿನಲ್ಲಿ ಐದು ದಿನಕ್ಕೂ ಮುಂಚಿತವಾಗಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆಯ ಸಿದ್ಧತೆ ನಡೆದಿದೆ. ಅದರ ಮೊದಲ ಭಾಗವಾಗಿ ಮಾನಸಗಂಗೋತ್ರಿ ಆವರಣವನ್ನು ತ್ರಿವರ್ಣಗಳಿಂದ ಅಲಂಕಾರ ಮಾಡಲಾಗಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಆ.13ರ ನಂತರ ಎಲ್ಲಾ ಅಧ್ಯಯನ ವಿಭಾಗಗಳಲ್ಲೂ ರಾಷ್ಟ್ರ ಧ್ವಜ ಹಾರಿಸಲಾಗುವುದು. ಸ್ವಾತಂತ್ರ್ಯ ಅಮೃತ ಮಹೋತ್ಸವದಂದು ಸುಮಾರು 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಒಂದೆಡೆ ಸೇರಿಸಿ ಸ್ವಾತಂತ್ರ್ಯ ಸಂಭ್ರಮದ ಆಚರಣೆ ನಡೆಸಿರುವ ಸಿದ್ಧತೆ ಇದಾಗಿದೆ ಎಂದು ಮಾಹಿತಿ ನೀಡಿದರು.

ಕೆ.ಆರ್.ಕ್ಷೇತ್ರದಲ್ಲಿ ಮಾಜಿ ಶಾಸಕ ಸೋಮಶೇಖರ್ 'ಸ್ವಾತಂತ್ರ್ಯ ನಡಿಗೆ'



ಮೈಸೂರು, ಆ.10(ಎಂಕೆ)-75ನೇ ಸ್ವಾತಂತ್ರ್ಯ ಅಮೃತಮಹೋತ್ಸವದ ಅಂಗವಾಗಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ 'ಕೆ.ಆರ್.ವಿಧಾನಸಭಾ ಕ್ಷೇತ್ರದಲ್ಲಿ ಸ್ವಾತಂತ್ರ್ಯ ನಡಿಗೆ' ಹಮ್ಮಿಕೊಳ್ಳಲಾಯಿತು. ನಗರದ ವಿವೇಕಾನಂದ ವೃತ್ತದ ಬಳಿ ಜಮಾವಣೆಗೊಂಡ ನೂರಾರು ಮಂದಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯ ನಿವಾಸಿಗಳು ಬಾವುಟಗಳನ್ನು ಹಿಡಿದು ಸ್ವಾತಂತ್ರ್ಯ ನಡಿಗೆಯಲ್ಲಿ ಪಾಲ್ಗೊಂಡರು. ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಮಾಲಾರ್ಪಣೆ ಮಾಡುವುದರೊಂದಿಗೆ ಆರಂಭವಾದ ನಡಿಗೆ ಡಿಪೋ ಸರ್ಕಲ್, ಶಾಂತಿಸಾಗರ್ ಕಾಂಪ್ಲೆಕ್ಸ್, ನೃಪತುಂಗ ರಸ್ತೆ, ಜ್ಞಾನಗಂಗಾ ಶಾಲೆ, ಅಕ್ಷಯ ಭಂಡಾರ್, ವಿಜಯಬ್ಯಾಂಕ್ ವೃತ್ತ, ಎ-ಟೂ ಜೆಡ್(ಶಿವಕುಮಾರಸ್ವಾಮಿ ವೃತ್ತ)ದ ಮೂಲಕ ಕುವೆಂಪು ಪ್ರತಿಮೆ ಇರುವ ಸ್ಥಳಕ್ಕೆ ಸಾಗಿ ರಾಷ್ಟ್ರಕವಿ ಕುವೆಂಪುರವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಸ್ವಾತಂತ್ರ್ಯ ನಡಿಗೆಯನ್ನು ಸಮಾಪ್ತಿಗೊಳಿಸಲಾಯಿತು. ಬಳಿಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದಂತೆ ಅರಾಜಕತೆಯಿಂದ ಕೂಡಿರುವ ಬಿಜೆಪಿ ಸರ್ಕಾರ ಕಿತ್ತು ಹಾಕಲು ಕಾಂಗ್ರೆಸ್ ಮತ್ತೆ ಹೋರಾಟ ಮಾಡಬೇಕಾಗಿದೆ. ನರೇಂದ್ರ ಮೋದಿ ನೇತೃತ್ವದಲ್ಲಿ ದೇಶ ಆರ್ಥಿಕ ದಿವಾಳಿಯಾಗುತ್ತಿದ್ದು, ನೆರೆಯ ಶ್ರೀಲಂಕಾ ದೇಶದ ಪರಿಸ್ಥಿತಿ ನಮ್ಮ ದೇಶದಲ್ಲಿಯೂ ನಿರ್ಮಾಣವಾಗುವ ಆತಂಕ ಎದುರಾಗಿದೆ. ಬಿಜೆಪಿ ಶ್ರೀಮಂತರಿಗೆ ದೇಶದ ಸಂಪತ್ತನ್ನೆಲ್ಲಾ ಮಾರುವಂತಹ ವ್ಯವಸ್ಥೆಯನ್ನು ಸೃಷ್ಟಿಸಿದೆ. ಆದ್ದರಿಂದ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಒಂದಾದಂತೆ ಮತ್ತೆ ಎಲ್ಲರೂ ಒಗ್ಗಟ್ಟಾಗಿ ಬಿಜೆಪಿ ಸರ್ಕಾರ ಕಿತ್ತುಹಾಕಬೇಕಾಗಿದೆ ಎಂದರು. ಮಾಜಿ ಶಾಸಕ ವಾಸು, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಮುಖಂಡರಾದ ಕೆ.ಹರೀಶ್ ಗೌಡ, ಕೆಪಿಸಿಸಿ ಕಾರ್ಯದರ್ಶಿ ಚಂದ್ರಮೌಳಿ, ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ಸದಸ್ಯರಾದ ವೀಣಾ, ಭಾಸ್ಕರ್, ಶ್ರೀನಾಥ್‌ಬಾಬು, ಡಾ.ಸುಜಾತರಾವ್, ಉಸ್ತುವಾರಿಗಳಾದ ಭಾಸ್ಕರ್‌ಗೌಡ, ಕುಮಾರ್‌ಗೌಡ, ಪಾಲಿಕೆ ಸದಸ್ಯ ಜೆ.ಗೋಪಿ ಮತ್ತಿತರರು ಉಪಸ್ಥಿತರಿದ್ದರು.

ಕರುಣ್ ನಾಯರ್ ಬ್ಯಾಟಿಂಗ್ ಅಬ್ಬರ: ಮೈಸೂರು ವಾರಿಯರ್ಸ್‌ಗೆ 10 ವಿಕೆಟ್‌ಗಳ ಅಮೋಘ ಜಯ

ಇಂದಿನ ಪಂದ್ಯ

ಸಮಯ ಮಧ್ಯಾಹ್ನ 3ಕ್ಕೆ
ಬೆಂಗಳೂರು ಬ್ಲಾಸ್ಟರ್ಸ್ / ಮಂಗಳೂರು ಯುನೈಟೆಡ್
ಸಂಜೆ 7ಕ್ಕೆ
ಮೈಸೂರು ವಾರಿಯರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್

ಹುಬ್ಬಳ್ಳಿ ಟೈಗರ್ಸ್
20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 140(ಲವ್ನಿತ್ ಸಿಸೋಡಿಯಾ 38, ತುಷಾರ್ ಸಿಂಗ್ 36, ಶ್ರೇಯಸ್ ಗೋಪಾಲ್ 22ಕ್ಕೆ 2)

ಮೈಸೂರು ವಾರಿಯರ್ಸ್
15.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 141(ಕರುಣ್ ನಾಯರ್ 91, ನಿಹಾಲ್ ಉಳ್ಳಾಲ್ 48)

ಶಿವಮೊಗ್ಗ ಸ್ಟ್ರೈಕರ್ಸ್
20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 155(ರೋಹನ್ ಕದಂ 64, ಸ್ಟಾಲಿನ್ ಹೂವರ್ 25, ವಿಜಯ್‌ಕುಮಾರ್ ವೈಶಾಕ್ 21ಕ್ಕೆ 3, ಎಂ.ವೆಂಕಟೇಶ್ 24ಕ್ಕೆ 3)

ಮಂಗಳೂರು ಯುನೈಟೆಡ್
18 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 158 (ನಿಖಿನ್ ಜೋಶ್ 85*, ಅಮಿತ್ ವರ್ಮಾ 41*, ರಾಜವೀರ್ ವಾಧ್ವಾ 28ಕ್ಕೆ 1, ಸ್ಟಾಲಿನ್ ಹೂವರ್ 10ಕ್ಕೆ 1)



ಮೈಸೂರು, ಆ.10(ಎಂಕೆ)- ನಾಯಕ ಕರುಣ್ ನಾಯರ್ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಮೈಸೂರು ವಾರಿಯರ್ಸ್ 10 ವಿಕೆಟ್‌ಗಳ ಅಮೋಘ ಜಯ ದಾಖಲಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಅಂಗಳದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯ 4 ದಿನ ಹುಬ್ಬಳ್ಳಿ ಟೈಗರ್ಸ್ ಹಾಗೂ ಮೈಸೂರು ವಾರಿಯರ್ಸ್ ನಡುವೆ ನಡೆದ 7ನೇ ಪಂದ್ಯದಲ್ಲಿ ಬೌಂಡರಿ, ಸಿಕ್ಸರ್‌ಗಳ ಅಬ್ಬರ ಜೋರಾಗಿತ್ತು.

ಹುಬ್ಬಳ್ಳಿ ಟೈಗರ್ಸ್ ನೀಡಿದ 141 ರನ್ ಗುರಿ ಬೆನ್ನತ್ತಿದ ಮೈಸೂರು ವಾರಿಯರ್ಸ್ ತಂಡದ ನಾಯಕ ಕರುಣ್ ನಾಯರ್ ಅಬ್ಬರ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಕೇವಲ 52 ಎಸೆತಗಳಲ್ಲಿ 11 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 91 ರನ್ ಚಚ್ಚಿದ ನಾಯರ್ ಇನ್ನೂ 4.1 ಓವರ್‌ಗಳು ಬಾಕಿಯಿರುವಂತೆಯೇ ತಂಡಕ್ಕೆ ಜಯ ತಂದುಕೊಟ್ಟರು. ನಾಯರ್ ಜೊತೆಗೂಡಿ ತಾಳ್ಮೆಯ ಆಟವಾಡಿದ ನಿಹಾಲ್ ಉಳ್ಳಾಲ್ 43 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ 48 ರನ್ ಗಳಿಸಿ ಅಜೇಯರಾಗುಳಿದರು. ಈ ಮೂಲಕ ಮೈಸೂರು ವಾರಿಯರ್ಸ್ ತಂಡ 10 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ಟೈಗರ್ಸ್ ಪರ ಲವ್ನಿತ್ ಸಿಸೋಡಿಯಾ 38, ತುಷಾರ್ ಸಿಂಗ್ 36, ಲಿಯಾನ್ ಖಾನ್ 26ರನ್ ಗಳಿಸಿದರೆ, ಕಳೆದ ಪಂದ್ಯದಲ್ಲಿ ಗೆಲುವಿನ ರೂವಾರಿಯಾಗಿದ್ದ ನಾಯಕ ಅಭಿಮನ್ಯು ಮಿಥುನ್ ಸೇರಿದಂತೆ ಮತ್ಯಾವ ಆಟಗಾರರಿಂದಲೂ ಉತ್ತಮ ಪ್ರದರ್ಶನ ಮೂಡಿ ಬರಲಿಲ್ಲ. ಅಂತಿಮವಾಗಿ ಹುಬ್ಬಳ್ಳಿ ಟೈಗರ್ಸ್ ತಂಡ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 140 ರನ್ ಕಲೆಹಾಕಲಷ್ಟೇ ಶಕ್ತವಾಯಿತು. ಮೈಸೂರು ವಾರಿಯರ್ಸ್ ಪರ ಅನುಭವಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ 2, ವಿದ್ಯಾಧರ್ ಪಾಟೀಲ್, ಆದಿತ್ಯ ಗೊಯಲ್, ಶುಬಾಂಗ್ ಹೆಗ್ಡೆ ತಲಾ ಒಂದೊಂದು ವಿಕೆಟ್ ಪಡೆದರು. ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿದ ಕರುಣ್ ನಾಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಮಂಗಳೂರು ಯುನೈಟೆಡ್‌ಗೆ ಜಯ




ಯುವ ಆಟಗಾರ ನಿಖಿನ್ ಜೋಶ್ ಅದ್ಭುತ ಬ್ಯಾಟಿಂಗ್ ನೆರವಿನಿಂದ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಮಂಗಳೂರು ಯುನೈಟೆಡ್ 8 ವಿಕೆಟ್‌ಗಳ ಜಯ ಗಳಿಸಿದೆ.

ಶಿವಮೊಗ್ಗ ಸ್ಟ್ರೈಕರ್ಸ್ ನೀಡಿದ 156ರನ್‌ಗಳ ಗುರಿ ಪಡೆದ ಮಂಗಳೂರು ಯುನೈಟೆಡ್ ಆರಂಭದಲ್ಲಿಯೇ ನಾಯಕ ಆರ್.ಸಮರ್ಥ್ (2) ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕುವಂತಾಯಿತು. ಬಳಿಕ 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ನಿಖಿನ್ ಜೋಸ್ ಅದ್ಭುತ ಪ್ರದರ್ಶನ ನೀಡಿದರು. 56 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಸಿಡಿಸಿದ ನಿಖಿನ್ 85 ರನ್‌ಗಳಿಸಿ ಅಜೇಯರಾಗಿ ಉಳಿದರು. ಮತ್ತೊಂಡೆದೆ ಅಮಿತ್ ವರ್ಮಾ ಅಜೇಯ 41 ರನ್, ಮ್ಯಾಕ್ನೀಲ್ ಹ್ಯಾಡ್ಲಿ ನೊರೊನ್ಹಾ 27ರನ್‌ಗಳ ಕಾಣಿಕೆ ನೀಡಿದರು. ಅಂತಿಮವಾಗಿ ಮಂಗಳೂರು ಯುನೈಟೆಡ್ ಇನ್ನೂ 12 ಎಸೆತಗಳು ಬಾಕಿಯಿರುವಂತೆಯೇ ಗೆಲುವಿನ ನಗೆ ಬೀರಿತು. ಶಿವಮೊಗ್ಗ ಸ್ಟ್ರೈಕರ್ಸ್ ಪರ ರಾಜವೀರ್ ವಾಧ್ವಾ, ಸ್ಟಾಲಿನ್ ಹೂವರ್ ತಲಾ ಒಂದೊಂದು ವಿಕೆಟ್ ಪಡೆದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಶಿವಮೊಗ್ಗ ಸ್ಟ್ರೈಕರ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿತು. ಆರಂಭಿಕ ಆಟಗಾರ ರೋಹನ್ ಕದಂ 49 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಸಹಿತ 64 ರನ್ ಕೊಡುಗೆ ನೀಡಿದರೆ, ಸ್ಟಾಲಿನ್ ಹೂವರ್ 25 ರನ್, ಶರತ್ ಬಿ.ಆರ್ 21 ರನ್ ಗಳಿಸಿದ್ದು ಬಿಟ್ಟರೆ ಮತ್ಯಾವ ಆಟಗಾರರಿಂದಲೂ ನಿರೀಕ್ಷಿತ ಪ್ರದರ್ಶನ ಮೂಡಿಬರಲಿಲ್ಲ. ಮಂಗಳೂರು ಯುನೈಟೆಡ್ ಪರ ವಿಜಯ್‌ಕುಮಾರ್ ವೈಶಾಕ್ ಮತ್ತು ಎಂ.ವೆಂಕಟೇಶ್ ತಲಾ 3 ವಿಕೆಟ್ ಪಡೆದು ಗಮನ ಸೆಳೆದರು. ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿದ ಯುವ ಆಟಗಾರ ನಿಖಿನ್ ಜೋಶ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದು ಸಿಎಂ ಬೊಮ್ಮಾಯಿ ಮೈಸೂರು, ಮಂಡ್ಯ ಪ್ರವಾಸ



ಮೈಸೂರು, ಆ.10- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ (ಗುರುವಾರ) ಮೈಸೂರು ಮತ್ತು ಮಂಡ್ಯ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ನಾಳೆ ಬೆಳಗ್ಗೆ 9.30ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬೆಳಗ್ಗೆ 10.20ಕ್ಕೆ ತಲುಪಲಿದ್ದಾರೆ. ಮಾನಸಗಂಗೋತ್ರಿಯಲ್ಲಿ ಬೆಳಗ್ಗೆ 10.40ಕ್ಕೆ ಮೈಸೂರು ವಿಶ್ವ ವಿದ್ಯಾನಿಲಯದ ವತಿಯಿಂದ ಆಯೋಜಿಸಿರುವ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಯುವಜನೋತ್ಸವ ಹಾಗೂ ವಿಶ್ವವಿದ್ಯಾನಿಲಯದ ಎಂಜಿನಿಯರಿಂಗ್ ಕಾಲೇಜು ಮತ್ತು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉದ್ಘಾಟಿಸಲಿದ್ದಾರೆ. 11.15ಕ್ಕೆ ಮಹಾರಾಜ ಕಾಲೇಜು ಮೈದಾನದಲ್ಲಿ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12.45ಕ್ಕೆ ಮೈಸೂರಿನಿಂದ ನಿರ್ಗಮಿಸಲಿರುವ ಮುಖ್ಯಮಂತ್ರಿಗಳು 1.30ಕ್ಕೆ ಮಂಡ್ಯ ತಲುಪಲಿದ್ದಾರೆ. ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಂಡ್ಯ ವಿಶ್ವವಿದ್ಯಾನಿಲಯ ಮತ್ತು ಜಿಲ್ಲಾಡಳಿತ ವತಿಯಿಂದ ಆಯೋಜಿಸಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯ ಜೀವನೋಪಾಯ ವರ್ಷಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಸಂಜೆ 4.15ಕ್ಕೆ ಭಾರತೀನಗರದಲ್ಲಿ ಭಾರತೀ ಎಜುಕೇಷನ್ ಟ್ರಸ್ಟ್ ವತಿಯಿಂದ ಆಯೋಜಿಸಿರುವ ಭಾರತೀ ವಜ್ರ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ನಂತರ 5.30ಕ್ಕೆ ರಸ್ತೆ ಮಾರ್ಗವಾಗಿ ಬೆಂಗಳೂರಿಗೆ ತೆರಳಲಿದ್ದಾರೆ.

ದಿಲ್ಲಿಯಿಂದ ಬಂದ ಶೆಟ್ಟರ್: ಬಿಎಸ್‌ವೈ ಭೇಟಿ!

ಬಿಜೆಪಿ ವಲಯದಲ್ಲಿ 'ಬದಲಾವಣೆ' ಮಾತಿಗೆ ಮತ್ತಷ್ಟು ರೆಕ್ಕೆಪುಕ್ಕ

ಬೆಂಗಳೂರು, ಆ.10(ಕೆಎಂಶಿ)-ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ವರಿಷ್ಠರು ದೆಹಲಿಗೆ ಕರೆಸಿಕೊಂಡು ಸಮಾಲೋಚನೆ ನಡೆಸಿರುವುದು ರಾಜ್ಯ ಬಿಜೆಪಿಯಲ್ಲಿ ಬಿರುಗಾಳಿ ಎಬ್ಬಿಸಿದೆ. ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಬದಲಾವಣೆಯಾಗಲಿದ್ದಾರೆ ಎಂದು ಪಕ್ಷದ ಆಂತರಿಕ ವಲಯದಲ್ಲಿ ದೊಡ್ಡ ಚರ್ಚೆ ನಡೆಸುತ್ತಿರುವ ಸಂದರ್ಭದಲ್ಲೇ ಶೆಟ್ಟರ್ ಕೇಂದ್ರ ನಾಯಕರನ್ನು ಭೇಟಿ ಮಾಡಿ ಹಿಂದಿರುಗಿದ್ದಾರೆ. ದೆಹಲಿಯಿಂದ ನಗರಕ್ಕೆ ಧಾವಿಸುತ್ತಿದ್ದಂತೆ ನೇರವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಸರ್ಕಾರಿ ನಿವಾಸ ಕಾವೇರಿಯಲ್ಲಿ ಭೇಟಿಯಾಗಿ ಚರ್ಚೆ ನಡೆಸಿದರು.


ಈ ಚರ್ಚೆ ಮುಗಿಯುತ್ತಿದ್ದಂತೆ ಯಡಿಯೂರಪ್ಪ ತಮ್ಮ ಕುಟುಂಬ ಪರಿವಾರ ಸಮೇತ ಮಂತ್ರಾಲಯಕ್ಕೆ ತೆರಳಿದರು. ಪ್ರತಿಪಕ್ಷದವರಿಗಿಂತ ಬಿಜೆಪಿಯಲ್ಲೇ ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾಗುತ್ತದೆ. ಸ್ವಾತಂತ್ರ್ಯ ದಿನಾಚರಣೆಯಂದು ಬೊಮ್ಮಾಯಿ ಅವರು ರಾಷ್ಟ್ರದ ತ್ರಿವರ್ಣ ಧ್ವಜಾರೋಹಣ ಮಾಡಿದ ನಂತರ ಯಾವುದೇ ಕ್ಷಣದಲ್ಲಿ ಅಧಿಕಾರದಿಂದ ಕೆಳಗಿಳಿಯಲಿದ್ದಾರೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಬೆಂಗಳೂರು ಮತ್ತು ದೆಹಲಿಯಲ್ಲಿ ನಾಯಕತ್ವದ ಬದಲಾವಣೆಯ ಗುಸುಗುಸು ಆರಂಭವಾಗುತ್ತಿದ್ದಂತೆ ಕಾಂಗ್ರೆಸ್, ಕರ್ನಾಟಕದಲ್ಲೇ ಮೂರನೇ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಮಾಡಿರುವ ಟ್ವೀಟ್ ಬಿಜೆಪಿಗೆ ಭಾರೀ ಮುಜುಗರ ತಂದಿದೆ. ಈ ಬಗ್ಗೆ ಬಿಜೆಪಿ



ರಾಷ್ಟ್ರೀಯ ಇಲ್ಲವೇ ರಾಜ್ಯ ಘಟಕ ಸ್ಪಷ್ಟನೆ ನೀಡಿಲ್ಲ. ಆದರೆ, ಬೊಮ್ಮಾಯಿ ಸಂಪುಟದ ಸಹೋದ್ಯೋಗಿಗಳು ಮಾತ್ರ ತಮ್ಮ ನಾಯಕನನ್ನು ಬಲವಾಗಿ ಸಮರ್ಥಿಸಿಕೊಂಡು ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಸಾರಿ ಸಾರಿ ಹೇಳುತ್ತಿದ್ದಾರೆ. ಬೊಮ್ಮಾಯಿ ಅಧಿಕಾರ ವಹಿಸಿಕೊಂಡ ಆರು ತಿಂಗಳು ಕಳೆಯುತ್ತಿದ್ದಂತೆ ಅವರ ನಾಯಕತ್ವ ಬದಲಾವಣೆಯ ವಿಷಯ ಪದೇ ಪದೇ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಲಯದಲ್ಲಿ ಕೇಳಿಬರುತ್ತಿದೆ.

ಕೋವಿಡ್-19 ಸೋಂಕಿಗೆ ಒಳಗಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತ್ರ ಪಕ್ಷದ ವಲಯದಲ್ಲಿ ಕೇಳಿಬರುತ್ತಿರುವ ಮಾತುಗಳಿಗೆ ಪ್ರತಿಕ್ರಿಯೆ ನೀಡದೇ ಮುಗುಮ್ಮಾಗಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಕಳೆದ ವಾರ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡು ಹಿಂದಿರುಗಿದ ನಂತರ ನಾಯಕತ್ವ ಬದಲಾವಣೆ ವಿಚಾರ ಗರಿಗೆದರಿದೆ. ಅಮಿತ್ ಷಾ ಮತ್ತು ಯಡಿಯೂರಪ್ಪ ಭೇಟಿ ಮಾಡಿದ್ದರ ಬಗ್ಗೆ ಪುತ್ರ ವಿಜಯೇಂದ್ರ ರಾಜ್ಯ ಬಿಜೆಪಿಯ ಬಗ್ಗೆ ಕೇಂದ್ರ ನಾಯಕರಿಗೆ ವಿಸ್ತಾರವಾಗಿ ಮಾಹಿತಿ ನೀಡಿದ್ದಾರೆ ಎಂಬ ಹೇಳಿಕೆ ಪ್ರಸಕ್ತ ವಿಚಾರಕ್ಕೆ ಮತ್ತಷ್ಟು ಪುಷ್ಟಿ ಕೊಟ್ಟಿದೆ.

ಬೊಮ್ಮಾಯಿ ಬದಲಾವಣೆ ಇಲ್ಲ



ಬೆಂಗಳೂರು, ಆ.10(ಕೆಎಂಶಿ)-ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬದಲಾವಣೆ ಇಲ್ಲ ಎಂದಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷರು ಬದಲಾವಣೆಯಾಗಲಿದ್ದಾರೆ ಎಂದು ತಿಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಭೇಟಿ ಮಾಡಿ ತೆರಳಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಅವಧಿ ಮುಗಿಯುತ್ತಿದೆ. ಅವರಿಂದ ತೆರವಾಗುವ ಸ್ಥಾನಕ್ಕೆ ಹೊಸಬರ ನೇಮಕಾತಿ ಆಗಲಿದೆ. ಮುಖ್ಯಮಂತ್ರಿ ಸ್ಥಾನದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಮುಂದೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರದಂತೆ ತಡೆಯುವುದು ಮತ್ತು ಬಿಜೆಪಿ ಮತ್ತೆ ಅಧಿಕಾರಕ್ಕೆ ತರುವುದು ನಮ್ಮ ಮುಂದಿರುವ ಗುರಿ. ಪಕ್ಷ ಮರಳಿ ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿಯವರು ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಹೇಳಿದರು. ಶೆಟ್ಟರ್ ದೆಹಲಿಗೆ ಹೋಗಿ ಬಂದ ನಂತರ ಕುಶಲೋಪರಿ ಚರ್ಚೆಗಷ್ಟೇ ಬಂದಿದ್ದರು. ಅದರಲ್ಲಿ ರಾಜಕೀಯವೇನಿಲ್ಲ. ನಾನು ಕುಟುಂಬ ಸಮೇತ ಮಂತ್ರಾಲಯಕ್ಕೆ ತೆರಳಿ, ಸ್ವಾಮಿಗಳ ದರ್ಶನ ಮಾಡಿ ಹಿಂದಿರುಗುವುದಾಗಿ ಕಾರು ಹತ್ತಿದರು.

ಎಲ್ಲಿದಿಯಪ್ಪಾ ಕುಮಾರಸ್ವಾಮಿ...!?

ಮಾಜಿ ಸಿಎಂ ಕುಮಾರಸ್ವಾಮಿ-ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ವಾಕ್ಸಮರ

ಬೆಂಗಳೂರು, ಆ.10(ಕೆಎಂಶಿ)-ಮಾಜಿ ಮುಖ್ಯ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ್‌ನಾರಾಯಣ್ ನಡುವಿನ ವಾಕ್ಸಮರ ತಾರಕಕ್ಕೇರಿದೆ. ಉಭಯ ನಾಯಕರು ಸರಣಿ ಟ್ವೀಟ್ ಮಾಡಿ, ಒಬ್ಬರನ್ನೊಬ್ಬರು ಕಾಲೆಳೆದಿದ್ದಾರೆ. ಅಶ್ವತ್ಥ್‌ನಾರಾಯಣ್, ಎಲ್ಲಿದ್ದಿಯಪ್ಪಾ ಕುಮಾರಸ್ವಾಮಿ ಎಂದು ಕೇಳಿದ್ದೆ ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣವಾಗಿದೆ.

'ನಕಲಿ ಸರ್ಟಿಫಿಕೇಟ್ ಶೂರ' ನನ್ನ ಹುಡುಕುತ್ತಿದ್ದಾರೆ!

ಸಚಿವ ಅಶ್ವತ್ಥ್‌ನಾರಾಯಣ್ ಹೇಳಿಕೆಗೆ ಗರಂ ಆಗಿರುವ ಕುಮಾರಸ್ವಾಮಿ, ಟ್ವೀಟ್‌ನಲ್ಲಿ 'ನಕಲಿ ಸರ್ಟಿಫಿಕೇಟ್ ರಾಜ @ ನಕಲಿ ಸರ್ಟಿಫಿಕೇಟ್ ಶೂರ' ನನ್ನನ್ನು ಹುಡು ಕುತ್ತಿದ್ದಾರೆ. ಎಲ್ಲಿದ್ಯಪ್ಪಾ ಕುಮಾರ ಸ್ವಾಮಿ? ಎಂದು ಕೇಳಿದ್ದಾರೆ. ಸದನದಲ್ಲೂ ಕಾಣಿಸಿಲ್ಲವಂತೆ, ರಾಮ ನಗರದಲ್ಲೂ ಕಂಡಿಲ್ಲವಂತೆ. ಕಣ್ಣಿಗೆ ಕಾಮಾಲೆ ಯಾದರೂ ಬಂದಿರಬೇಕು. ಜಾಣ ಕುರುಡಾದರೂ ಇರಬೇಕು ಎಂದು ಅಶ್ವತ್ಥ್‌ನಾರಾಯಣ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

ಕರಾವಳಿ ಕೊಲೆಗಳು, ಮಳೆ-ನೆರೆ ಚರ್ಚೆಗೆ ಅಧಿವೇಶನ ಕರೆಯಬೇಕೆಂದು ಒತ್ತಾಯಿಸಿದ್ದೇನೆ ನಿಜ. ಉನ್ನತ ಶಿಕ್ಷಣ ಸಚಿವರಿಗೇಕೆ ಉರಿ, ಉನ್ನತ ಶಿಕ್ಷಣದ ಹುಳುಕು ಹೊರ ಬಂದಾವೆಂಬ ಭಯವೇ. ನನ್ನಲ್ಲೂ ದಾಖಲೆಗಳಿವೆ. ಬಿಚ್ಚಿದರೆ ಅವೇ 'ಸರ್ಟಿಫಿಕೇಟ್ ಕೋರ್ಸ್'ಗಿಂತ ಬೃಹತ್ ಚಾಪ್ಟರ್-1, ಚಾಪ್ಟರ್-2, ಚಾಪ್ಟರ್-3 ಆಗುತ್ತವೆ. ಬಿಚ್ಚಲೇ ಎಂದು ಗುಡುಗಿದ್ದಾರೆ. ಕಲಾಪವೆಂದರೆ ಮೈ ಬೆಚ್ಚಗಾಗುತ್ತಾ ಉನ್ನತ ಶಿಕ್ಷಣ ಸಚಿವರೇ, ನಿಮ್ಮ ಕೌಶಲ್ಯತೆ ಗೊತ್ತಿದೆ. ಅಕ್ರಮ ಮುಚ್ಚಿಕೊಳ್ಳಲು ಅಕ್ರಮದ ದಾಖಲೆಗಳಿದ್ದ ಬಿಬಿಎಂಪಿ ಕಟ್ಟಡಕ್ಕೇ ಬೆಂಕಿ ಹಾಕಿಸಿದ್ದಾರೆ. ಆಪರೇಷನ್ ಕಮಲದಲ್ಲೂ ಕುಶಲತೆ, ಕೋಟಿ ಕೋಟಿ ಹಣ ತುಂಬಿಸಿಕೊಂಡು ಹೋಗಿ ಶಾಸಕರ ಮನೆಗಳಲ್ಲಿ ಇಟ್ಟು ಬರುವುದಾ, ಕೌಶಲ್ಯ ಮಂತ್ರಿಯಾಗಿದ್ದಕ್ಕೂ ಸಾರ್ಥಕ ಎಂದು ಹೆಚ್‌ಡಿಕೆ ವ್ಯಂಗ್ಯವಾಡಿದ್ದಾರೆ.

ನನ್ನ ಸರ್ಕಾರವನ್ನು ತೆಗೆಯಲು ಸಮಾಜಘಾತುಕ ಶಕ್ತಿಗಳ ಜೊತೆ ಕೈ ಮಿಲಾಯಿಸಿದ್ದು, ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರ ಜತೆ ಶಾಮೀಲಾಗಿದ್ದು, ಹಣದ ಹೊಳೆ ಹರಿಸಿದ್ದು ಎಲ್ಲವೂ ಗೊತ್ತಿದೆ. ಧೈರ್ಯ ಇದ್ದರೆ ಬಹಿರಂಗ ಚರ್ಚೆಗೆ ಬನ್ನಿ, ಬಿಚ್ಚಿಡಬೇಕು ಎಂದರೆ ಎಲ್ಲವನ್ನೂ ಬಿಚ್ಚಿಡುತ್ತೇನೆ. ಪತ್ಯ ಪರಿಷ್ಕರಣೆ ಮಾಡಿದಿರಲ್ಲ. ದಾದಿಯರ ನಕಲಿ ಸರ್ಟಿಫಿಕೇಟ್ ಸೃಷ್ಟಿ ಹೇಗೆ, ಆಪರೇಷನ್ ಕಮಲ ಮಾಡುವುದು ಹೇಗೆ,



ಕದ್ದುಮುಚ್ಚಿ ಹಣ ಸಾಗಿಸಿ ಶಾಸಕರ ಮನೆಗಳಲ್ಲಿ ಇಟ್ಟು ಬರುವುದು ಹೇಗೆ ಇದೆಲ್ಲವನ್ನು ಪತ್ಯದಲ್ಲಿ ಸೇರಿಸಿದ್ದಿದ್ದರೆ ಮುಂದಿನ ಯುವಜನರಿಗೂ ನಿಮ್ಮಂತೆಯೇ ಆಗುವ ಭಾಗ್ಯ ಸಿಗುತ್ತಿತ್ತು ಅಲ್ಲವೇ ಆಪರೇಷನ್ ಅಶ್ವತ್ಥ್ ನಾರಾಯಣ ಎಂದು ಹೆಚ್‌ಡಿಕೆ ಕಿಡಿಕಾರಿದ್ದಾರೆ.

ಆಪರೇಷನ್ ಕಮಲ ಮಾಡಿದ್ದಕ್ಕೆ ದಕ್ಷಿಣೆಯಾಗಿ ಉಪಮುಖ್ಯಮಂತ್ರಿ ಆದಿರಿ. ಅದೂ ಹೋಗಿ ಕೊನೆಗೆ ಉನ್ನತ ಶಿಕ್ಷಣ ಮಂತ್ರಿಗಿರಿಯಷ್ಟೇ ಉಳಿಯಿತು. ಬೊಮ್ಮಾಯಿ ಸಂಪುಟ ಸೇರ್ಪಡೆ ಆದ್ಯತಾ ಪಟ್ಟಿಯಲ್ಲಿ ತಾವೆಷ್ಟು ದೂರ ಇದ್ದೀರಿ ಎನ್ನುವುದು ಗೊತ್ತಿದೆ. ಆಗೇಕೆ ನೀವು ಠಮ ಠಮ ಠಮ ಸದ್ದು ಮಾಡಲಿಲ್ಲ. ಆಗ ಎಲ್ಲಿದ್ದಪ್ಪ ಅಶ್ವತ್ಥ್‌ನಾರಾಯಣ ಎಂದು ವ್ಯಂಗ್ಯವಾಡಿದ್ದಾರೆ. ಜೆಡಿಎಸ್ ಕಂಪನಿ ಎನ್ನುತ್ತೀರಿ. ನಿಮ್ಮ ಕಂಪನಿಗಳ ಕಥೆ ಬಿಚ್ಚಬೇಕೇ. ಹೊರಗೆ ಸಾಚಾತನ, ಒಳಗೆ ಸೋಗಲಾಡಿತನ. ಎರಡು ತಲೆಯ ಕುಶಲತೆ ಯನ್ನು ಎಲ್ಲಿಂದ ಕಲಿತಿರಿ. ಸಂಘದಿಂದ ಬಂದ ಸಂಸ್ಕಾರವೇ ಅಥವಾ ತಮ್ಮ ಹಿನ್ನೆಲೆಯೇ ಇದ್ಯಾ, ನಿಮ್ಮ ನೈಜ ಹಿನ್ನೆಲೆಯ ಪುರಾಣ ಗೊತ್ತಿದ್ದವರಿಗೆ ಇದೇನು ಅಚ್ಚರಿಯಲ್ಲ ಬಿಡಿ. ಜೆಡಿಎಸ್ ಕಂಪನಿ ಇರಲಿ, ನಿಮ್ಮ ಕಂಪನಿಗಳ ಬಗ್ಗೆಯೇ ಕುಮಾರಸ್ವಾಮಿಗೆ ಚೆನ್ನಾಗಿ ಗೊತ್ತು ಎಂಬುದನ್ನು ಮರೆಯಬೇಡಿ. ಚುನಾವಣೆ ಬರಲಿ, ಕಂಪನಿ ಗಳ ಕಲರವ ಮತ್ತು ಠಮ ಠಮ ಠಮ ಸದ್ದು ಏನೆಂಬುದನ್ನು ರಾಮನಗರದಲ್ಲಿ ಕೇಳುವಂತೆ ಮಾಡುತ್ತೇನೆ ಎಂದು ಹೆಚ್‌ಡಿಕೆ ಸವಾಲು ಹಾಕಿದ್ದಾರೆ.

ಬ್ಲಾಕ್‌ಮೇಲ್ ಕುಮಾರಸ್ವಾಮಿ ದಾಖಲೆ ಇದ್ದರೆ ಬಹಿರಂಗಪಡಿಸು...

ಕುಮಾರಸ್ವಾಮಿ ಅವರ ಟ್ವೀಟ್‌ಗೆ ಅಷ್ಟೇ ಖಾರ



ವಾಗಿ ಪ್ರತಿ ಟ್ವೀಟ್ ಮಾಡಿರುವ ಅಶ್ವತ್ಥ್‌ನಾರಾಯಣ್, ಕೆಂಗಲ್ ಹನುಮಂತಯ್ಯ ಅವರು ಭವ್ಯ ವಿಧಾನ ಸೌಧ ಕಟ್ಟಿಕೊಟ್ಟರೂ ತಾಜ್ ವೆಸ್ಟ್ ಎಂಡ್‌ನಲ್ಲಿ ಕುಳಿತು ಸರ್ಕಾರ ನಡೆಸಿದ ಕುಮಾರಸ್ವಾಮಿ ಅವರೇ, ಅಂದು ತಮ್ಮನ್ನು ವಿಧಾನಸೌಧದಲ್ಲಿ ಹುಡುಕಿದರೆ ಸಿಗಲಿಲ್ಲ. ಕಷ್ಟ ಹೇಳಿಕೊಳ್ಳಲು ಬಂದ ಜನತೆಗೆ ತಾಜ್ ವೆಸ್ಟ್‌ಎಂಡ್ ಒಳಗೆ ಬಿಡಲಿಲ್ಲ. ಎಲ್ಲಿದ್ದೀರಿ ಎಂದು ಜನ ಕೇಳಿದಾಗ ಉತ್ತರಿಸಲಿಲ್ಲ ಎಂದು ಟೀಕಿಸಿದ್ದಾರೆ.

ಜನರೇ ಬಹಿಷ್ಕಾರ ಹಾಕಿ ಅಧಿಕಾರದಿಂದ ದೂರ ವಿಟ್ಟಿದ್ದ ಕಾಂಗ್ರೆಸ್ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು ತಂತಿಯ ಮೇಲೆ ನಡೆಯುತ್ತಿದ್ದೇನೆ ಎನ್ನುವಾಗ ನಾಡಿನ ಜನತೆಗೆ ಮೋಸ ಮಾಡಿದ್ದೇನೆಂಬ ಪಾಪ ಪ್ರಜ್ಞೆ ಕಾಡಲಿಲ್ಲವೇ? ಕುರ್ಚಿಯಾಸೆಗೆ ಕಳ್ಳರ ಜೊತೆಗೂ ಸೇರುತ್ತೇನೆಂಬುದು ಸಾಬೀತುಪಡಿಸಿದ ತಮ್ಮ ಕಳ್ಳಾಟಗಳನ್ನು ಎಷ್ಟು ದಿನ ಬಚ್ಚಿಡಬಲ್ಲಿರಿ ಎಂದು ಕೇಳಿದ್ದಾರೆ. ಗೆದ್ದಿದ್ದು ಮೂರು ಮತ್ತೊಂದು ಸೀಟ್ ಆದರೂ ಗೆದ್ದಲು ಕಟ್ಟಿದ ಹುತ್ತದಲ್ಲಿ ಸೇರಿಕೊಂಡ ಹಾವಿನಂತೆ ಕಳ್ಳದಾರಿಯಲ್ಲಿ ಮುಖ್ಯಮಂತ್ರಿ ಆದದ್ದು ಯಾರು? ಅಧಿಕಾರ ದುರ್ಬಳಕೆ ಮಾಡಿಕೊಂಡು ಆದಿಚುಂಚನಗಿರಿ ಶ್ರೀಗಳ ಫೋನ್ ಕದ್ದಾಲಿಕೆ ಮಾಡಿದ ಕುಮಾರಸ್ವಾಮಿ ಅವರನ್ನು ಎಲ್ಲಿದ್ದೀರಿ ಎಂದು ಕೇಳಿದರೆ ವಿಷ ಸರ್ಪದಂತೆ ಬುಸುಗುಡುವುದೇಕೆ ಎಂದು ಟ್ವೀಟಿಸಿದ್ದಾರೆ. ಕುಮಾರಸ್ವಾಮಿಯ ಬುಟ್ಟಿಯಲ್ಲಿ ಯಾವ ಹಾವಿದೆ ಎಂದು ನಾಡಿನ ಜನತೆಗೇ ಗೊತ್ತಿದೆ. ಸುಮ್ಮನೆ ಹಾವಿದೆ ಹಾವಿದೆ ಎಂದು ಊರೆಲ್ಲಾ ಡಂಗುರ ಸಾರಿ ಹೆದರಿಸುವ ತಂತ್ರವೇಕೆ, ಎಲ್ಲಿಟ್ಟಿದ್ದೀರಿ ನಿಮ್ಮ ದಾಖಲೆ ಗಳನ್ನು ಗೆದ್ದಲು ಹಿಡಿಯುವ ಮುನ್ನ ಬಹಿರಂಗ ಪಡಿಸಿ ಸ್ವಾಮಿ. ನೀವು ಈವರೆಗೆ ಹೇಳಿದ ಸುಳ್ಳುಗಳನ್ನು ಎಣಿಸಲು ಸಾಧ್ಯವೇ ಎಂದು ಕೇಳಿದ್ದಾರೆ.

ಕುಟುಂಬ ರಾಜಕಾರಣ ಮಾಡಬೇಡಿ ಎಂದರೆ ಮೈಮೇಲೆ ಬಂದವರಂತೆ ವರ್ತಿಸುವುದೇಕೆ, ಹೋದಲ್ಲೆಲ್ಲಾ ಕಣ್ಣೀರು ಸುರಿಸುವ ನಾಟಕವೇಕೇ, ಅಧಿಕಾರ ಸಿಗದಿದ್ದರೆ ಸಾಯುತ್ತೇನೆಂಬ ಮಾತೇಕೆ, ಬ್ಲ್ಯಾಕ್‌ಮೇಲ್ ಕುಮಾರಸ್ವಾಮಿ ಅವರ ಕಣ್ಣೀರ ಕೋಡಿಯಿಂದ ಕುಟುಂಬಕ್ಕೆ ಲಾಭವೇ ಹೊರತು ಜನತೆಗೇನು ಲಾಭ, ಸಾಮಾನ್ಯ ಕಾರ್ಯಕರ್ತರಿಗೆ ಅಧಿಕಾರ ನೀಡುವ ಧೈರ್ಯ ಇದೆಯೇ ಎಂದು ವಾಗ್ದಾಳಿ ನಡೆಸಿದ್ದಾರೆ. ಸುಳ್ಳು ದಾಖಲೆ ಸೃಷ್ಟಿಯ ಶೂರ ನನ್ನ ಮೇಲೆ ವಿನಾಕಾರಣ ಆರೋಪ ಮಾಡುವ ಬದಲು ಸಾಕ್ಷಿ ಇದ್ದರೆ ಬಹಿರಂಗಪಡಿಸಲಿ. ಗಾಳಿಯಲ್ಲಿ ಗುಂಡು ಹಾರಿಸುವುದು, ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವುದು, ಹಿಟ್ ಎಂಡ್ ರನ್ ಮಾಡಿ ಸಿಕ್ಕಿ ಬೀಳ್ತೀನಿ ಅಂದಾಗ ಕಣ್ಣೀರು ಹಾಕಿ ಗಮನ ಸೆಳೆಯೋ ಕಣ್ಣೀರ್ ಸ್ವಾಮಿ. ಇದೇ ನಿಮ್ಮ ಪಕ್ಷದ ಸಿದ್ಧಾಂತವೇ ಎಂದು ಹರಿಹಾಯ್ದಿದ್ದಾರೆ.

ಎರಡು ಬಾರಿ ಮುಖ್ಯಮಂತ್ರಿ ಆದಾಗ ತಾವು ರಾಮನಗರಕ್ಕೆ ಏನು ಕೊಡುಗೆ ನೀಡಿದ್ದೀರಿ ಎಂಬುದು ಎಲ್ಲರಿಗೂ ಗೊತ್ತಿದೆ. ನನ್ನ ದಾಖಲೆ ಬಿಚ್ಚಿಡಲಾ ಎಂದು ಕೇಳುತ್ತಿದ್ದೀರಿ. ಏನೇನು ಬಿಚ್ಚುತ್ತೀರೋ ಬಿಚ್ಚಿ, ಅದೇನು ನಕಲಿ ಸರ್ಟಿಫೀಕೇಟ್ ಎಂದು ಬಾಯಿಬಿಡಿ. ಈ ಬಹಿರಂಗ ಸವಾಲನ್ನು ಸ್ವೀಕರಿ ಸುವಿರೋ ಅಥವಾ ಉತ್ತರ ಕುಮಾರನಂತೆ ಅಡಗಿ ಕೂರುವಿರೋ ಎಂದು ಪ್ರಶ್ನಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಶಿಕ್ಷಕರು : (ಪರೀಕ್ಷೆ ಹಾಲ್‌ನಲ್ಲಿ ಗಂಭೀರವಾಗಿ ಕುಳಿತ ವಿದ್ಯಾರ್ಥಿಗಳನ್ನು ಕುರಿತು) ಯಾವುದಾದರೂ ಪ್ರಶ್ನೆಗಳು ಕಠಿಣವಾಗಿವೆಯೇ?

ವಿದ್ಯಾರ್ಥಿಗಳು : ಖಂಡಿತಾ ಇಲ್ಲ. ಎಲ್ಲಾ ಪ್ರಶ್ನೆಗಳು ತೀರಾ ಸರಳವಾಗಿವೆ. ಆದರೆ ಉತ್ತರಗಳು ಮಾತ್ರ ಕಠಿಣ ಸಾರ್!.

ಮೈಸೂರು ಮಿತ್ರ

ಗುರುವಾರ, 11 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ. – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

ಮನೆಯೇ ಇಲ್ಲದವರು ಬಾವುಟ ಹಾರಿಸುವುದಾದರೂ ಎಲ್ಲಿ?

ಮಾನ್ಯರೆ,

75ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಶೇಷವಾಗಿ ಆಚರಣೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚಿಂತನೆ ಮಾಡಿ ಭರ್ಜರಿಯಾಗಿ ಸಿದ್ಧತೆ ನಡೆಸಿರುವುದು ಸರಿ. ಜೊತೆಗೆ ಪ್ರತಿ ಮನೆಯಲ್ಲಿ ಬಾವುಟ ಹಾರಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಹೇಳಿರುವುದು ಸಹ ಸ್ವಾಗತಾರ್ಹ.

ಮನೆ ಇರುವವರು ಮನೆಯಲ್ಲಿ ಬಾವುಟ ಹಾರಿಸುತ್ತಾರೆ. ಆದರೆ ಮನೆಯೇ ಇಲ್ಲದವರು ಎಲ್ಲಿ ಹಾರಿಸುತ್ತಾರೆ? ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಸರ್ಕಾರವಿದ್ದರೆ ಸುವರ್ಣಯುಗ ಬರುತ್ತದೆ ಅಂತಿದ್ದರು. ಆದರೆ ಈಗ ಸುವರ್ಣಯುಗವನ್ನು ನೋಡಲಾಗುತ್ತಿಲ್ಲ. ರಾಜ್ಯ ಸರ್ಕಾರದಲ್ಲಿ ವಸತಿ ಸಚಿವರು ಬರಿ ಸದನದೊಳಗೆ ಮಾತ್ರ ಅಷ್ಟು ಮನೆ ನಿರ್ಮಾಣ ಮಾಡಿದ್ದೇವೆ, ಇಷ್ಟು ಮನೆ ನಿರ್ಮಾಣ ಮಾಡಿದ್ದೇವೆ ಎಂದು ಲೆಕ್ಕ ಕೊಡುತ್ತಾರೆ. ಆದರೆ ವಸತಿ ಸೌಲಭ್ಯದಡಿಯಲ್ಲಿ ಎಷ್ಟೋ ಜನರಿಗೆ ಮನೆಗಳೇ ದೊರೆತಿಲ್ಲ. ಹಾಗಾದರೆ ಮನೆ ಇಲ್ಲದವರು ಎಲ್ಲಿ ಹೇಗೆ ಬಾವುಟ ಹಾರಿಸುವುದು..ಹೇಳಿ..? ಇನ್ನಾದರೂ ಉಳಿದಿರುವ ದಿನಗಳಲ್ಲಿ ವಸತಿ ಇಲ್ಲದವರನ್ನು ಗುರುತಿಸಿ ಸರ್ಕಾರದ ಈ ಯೋಜನೆಯಲ್ಲಿ ವಸತಿ ಸೌಲಭ್ಯ ನೀಡಿ 75 ನೇ ಸ್ವಾತಂತ್ರ್ಯ ದಿನ ಆಚರಿಸಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ

ಪ್ರಜಾಪ್ರಭುತ್ವದ ದುರಂತ

ಮಾನ್ಯರೆ,

ಬಿಹಾರದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಅಸಹ್ಯ ತರಿಸುವಂತಿದೆ. ಮುಖ್ಯಮಂತ್ರಿಯಾಗಿದ್ದ ನಿತೀಶ್ ಕುಮಾರ್, ಬಿಜೆಪಿ ಜೊತೆಗಿನ ಮೈತ್ರಿಯನ್ನು ಮುರಿದುಕೊಂಡು, ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಮತ್ತೆ ಮಹಾಘಟಬಂಧನ್ ತೆಕ್ಕೆಗೆ ಬಿದ್ದು ಲಾಲೂ ಪ್ರಸಾದ್ ಯಾದವ್ ನೇತೃತ್ವದ ರಾಷ್ಟ್ರೀಯ ಜನತಾ ದಳ ಹಾಗೂ ಕಾಂಗ್ರೆಸ್ ಬೆಂಬಲದಿಂದ ಮುಖ್ಯಮಂತ್ರಿಯಾಗಲು ಹೊರಟಿದ್ದಾರೆ. ಬಹುಶಃ ಅವರು ಮುಖ್ಯಮಂತ್ರಿಯಾಗಿ ಯಾವುದೇ ಕ್ಷಣದಲ್ಲಿ ಪ್ರಮಾಣವಚನ ಸ್ವೀಕರಿಸಬಹುದು. ಈ ಹಿಂದೆ ಆರ್‌ಜೆಡಿಯ ಭ್ರಷ್ಟಾಚಾರದ ವಿರುದ್ಧ ಸಿಡಿದೆದ್ದು, ಬಿಜೆಪಿಯೊಂದಿಗೆ ಸಖ್ಯ ಮಾಡಿಕೊಂಡು ಪುನಃ ಅಧಿಕಾರಕ್ಕೆ ಬಂದಿದ್ದ ನಿತೀಶ್ ಕುಮಾರ್ ಈಗ ಸಂಪೂರ್ಣ ರಿವರ್ಸ್ ಗೇರ್ ಹೊಡೆದು ನಗೆಪಾಟಲಿಗೆ ಈಡಾಗಿದ್ದಾರೆ. ಈ ಮನುಷ್ಯನಿಗೆ ಅಧಿಕಾರ ಬಿಟ್ಟು ಬೇರೆ ಯಾವ ತತ್ವ ಅಥವಾ ಸಿದ್ಧಾಂತವಾಗಲಿ ಇಲ್ಲ ಎನಿಸುತ್ತದೆ. ಅಧಿಕಾರಕ್ಕಾಗಿ ಏನನ್ನೂ ಬೇಕಾದರೂ ಮಾಡಬಲ್ಲ ನಿತೀಶ್ ಕುಮಾರ್ ಅವರಂತಹ ವ್ಯಕ್ತಿಗಳು ಇಂದಿನ ರಾಜಕೀಯದಲ್ಲಿ ಜೋಕರ್‌ಗಳಾಗುತ್ತಿರುವುದು ಪ್ರಜಾಪ್ರಭುತ್ವದ ದುರಂತವಾಗಿದೆ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸೇತುವೆ ಮೇಲ್ದರ್ಜೆಗೇರಿಸಿ, ರಸ್ತೆ ರಿಪೇರಿ ಮಾಡಿಸಿ



ಮಾನ್ಯರೆ,

ಸರಗೂರು ತಾಲೂಕಿನ ನಂಜೀಪುರ, ಕಲ್ಲಂಬಾಳು, ದಡದಹಳ್ಳಿ, ಕಟ್ಟೆ ಹುಣಸೂರು ಮತ್ತು ಕಡೆಜಟ್ಟಿ ಇತರೆ ಗ್ರಾಮಗಳ ನಡುವೆ ವರ್ಷಪೂರ್ತಿ ಹರಿಯುವ ಹೊಳೆಗೆ ಅಡ್ಡಲಾಗಿ ಕೆಳದರ್ಜೆಯ ಸೇತುವೆ ನಿರ್ಮಿಸಲಾಗಿದ್ದು, ಅಲ್ಪಸ್ವಲ್ಪ ಮಳೆಯಾದರೆ ಸೇತುವೆ ಮೇಲೆಲ್ಲ ನೀರು ಹರಿದು ಮುಳುಗಡೆಯಾಗಿ ಅಕ್ಕ ಪಕ್ಕದಲ್ಲಿರುವ ಜಮೀನುಗಳಿಗೆ ನೀರು ಹರಿದು ಬೆಳೆ ನಷ್ಟವಾಗಿ ಸಂಪರ್ಕವನ್ನೇ ಕಳೆದುಕೊಳ್ಳುತ್ತದೆ. ಈ ಗ್ರಾಮಗಳಿಗೆಲ್ಲ ಈ ಸೇತುವೆಯು ಸಂಪರ್ಕ ಕೊಂಡಿಯಾಗಿದ್ದು, ವಿದ್ಯಾರ್ಥಿಗಳು, ವ್ಯಾಪಾರಸ್ಥರು, ಕೂಲಿ ಕಾರ್ಮಿಕರು, ವಾಹನ ಸವಾರರು ಹಾಗೂ ರೈತರ ದಿನನಿತ್ಯದ ಕೃಷಿ ಚಟುವಟಿಕೆಗಳಿಗೆ ತುಂಬಾ ಅನುಕೂಲವಾಗಿದೆ. ನುಗು ಜಲಾಶಯದಿಂದ ಹೆಚ್ಚಿನ ನೀರು ಬಿಡುಗಡೆಯಾದರೆ ಜನರ ಜೀವನ ಅಸ್ತವ್ಯಸ್ತವಾಗಿ ನರಕಯಾತನೆ ಅನುಭವಿಸಬೇಕಾಗುತ್ತದೆ. ಈ ಸೇತುವೆ ಸಂಪರ್ಕಕ್ಕೆ ಇರುವ ರಸ್ತೆಗಳು ಕೂಡ ಕೆಸರುಮಯವಾಗಿದ್ದು, ಅದೆಷ್ಟೋ ವಾಹನ ಸವಾರರು ಸರ್ಕಸ್ ಮಾಡಿಕೊಂಡು ಆಯತಪ್ಪಿ ಬಿದ್ದಿರುವ ಸಾಕಷ್ಟು ಘಟನೆಗಳು ವರದಿಯಾಗಿವೆ. ಅಷ್ಟೇ ಅಲ್ಲದೆ ರೈತರ ಜಾನುವಾರುಗಳು ಕೂಡ ಈ ನೀರಿನ ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ಈ ಎಲ್ಲಾ ಸಮಸ್ಯೆಗಳನ್ನು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಹೇಳಿಕೊಂಡು ಈ ಸೇತುವೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಕ್ಯಾರೆ ಎನ್ನುತ್ತಿಲ್ಲ. ಏನಾದರೂ ಸಬೂಬು ಹೇಳಿ ಸಾಗಹಾಕುತ್ತಿದ್ದಾರೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟವರು ಕೂಡಲೇ ಸ್ಪಂದಿಸಿ ತುರ್ತಾಗಿ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಮನವಿ.

–ಪರಶಿವಮೂರ್ತಿ ಎನ್.ಪಿ, ಶಿಕ್ಷಕರು, ಸರಗೂರು ತಾ.

ಕ್ರೀಡಾಪಟುಗಳಿಗೆ ಪ್ರೋತ್ಸಾಹ ಮೊದಲೇ ನೀಡಿ

ಮಾನ್ಯರೆ,

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತ 61 ಪದಕಗಳನ್ನು ಗಳಿಸಿ ಪದಕ ಪಟ್ಟಿಯಲ್ಲಿ 4ನೇ ಸ್ಥಾನ ಪಡೆದಿರುವುದು ಉತ್ತಮ ಸಾಧನೆಯಾಗಿದೆ. ಈಗ ವಿವಿಧ ಕ್ರೀಡೆಗಳಲ್ಲಿ ಪದಕ ಗಳಿಸಿದ ಕ್ರೀಡಾಪಟುಗಳಿಗೆ ಸರ್ಕಾರಗಳು ಮತ್ತು ವಿವಿಧ ಕ್ಷೇತ್ರದ ವ್ಯಕ್ತಿಗಳು ನಾ ಮುಂದು ತಾ ಮುಂದು ಎಂದು ನಗದು ಬಹುಮಾನ ಘೋಷಣೆ ಮಾಡುತ್ತಿದ್ದಾರೆ. ವಿಪರ್ಯಾಸವೆಂದರೆ ನಮ್ಮ ದೇಶದಲ್ಲಿ ಪದಕ ಗಳಿಸಿದ ನಂತರ ಬಹುಮಾನ ನೀಡುತ್ತಾರೆ ಹೊರತು ಪದಕ ಗಳಿಸಲು ಪ್ರತಿಭಾವಂತರು, ಭರವಸೆಯ ಕ್ರೀಡಾಪಟುಗಳಿಗೆ ಮೊದಲೇ ಈ ರೀತಿಯ ಪ್ರೋತ್ಸಾಹ ಸಿಗುವುದಿಲ್ಲ. ಇಂದು ಅನೇಕ ಸರಕಾರಿ ಶಾಲಾ ಕಾಲೇಜುಗಳಲ್ಲಿ ಸರಿಯಾಗಿ ಆಟದ ಮೈದಾನ, ಕ್ರೀಡಾ ಸಾಮಗ್ರಿಗಳು ಇರುವುದಿಲ್ಲ. ಇಂತಹ ವೈಫಲ್ಯಗಳಿಂದ ಉತ್ತಮ ಕ್ರೀಡಾಪಟುಗಳು ರೂಪುಗೊಳ್ಳುವುದು ಹೇಗೆ? ಪದಕ ಗಳಿಸುವುದಾದರೂ ಹೇಗೆ? ಮೊದಲೇ ಕ್ರೀಡಾಪಟುಗಳಿಗೆ ನಿಮ್ಮ ಬೆಂಬಲ ಸಿಕ್ಕಿದ್ದರೆ ಇನ್ನಷ್ಟು ಪದಕಗಳು ಬರುತ್ತಿದ್ದವು.

–ಚನ್ನಕೇಶವ ಜಿ, ಕೆ. ತರೀಕೆರೆ

ಕನ್ನಡ ಕಾವ್ಯಗಳ ಗೆಜ್ಜೆನಾದ



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ವರ್ಷ :	2021
ಲೇಖಕರು :	ಪ್ರೊ. ಎ. ವಿ. ಸೂರ್ಯನಾರಾಯಣಸ್ವಾಮಿ ಮತ್ತು ಎಚ್. ಎಸ್. ಗೋವಿಂದಗೌಡ
ಸಂಪುಟ 1 :	XXXVI+1348
ಸಂಪುಟ 2 :	IX+1138
ಪ್ರಕಾಶಕರು :	ಹವ್ಯಾಳು ಪ್ರಕಾಶನ, 2793, 2ನೇ ಘಟ್ಟ, 4ನೇ ಹಂತ, ವಿಜಯನಗರ, ಮೈಸೂರು–570 007



ಕನ್ನಡದಲ್ಲಿನ ಕಾವ್ಯಗಳು ಒಂದು ಸಮೃದ್ಧ ಸಾಹಿತ್ಯ. ಐದನೆಯ ಶತಮಾನದಿಂದ ಈಚಿನ ದಿನಗಳವರೆಗೂ ಹರಿದು, ಸುದೀರ್ಘ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಸಂಸ್ಕೃತಿಯ ಸೌರಭ. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಾ ಸಾಗಿ ಬಂದಿದೆ; ಕವಲೊಡೆದು ಹಲವಾರು ಪ್ರಕಾರಗಳಲ್ಲಿ ರೂಪುಗೊಂಡಿದೆ. ಕನ್ನಡದ ಮೊದಲ ಶಾಸನದಿಂದ ಈಚಿನ ಚುಟುಕುಗಳ ಪರಿಚಯ ಮಾಡಿಕೊಳ್ಳುವುದಿರಲಿ ಅವುಗಳನ್ನು ಗುರುತಿಸುವುದೇ ಒಂದು ಶ್ರಮದ ಕಾರ್ಯ. ಅವುಗಳ ಭಾಗಗಳನ್ನು ಆಯ್ದುಕೊಂಡು, ಕಾಲಾನುಕ್ರಮಕ್ಕೆ ಸರಿಯಾಗಿ ಹೊಂದಿಸಿಕೊಂಡು, ಅವುಗಳ ರಚನೆಕಾರರ ಹೆಸರು–ಕಾಲಗಳನ್ನು ಸೇರಿಸಿಕೊಂಡು, ಸಂಕಲಿಸಿ ಕನ್ನಡಿಗರಿಗೆ ಅವುಗಳ ಸವಿ ಉಣಿಸುವುದು ದುಸ್ತರವಾದ ಕೆಲಸವೇ. ಈ ಮಹತ್ತರ ಕಾರ್ಯವನ್ನು ಇಬ್ಬರು ಮಹಾನುಭಾವರು ಸಮರ್ಪಣಾ ಮನೋಭಾವದಿಂದ ಸಾಧಿಸಿದ್ದಾರೆ. ಕನ್ನಡ ಕಾವ್ಯ ಸಾಹಿತ್ಯಕ್ಕೆ ಅಪೂರ್ವವಾದ ಕೊಡುಗೆ ನೀಡಿದ್ದಾರೆ. ಕನ್ನಡಿಗರೆಲ್ಲಾ ಮೆಚ್ಚುವಂತಹ ಕಾರ್ಯ ಮಾಡಿದ್ದಾರೆ.

ಇವರ ಸಂಗ್ರಹ ಕಾರ್ಯ ಇಂದು ನೆನ್ನೆ ಪ್ರಾರಂಭವಾದದ್ದಲ್ಲ. ಇದರ ಹಿಂದೆ ಏಳು ದಶಕಗಳ ಪರಿಶ್ರಮವಿದೆ. ಅದು ಎಷ್ಟು ವ್ಯಾಪಕದ್ದೆಂದರೆ ಕಳೆದ ನಾಲ್ಕು ದಶಕಗಳಲ್ಲಿ ಇವರು ಪ್ರಯಾಣ ಮಾಡಿದಾಗ ರಸ್ತೆಯಲ್ಲಿ ಬಿದ್ದಿದ್ದ ಕಾಗದಗಳಲ್ಲಿ, ಕೈ ಒರೆಸಿಕೊಳ್ಳಲು ಫಲಾಹಾರ ಮಂದಿರಗಳಲ್ಲಿ ಕೊಟ್ಟ ಕಾಗದಗಳಲ್ಲಿ, ರಸ್ತೆಬದಿಯ ಗೋಡೆಗಳಲ್ಲಿ, ರೈಲು ಬೋಗಿಗಳಲ್ಲಿ, ಬಸ್ಸು, ಲಾರಿ, ರಿಕ್ಷಾ, ಜಟಕಾ ಗಾಡಿಗಳಲ್ಲಿ, ಅಕ್ಕಸಾಲಿಗರ ಅಂಗಡಿಗಳಲ್ಲಿ, ಆಯುಷ್ಕರ್ಮ ಶಾಲೆಗಳಲ್ಲಿ, ಮತ್ತು ರುದ್ರಭೂಮಿಯಲ್ಲಿ ದೊರೆತ ಅನಾಮಿಕರ ಅತ್ಯಮೂಲ್ಯ ನೀತಿ ನುಡಿಗಳನ್ನೂ ಈ ಗ್ರಂಥದಲ್ಲಿ ಸೇರಿಸಿದ್ದಾರೆ. ಎಲ್ಲಿಯೂ ದೊರೆಯದು ಎನ್ನುವಂತಹ ಪದ್ಯ–ಕವನಗಳನ್ನು ಹುಡುಕಿ, ಹೆಕ್ಕಿ ಇಲ್ಲಿ ಸೇರಿಸಿದ್ದಾರೆ. ಅಂತಹ ಆಸಕ್ತಿ–ಶ್ರಮ ವಹಿಸಿ ಈ ಕಾರ್ಯ ಯಶಸ್ವಿಯಾಗಿ ಮಾಡಿದ್ದಾರೆ.

ಹೀಗೆ ಪ್ರಕಟವಾಗಿರುವ ಎರಡೂ ಸಂಪುಟಗಳೂ ಬೃಹತ್ ಗಾತ್ರದವೇ. ಒಂದು 1348 ಪುಟಗಳದ್ದು, ಇನ್ನೊಂದು 1138. ಎರಡೂ ಸೇರಿ 2526 ಪುಟಗಳು. ಎರಡೂ ಪರಿಷ್ಕೃತ ಮತ್ತು ವಿಸ್ತೃತ ಗ್ರಂಥಗಳೇ. ಅವುಗಳಲ್ಲಿ ಸಂಗ್ರಹವಾಗಿರುವುದು ಸುಮಾರು 2,600 ಕವಿಗಳ ರಚನೆಗಳು. ಕವಿಗಳ ಪಟ್ಟಿಯೇ 63 ಪುಟಗಳು! ಆ ಕಾವ್ಯಗಳ ಅಕ್ಷರ ಸಂಯೋಜನೆಗೆ ಹಿಡಿದ ಕಾಲ ಎರಡು ವರ್ಷ. ಇದೇ ಸಾಕು ಈ ಉದ್ಗ್ರಂಥದ ಮಹತ್ವ ಎತ್ತಿ ತೋರಲು. ಸಂಕಲನದ ಹಿಂದಿರುವ ಸುದೀರ್ಘ ಪ್ರಯತ್ನ, ಶ್ರಮ, ಸಾಧನೆ ಅರಿಯಲು.

ಈ ಸಂಕಲನದ ಕನಸು ಕಂಡವರು ಎಚ್.ಎಸ್.ಗೋವಿಂದಗೌಡರು. ಅವರ ಜೊತೆಗೂಡಿದವರು ಪ್ರೊ.ಎ.ವಿ.ಸೂರ್ಯನಾರಾಯಣಸ್ವಾಮಿ ಅವರು. ಗೋವಿಂದಗೌಡರಾದರೋ ಕರ್ನಾಟಕ ಸರ್ಕಾರದ ವಾಣಿಜ್ಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ದು ವಿಶ್ರಾಂತರಾದವರು. ಅವರಿಗಿದ್ದ ಗೀಳು ರಂಗಭೂಮಿ. ಮರೆಯಾಗಿ ಹೋಗುತ್ತಿದ್ದ ಕನ್ನಡ ರಂಗಭೂಮಿಗೆ ಶಕ್ತಿ ತುಂಬುವ ಆಸೆಯಿಂದ ಹೊರಟವರು ಅವರು. ರಂಗಭೂಮಿಯ ಕಲಾವಿದರನ್ನು ಒಗ್ಗೂಡಿಸಿಕೊಂಡು ಹಲವಾರು ನಾಟಕಗಳನ್ನು ಮತ್ತೆ ರಂಗಭೂಮಿಗೆ ತಂದವರು. ಜೊತೆಗೆ ಇಂದಿನ ತಲೆಮಾರಿಗೆ ಅಪೂರ್ವವಾಗಿರುವ ರಂಗಗೀತೆಗಳ ಸಂಗ್ರಹಕ್ಕೆ ಕೈಹಚ್ಚಿದವರು. ಆ ಕಾರ್ಯಕ್ಕೆ ತೊಡಗಿ "ರಂಗ ಗೀತೆಗಳು" (ಪೌರಾಣಿಕ) ಪುಸ್ತಕವನ್ನು ಪ್ರಕಟಿಸಿದರು. 'ಮಹಾಕವಿ ಕಾಳಿದಾಸ' 'ರಾಜಾವಿಕ್ರಮ' 'ನಾರದಗಾನ' 'ಸಂಪೂರ್ಣ ರಾಮಾಯಣ' 'ಶ್ರೀಕೃಷ್ಣಗಾರುಡಿ' 'ದಾನಶೂರ ಕರ್ಣ' 'ಸುಭದ್ರಾ ಕಲ್ಯಾಣ' 'ರಾಜಸೂಯಯಾಗ' 'ಆಯ್ದ ರಂಗಗೀತೆಗಳು' 'ಅಪೂರ್ವ ರಂಗಗೀತೆಗಳು' 'ರಂಗದೃಶ್ಯಗಳು' ಇತ್ಯಾದಿ ರಂಗಗೀತೆಗಳ ಧ್ವನಿ ಸುರುಳಿಗಳನ್ನು ಹೊರತಂದಿರುವ ಕೀರ್ತಿ ಇವರದು. ಅವುಗಳ ಮೂಲಕ ಸುಮಾರು 250 ರಂಗಗೀತೆಗಳು ಮರುಹುಟ್ಟನ್ನೇ ಪಡೆದಿವೆ ಎಂಬ ಮಾತು ಅತಿಶಯೋಕ್ತಿಯಲ್ಲ.

ಗೋವಿಂದಗೌಡರ ಸಾಹಸಕ್ಕೆ ಕೈಜೋಡಿಸಿ ನೆರವಾದ ಪ್ರೊ. ಸೂರ್ಯನಾರಾಯಣಸ್ವಾಮಿಯವರಾದರೋ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರಾಗಿದ್ದವರು. ನೂರಾರು ವಿದ್ಯಾರ್ಥಿಗಳನ್ನು ತಯಾರು ಮಾಡಿದವರು. ಶ್ರೇಷ್ಠ ಬರಹಗಾರರು. ಈ ಗ್ರಂಥಕ್ಕೆ ಇವರು ಏಳು ದಶಕಗಳ ಪರಿಶ್ರಮವನ್ನು ಧಾರೆ ಎರೆದಿದ್ದಾರೆ.

ಇವರಿಬ್ಬರ ಮೊದಲ ಪ್ರಯತ್ನ ಮಾದರಿಗಾಗಿ ಸಿದ್ಧಪಡಿಸಿ ಹೊರತಂದಿದ್ದ "ಕನ್ನಡ ಕಾವ್ಯಗಳ ಗೆಜ್ಜೆನಾದ." ಇದು 2006ರಲ್ಲಿ 702 ಪುಟಗಳಲ್ಲಿ ಒಂದೇ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಇದು ಫಲಕೊಟ್ಟು ಈ ಗೆಜ್ಜೆನಾದ ಎರಡು ಸಂಪುಟಗಳಲ್ಲಿ ಪರಿಷ್ಕೃತವಾಗಿ, ವಿಸ್ತೃತವಾಗಿ 1,400 ಪುಟಗಳಲ್ಲಿ ಹೊರಬಂದಿತು. ಅವರ ಸಾಹಸ ಅಲ್ಲಿಗೇ ನಿಲ್ಲಲಿಲ್ಲ. ಈಗ ಅದು ಮತ್ತಷ್ಟು ಪರಿಷ್ಕೃತಗೊಂಡು, ವಿಸ್ತೃತವಾಗಿ ಎರಡು ಬೃಹತ್ ಸಂಪುಟಗಳಲ್ಲಿ ಮೂಡಿ ಬಂದಿದೆ.

ಗ್ರಂಥಕ್ಕೆ ಈ ಹೆಸರಿಡುವ ಔಚಿತ್ಯವಾದರೋ, ಪ್ರಕೃತಿಯ ಸಮಸ್ತ ವ್ಯಾಪಾರವೂ ನಾದಮಯವೇ. ಇನ್ನು ಛಂದಸ್ಸಿನ ತಾಳ ಲಯಗಳ ಶಾಸ್ತ್ರೀಯ ನಿಯಮಗಳೊಂದಿಗೆ ಕವಿ ಹೃದಯದಿಂದ ಹೊರಹೊಮ್ಮುವ ಕಾವ್ಯಗಂಗೆಯೂ ನಾದಮಯವೇ. ಈ ಕಾವ್ಯಗಂಗೆಯಲ್ಲಿ ಸಹೃದಯರ ರೋಮಾಂಚನಕ್ಕೆ ಕಾರಣವಾಗುವ ಗೆಜ್ಜೆನಾದವಿರುತ್ತದಲ್ಲವೇ? ಈ ಕಾರಣಕ್ಕೇ ಈ ಗ್ರಂಥ "ಕನ್ನಡ ಕಾವ್ಯಗಳ ಗೆಜ್ಜೆನಾದ." ಈ ಈರ್ವರು ಸಂಕಲನಕಾರರು ತಮ್ಮ "ಪ್ರಾಸ್ತಾವಿಕ ನುಡಿ ನಮನ"ದಲ್ಲಿ ಹೇಳುವ ಮಾತಿದು..

ಎರಡು ಸಂಪುಟಗಳಲ್ಲಿ ಮೂಡಿಬಂದಿರುವ ಈ ಕಾವ್ಯಗಳ ಗೆಜ್ಜೆನಾದ ಹತ್ತು ಗೆಜ್ಜೆಗಳಲ್ಲಿ ಝುಂಝುಣಿಸಿದೆ. ಕನ್ನಡ ಶಾಸನ, ನಾಡುನುಡಿ ವರ್ಣನೆ ಮತ್ತು ನಾಡಗೀತೆಗಳ ತೋರಣ; ಕಾವ್ಯಕಥಾ ಸಂಗತಿ ಮತ್ತು ಕವಿ ಶೈಲಿ, ವೃತ್ತಗಳು, ನವರಸಗಳು, ಪ್ರಕೃತಿಯ ವಿವಿಧ ದೃಶ್ಯ, ವಿವಿಧ ಭಾಷಾ ಧರ್ಮ ಗ್ರಂಥಗಳ, ಸ್ಥಳನಾಮಗಳ ಮತ್ತು ಸಂಸ್ಕೃತ ವೇದ ಮಂತ್ರಗಳ ಕನ್ನಡ ಗದ್ಯ ಪದ್ಯಾನುವಾದದಿಂದ ಆಯ್ದ ಹೊನ್ನುಡಿಗಳ ಸಿಹಿಹೂರಣ; ಶರಣ ಶರಣೆಯರ ವಚನ, ದಾಸರ ಕೀರ್ತನೆ, ಉಗಾಭೋಗ, ಸುಳಾದಿ, ವೃತ್ತನಾಮ, ಗುಂಡಕ್ರಿಯ, ದಂಡಕ, ಹರಿದಾಸಿಯರ ಕೀರ್ತನೆಗಳು, ವಾಗ್ಗೇಯಕಾರರ ಕೃತಿಗಳು, ಸ್ತುತಿಪದ್ಯಗಳು, ತತ್ವಪದ, ಅನುಭಾವದ ನುಡಿ ಮತ್ತು ನೀತಿಪದ್ಯಗಳ ಬೋಧನ ಇವು ಮೊದಲನೆಯ ಸಂಪುಟದ ಗೆಜ್ಜೆನಾದ.

ಹಳಗನ್ನಡ ಕಥನ ಕವನಗಳು ಮತ್ತು ಕಥೆಗಳು, ಜಾನಪದ ಕಥನ ಕವನಗಳು, ಹೊಸಗನ್ನಡ ಕಥನ ಕವನಗಳು ಮತ್ತು ಕಥೆಗಳು, ಐತಿಹಾಸಿಕ ಲಾವಣಿ ಕಥನ ಕವನಗಳ ರಸಾಯನ; ಚಿತ್ರಕವಿತ್ವ, ಸಮಸ್ಯೆ, ಬೆಡಗಿನ ವಚನಗಳು, ಕೀರ್ತನೆಗಳು, ಪದ್ಯಗಳು ಮತ್ತು ಒಗಟುಗಳ ರಂಜನ; ಜನಪದ ಗೀತೆಗಳ ಉಲ್ಲಾಸನ; ಯಕ್ಷಗಾನ, ರಂಗಗೀತೆ ಮತ್ತು ಚಿತ್ರಗೀತೆಗಳ ಆಲಾಪನ; ಭಾವಗೀತೆಗಳ ಸುಗಂಧ ಸಿಂಚನ; ಗಂಭೀರ ಹಾಸ್ಯ ಗೀತಾಂಜಲಿಯ ನಗುನಂದನ; ಮತ್ತು ಕವಿ ಸೂಕ್ತಿ ಮತ್ತು ಗಾದೆಗಳ ಸಮಾಲೋಚನ. ಇವು ಎರಡನೆಯ ಸಂಪುಟದಲ್ಲಿ ನವು. ಎರಡು ಸಂಪುಟಗಳಿಂದ ಒಟ್ಟು ಹತ್ತು ವಿಭಾಗಗಳು.

ಈ ಎರಡು ಸಂಪುಟಗಳಲ್ಲಿ ಹಲವಾರು ಮಹತ್ವದ ಕಾವ್ಯ ಪದ್ಯಗಳು ಸೇರಿವೆ. ಕ್ರಿ. ಪೂ. ಸುಮಾರು 256ರ ಪ್ರಾಕೃತದ ಅಶೋಕನ ಮಸ್ಕಿಯ ಶಾಸನದಿಂದ ಹಿಡಿದು ಹಲ್ಮಿಡಿ ಶಾಸನವೂ ಸೇರಿದಂತೆ ಕ್ರಿ.ಶ. 1665ರ ಚಿಕ್ಕಮಗಳೂರು ಜಿಲ್ಲೆಯ ಹುಲಿಕೆರೆ ಬೃಹನ್ಮಠದ ಎರಡನೆಯ ಶಾಸನದವರೆಗೆ ಒಟ್ಟು 101 ಶಾಸನಗಳನ್ನು ಗುರುತಿಸಲಾಗಿದೆ. ಮೈಸೂರಿನ ರಾಷ್ಟ್ರಗೀತೆಯಾಗಿದ್ದ ಬಸವಪ್ಪ ಶಾಸ್ತ್ರಿಗಳ ಪ್ರಸಿದ್ಧ 'ಕಾಯೌ ಶ್ರೀ ಗೌರಿ'ಯೂ ಸೇರಿದಂತೆ ಒಟ್ಟು 24 ನಾಡಗೀತೆಗಳಿವೆ ಎಂದರೆ ಆಶ್ಚರ್ಯವಾಗಬಹುದು. ಪಂಪನ ವಿಕ್ರಮಾರ್ಜುನ ವಿಜಯದಿಂದ ಹಿಡಿದು 1970ರ ಡಾ.ಎಚ್.ಎಸ್.ಅನುಪಮ ಅವರ ಖಂಡಕಾವ್ಯ ಬುದ್ಧ ಚರಿತೆಯವರೆಗೆ ಒಟ್ಟು 441 ಕಾವ್ಯಗಳ ಸಂಗ್ರಹವನ್ನು ನೀಡಿ ಕನ್ನಡ ಕಾವ್ಯಗಳಲ್ಲಿನ ಸಂಪತ್ತನ್ನು ಪರಿಚಯ ಮಾಡಿಕೊಡಲಾಗಿದೆ.

ಇನ್ನೊಂದು ಗಮನಾರ್ಹವಾದ ಸಂಗ್ರಹವೆಂದರೆ ವೈದ್ಯಗ್ರಂಥಗಳಲ್ಲಿನ ಆಯ್ದ ವಿವಿಧ ಔಷಧಿ ಪದ್ಯಗಳು, ನಾನಾ ರೋಗ ನಿವಾರಣಾ ಸಾಮರ್ಥ್ಯದ ದಿನ ಬಳಕೆಯ ವಿವಿಧ ಸೊಪ್ಪುಗಳ ಮೇಲಿನ ಪದ್ಯ, ವಿವಿಧ ಜ್ಯೋತಿಷ್ಯ, ವಾಸ್ತು, ಕಾಲಗಣನೆ ಮತ್ತು ಕಾಲಜ್ಞಾನ ಗ್ರಂಥಗಳಿಂದ ಆಯ್ದ ಪದ್ಯಗಳು, ವಿವಿಧ ಭಕ್ಷ್ಯ ಭೋಜ್ಯಗಳ ಆಯ್ದ ವರ್ಣನೆಯ ಪದ್ಯಗಳು, ಬಾಯಿ ರುಚಿಗೆ ಮತ್ತು ಆರೋಗ್ಯ ವೃದ್ಧಿಗೆ ಬಳಸುವ ವಿವಿಧ ಸೊಪ್ಪುಗಳು, ಆಭರಣಗಳು, ಆಯುಧಗಳು, ವಿಮಾನಗಳು, ರತ್ನಪರೀಕ್ಷಾ ಪದ್ಯಗಳು, ಅಪೂರ್ವ ಸ್ಥಳನಾಮಗಳ ವಿವರಗಳು, ಇತ್ಯಾದಿ. ಇವೆಲ್ಲವೂ ಕನ್ನಡಿಗರ ಬದುಕಿನ ದ್ಯೋತಕಗಳು.

ಇನ್ನೂ ಕೆಲವು ಗಮನಾರ್ಹವಾದುವೆಂದರೆ ಪ್ರಾಚೀನ ಅಮೇರಿಕಾದ ಕ್ರಿ.ಶ. ಮೂರನೆ ಶತಮಾನದ ಪೆರು ಸಾಮ್ರಾಜ್ಯದ ಮೂಲ ಪುರುಷರು ಪೆರುವಿನ ಯಜ್ಞಾಚರಣೆಯಲ್ಲಿ ಸಂಸ್ಕೃತಮಯವಾಗಿದ್ದ ಕೇಶವ ಭಾಷೆಯಲ್ಲಿ ಪಠಿಸುತ್ತಿದ್ದ ವೇದ ಮಂತ್ರವೊಂದರ ಕನ್ನಡ ಪದ್ಯಾನುವಾದ; ಬುದ್ಧನ ಪಾಲಿ ಭಾಷಾ ಧಮ್ಮಪದ, ಕನ್ನಡದ 'ಅಲ್ಲೋಪನಿಷತ್' ಮಂತ್ರಗಳ ಆಯ್ದ ಕನ್ನಡ ಭಾಷಾನುವಾದ, ಅರಬ್ಬಿ ಭಾಷೆಯ 'ಖುರ್ ಆನ್'ನ ಕನ್ನಡ ಗದ್ಯಾನುವಾದ, ಪರ್ಶಿಯನ್ ಭಾಷೆಯ 'ಝುಂಡ್ ಅವೆಸ್ತ' ಧರ್ಮಗ್ರಂಥ, 'ಸುಲಗ್ರೆ ಫೂಲ್' ಉರ್ದು ಭಾಷಾ ರುಬಾಯಿಗಳ ಕನ್ನಡಾನುವಾದಗಳು. ಅದೇ ರೀತಿ ವಿವಿಧ ಬಯ್ಗಳು, ಕನ್ನಡ ಅಕ್ಷರಗಳ ಆಧ್ಯಾತ್ಮಿಕ ಅಂತರಾರ್ಥದ ವಿವರಗಳು, ವಕ್ರೋಕ್ತಿ ವಿಲಾಸದ ಅಪೂರ್ವ ಪದ್ಯಗಳು ಇತ್ಯಾದಿ ಮೊದಲನೆಯ ಸಂಪುಟದಲ್ಲಿ ಸೇರಿವೆ.

ಹಳಗನ್ನಡ ಕಥನ ಕವನಗಳು ಮತ್ತು ಕಥೆಗಳಲ್ಲಿ ಮೀನಿನ ಲಾವಣಿ, ಹಾಗಲಕಾಯಿ ಮಾವಿನ ಹಣ್ಣಿನ ಮದುವೆ, ಗಿಳಿಯ ಹಾಡು, ತೋಳ ಮತ್ತು ಕೊಕ್ಕರೆ, ಮಂಗಗಳ ಉಪವಾಸ, ರೇಷ್ಮೆ ಹುಳುವಿನ ಕಥೆ, ಕುಂಟ ಮತ್ತು ಕುರುಡ, ಜೋತಿಷಿ ನರಿರಾಯ, ಕತ್ತೆ ಮತ್ತು ಧರ್ಮ, ಚಿತ್ರ ಕವಿತ್ವಗಳು, ಸಮಸ್ಯೆಗಳ ಸಂಗ್ರಹ, ಒಂಬತ್ತರ ಮಗ್ಗಿ, ಒಗಟು ಪದ್ಯಗಳು, ಜಾನಪದ ಮಂತ್ರಗೀತೆಗಳು, ವಿವಿಧ ಪ್ರಕಾರದ ಹಾಸ್ಯ ಗೀತೆಗಳು ಸ್ವಾರಸ್ಯವಾಗಿವೆ. ಮದಕರಿ ನಾಯಕನಿಂದ ಸುಭಾಷಚಂದ್ರಬೋಸರ ಸಂಗತಿಯವರೆಗಿನ 12 ಲಾವಣಿಗಳು ಐತಿಹಾಸಿಕ ಮಹತ್ವದ್ದಾಗಿವೆ. ಸತೀ ಸುಲೋಚನದಿಂದ ಹಿಡಿದು ರಾಜಕುಮಾರವರೆಗಿನ ಚಲಚಿತ್ರಗಳ ಚಿತ್ರಗೀತೆಗಳನ್ನು ಆಯ್ದು ಸೇರಿಸಲಾಗಿದೆ. ಸುಮಾರು 474 ಕನ್ನಡ ಭಾವಗೀತೆಗಳ ಸಂಗ್ರಹವೂ ಈ ಎರಡನೆಯ ಸಂಪುಟದಲ್ಲಿ ಸೇರಿಸಿ ಕನ್ನಡ ಕಾವ್ಯಗಳ ಎಲ್ಲ ಪ್ರಕಾರಗಳ ಪರಿಚಯ ಮಾಡಿಕೊಡಲಾಗಿದೆ. ಎರಡು ಸಂಪುಟಗಳಲ್ಲಿನ ಕಾವ್ಯ ಸಂಗ್ರಹ ಕಾವ್ಯಲೋಕದಲ್ಲಿ ಏನಿಲ್ಲ ಎಂಬುದನ್ನು ತೋರುತ್ತದೆ.

ಇಲ್ಲಿ ಆಯ್ಕೆ ಮಾಡಿರುವ ಎಲ್ಲಾ ಕವಿಗಳ ಮತ್ತು ಕಾವ್ಯ ಶೈಲಿಯ ಪದ್ಯಗಳನ್ನು ಒಂದೊಂದು ಪುಟಕ್ಕೆ ಮೀರದಂತೆ ಪ್ರಕಟಿಸಲಾಗಿದೆ. ಇದಕ್ಕೆ ಕಾರಣ, "ಇಂದಿನ ವೈಜ್ಞಾನಿಕ ಪ್ರಗತಿಯ ಶರವೇಗದ ಜೀವನದಲ್ಲಿ, ಬಹು ಜನಗಳಿಗೆ ಬಹಳ ಹೊತ್ತು ಕೈಯ್ಯಲ್ಲಿ ಪುಸ್ತಕ ಹಿಡಿದು ಕುಳಿತು ತಾದಾತ್ಮಕವಾದ ಓದುಗರಿಗೆ ಬೇಸರವಾಗದಿರಲು" ಹೀಗೆ ಮಾಡಲಾಗಿದೆ ಎನ್ನುತ್ತಾರೆ ಇದರ ಸಂಕಲನಕಾರರು.

ಈ ಕೃತಿಯ ಉದ್ದೇಶವನ್ನು ವಿವರಿಸುತ್ತಾ ಅವರು, "ನಮ್ಮ ಚೆಲುವ ಕನ್ನಡ ನಾಡಿನ ಕವಿಪುಂಗವರ ಮತ್ತು ಕವಯಿತ್ರಿಯರ ಕಾವ್ಯಕಲಾ ತಪಸ್ಸಿನಿಂದ ರಸಸ್ಯಂದಿಯಾಗಿ ಹೊರಹೊಮ್ಮಿರುವ, ಕಾವ್ಯ ಸೂರ್ಯನ ಗೆಜ್ಜೆನಾದದ ಹೊನ್ನುಡಿಗಳು. ನಮ್ಮ ಕನ್ನಡ ಕಾವ್ಯ ಪ್ರೇಮಿಗಳ ಮನೋಮಂದಿರದಲ್ಲಿ ಹಚ್ಚಹಸಿರಾಗಿ ಉಳಿದು, ಅವುಗಳನ್ನು ಆಗಾಗ ಮೆಲುಕು ಹಾಕಿ ಆನಂದಿಸುವಂತಾಗಬೇಕೆಂಬ ಏಕೈಕ ಸದುದ್ದೇಶದಿಂದ ನಾವು "ಕನ್ನಡ ಕಾವ್ಯಗಳ ಗೆಜ್ಜೆನಾದ"ವೆಂಬ ಸಂಕಲನ ಗ್ರಂಥವನ್ನು ಕನ್ನಡ ಮಾತೆಯ ಮತ್ತು ಕನ್ನಡ ಕವಿಗಳ ಪಾದಾರವಿಂದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾ, ಹೊರತರುತ್ತಿದ್ದೇವೆ" ಎಂದು ವಿನಮ್ರವಾಗಿ ತಿಳಿಸುತ್ತಾರೆ.

ಈ ಕೃತಿ ನಿಜಕ್ಕೂ 'ವಿಶಿಷ್ಟ' ಎನಿಸುವಂತಹುದು. ಈ ವೈಶಿಷ್ಟ್ಯ ಬಹುಮುಖಿಯಾದದ್ದು ಎನ್ನುವ ನಿವೃತ್ತ ಕನ್ನಡ ಪ್ರಾಧ್ಯಾಪಕ ಹಾಗೂ ಪ್ರಸಿದ್ಧ ಸಾಹಿತಿ ಡಾ. ಎ. ಎಸ್. ವೇಣುಗೋಪಾಲರಾವ್ ಅವರು ತಮ್ಮ "ನಲ್ ನುಡಿ"ಯ ಮುನ್ನುಡಿಯಲ್ಲಿ ಈ ಸಂಕಲನ ಕೃತಿಯಾದರೋ ಕೇವಲ ನಾಲ್ಕಾರು ಕವಿಗಳ ಒಂದೆರಡು ಕಾವ್ಯಗಳ ಕಿರು ಸಂಕಲನವಲ್ಲ. "ಈ ಕೃತಿಯ ಉದ್ದೇಶ ಅಷ್ಟು ಸೀಮಿತವಲ್ಲ. ಬದಲಾಗಿ, ಕ್ರಿ. ಶ. ಐದನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದ ಆಚೆಗೂ ಮೊರೆಯುತ್ತಾ ಹರಿಯುತ್ತಿರುವ ಕನ್ನಡ ಕಾವ್ಯವಾಹಿನಿಯ ಜೀವಂತಿಕೆಯನ್ನೂ, ಬೆಡಗು ಬಿನ್ನಾಣಗಳನ್ನೂ ರಸಸ್ಯಂದಿಯಾದ ಆಪ್ತತೆ, ಆರ್ದತೆ, ವೈಶಾಲ್ಯ, ಮುಂಗಾಣ್ಕೆಗಳನ್ನೂ ಹೃದಯಸ್ಪರ್ಶಿಯಾಗಿಸುವ, ಬೃಹತ್ ಸಂಪುಟ ಇದು. ಏನುಂಟು ಏನಿಲ್ಲ ಈ ಕನ್ನಡ ಶಾರದೆಯ ಗೆಜ್ಜೆನಾದದ ಝುಂಕೃತಿಯಲ್ಲಿ ಈ ಕೃತಿ ನಿಜಕ್ಕೂ ಸುಕೃತಿ ತನ್ನ ಬೃಹತ್ತು ಮಹತ್ತು ಹಾಗೂ ದರ್ಶನದ ವೈಭವದಲ್ಲಿ ಉತ್ತಮ ಆಕರ ಗ್ರಂಥ, ಮಾಹಿತಿ ಗ್ರಂಥ. ಸದ್ಯಃ ಫಲಕ್ಕೆ ಮಾತ್ರವಲ್ಲ. ಮುಂದಿನ ಶೋಧನೆ, ಸಂಶೋಧನೆ, ಪರಿಶೀಲನೆ, ಸೂಕ್ಷ್ಮಾತಿ ಸೂಕ್ಷ್ಮ ಅಧ್ಯಯನ, ವಿಮರ್ಶೆ, ನಿಬಂಧ, ಮಹಾ ಪ್ರಬಂಧಗಳಿಗಾಗಿ ಸಮೃದ್ಧ ಆಹಾರ ಈ ಸಂಕಲನದಲ್ಲಿ ದೊರೆಯುತ್ತದೆ. ಕನ್ನಡ ಕಾವ್ಯದ ಶ್ರೀಮಂತಿಕೆಯ ತೋರುಗಂಬವೂ, ದೇಗುಲದ ಶಿಖರದ ಹಾರು ಬಾವುಟವೂ ಆಗಿಬಿಡುತ್ತದೆ" ಎಂದು ಗ್ರಂಥದ ಮಹತ್ವವನ್ನು ಎತ್ತಿ ತೋರುತ್ತಾರೆ.

ಅವರು ಮುಂದುವರಿದು, "ಈ ಸಾಹಸ ಯಾರನ್ನು ವಿಸ್ಮಯ ಮೂಕರನ್ನಾಗಿಸದು. ಗೆಜ್ಜೆನಾದವನ್ನು ಒಟ್ಟಾಗಿ ಗಮನಿಸಿದಾಗ 18–19ನೇ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ, ಅದರಲ್ಲೂ ಹಳೆಯ ಮೈಸೂರು ಪ್ರಾಂತ್ಯದ ಮಹತ್ವದ ರಚನೆಗಳನ್ನು, ಕೃತಿಕಾರರನ್ನು ಹಿಂದಿನ ಸಾಹಿತ್ಯ ಚರಿತ್ರೆಕಾರರು ಗಮನಿಸಿದಂತಿಲ್ಲ ಎಂಬ ವಿಷಾದದ ಸಂಗತಿಯನ್ನು ದಾಖಲಿಸಲೇಬೇಕಿದೆ. ಇದು ಅಧಿಕೃತ ಸಾಹಿತ್ಯ ಚರಿತ್ರೆಯೆಂದೇ ವಿದ್ವಾಂಸರು ಪರಿಗಣಿಸಿರುವ ಡಾ.ರಂ.ಶ್ರೀ. ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಗೂ ಅನ್ವಯವಾಗುತ್ತದೆ" ಎನ್ನುತ್ತಾ, "ವಿದ್ವತ್ ಸಂಶೋಧನೆ ಒಂದು ವಿಶ್ವವಿದ್ಯಾನಿಲಯದ ಪಂಡಿತ ವರ್ಗ ಮಾಡಬಹುದಾಗಿದ್ದ ಬೃಹತ್ ಕಾರ್ಯವನ್ನು ಶ್ರೀ ಎ. ವಿ. ಸೂರ್ಯನಾರಾಯಣ ಸ್ವಾಮಿಗಳು ಮತ್ತು ಶ್ರೀಯುತ ಗೋವಿಂದಗೌಡರು ಯಮಳ ಸೋದರ ರಂತೆ ಅಭಿನ್ನರಾಗಿ ಶ್ರಮಿಸಿ ಸಫಲರಾಗಿದ್ದಾರೆ. ಅವರ ಸಾಹಿತ್ಯ ಸಂಶೋಧನೆ, ಪರಿಷ್ಕರಣೆ, ಪ್ರಕಟಣೆ ಒಂದು ಅನನ್ಯ ಸಾಹಿತ್ಯ ಸಾಹಸ ಎಂಬುದನ್ನು ಹರ್ಷಬಾಷ್ಪದಿಂದಲೇ ದಾಖಲಿಸುತ್ತಿದ್ದೇನೆ" ಎಂದು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ಅಂತಹ ಅಪೂರ್ವ ಕೆಲಸ ಮಾಡಿದ್ದಾರೆ ಇವರೀರ್ವರೂ. ಕನ್ನಡ ಭಾಷಾಭಿಮಾನಿಗಳಿಗೆಲ್ಲ, ಕಾವ್ಯಾಸಕ್ತರಿಗೆಲ್ಲ, ಸಂಶೋಧಕರಿಗೆಲ್ಲ ವಿಶೇಷವಾಗಿ ಪ್ರಯೋಜನವಾಗುವ ಸಮಗ್ರ ಕನ್ನಡ ಕಾವ್ಯ ಸಂಪುಟಗಳನ್ನು ತಂದು ಸೂರ್ಯನಾರಾಯಣಸ್ವಾಮಿಯವರು ಮತ್ತು ಗೋವಿಂದಗೌಡರು ಅಪರೂಪದ ಕೆಲಸ ಮಾಡಿದ್ದಾರೆ. ಸ್ತುತ್ಯಾರ್ಹ ಕಾರ್ಯ ಮಾಡಿದ್ದಾರೆ. ಕನ್ನಡಿಗರಿಗೆ ವಿಶಿಷ್ಟ ಕೊಡುಗೆ ನೀಡಿದ್ದಾರೆ.

ಮೈಸೂರಲ್ಲಿ ಅಂಚೆ ನೌಕರರ ಪ್ರತಿಭಟನೆ



ಮೈಸೂರು,ಆ.10(ಪಿಎಂ)–ಅಂಚೆ ಇಲಾಖೆಯನ್ನು ಕೇಂದ್ರ ಸರ್ಕಾರ ಖಾಸಗೀಕರಣ ಮಾಡಲು ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿ ಹಾಗೂ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಅಂಚೆ ಇಲಾಖೆ ನೌಕರರ ಸಂಘಟನೆಗಳು ಬುಧವಾರ ರಾಷ್ಟ್ರವ್ಯಾಪಿ ಒಂದು ದಿನದ ಮುಷ್ಕರಕ್ಕೆ ಕರೆ ನೀಡಿದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿಯೂ ಮುಷ್ಕರ ನಡೆಸಲಾಯಿತು.

ಮುಷ್ಕರದೊಂದಿಗೆ ನೆಹರು ವೃತ್ತದಲ್ಲಿರುವ ಪ್ರಧಾನ ಅಂಚೆ ಕಚೇರಿ ಎದುರು ಗಂಟೆಗೂ ಹೆಚ್ಚು ಕಾಲ ಸಾಂಕೇತಿಕ ಪ್ರತಿಭಟನೆಯನ್ನೂ ನಡೆಸಲಾಯಿತು. ಆಲ್ ಇಂಡಿಯಾ ಪೋಸ್ಟಲ್ ಎಂಪ್ಲಾಯೀಸ್ ಯೂನಿಯನ್ (ಎಐಪಿಇಯು) ಮೈಸೂರು ವಿಭಾಗದ ನೇತೃತ್ವದಲ್ಲಿ ಮುಷ್ಕರ ಹಾಗೂ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರ್ಕಾರ, ನೌಕರರ ವಿರೋಧಿ ಧೋರಣೆ ಅನುಸರಿಸುತ್ತಿದೆ. ಖಾಸಗೀಕರಣಕ್ಕೆ ಪೂರಕವಾದ ಯೋಜನೆಗಳನ್ನು ಅಂಚೆ ಇಲಾಖೆಯಲ್ಲಿ ಜಾರಿಗೊಳಿಸಲಾಗುತ್ತಿದೆ. ಆ ಮೂಲಕ ಇಲಾಖೆಯ ಖಾಸಗೀಕರಣಕ್ಕೆ ಹಂತಹಂತವಾಗಿ ಕ್ರಮ ವಹಿಸಲಾಗುತ್ತಿದೆ ಎಂದು ಪ್ರತಿಭಟನಾನಿರತ ಅಂಚೆ ನೌಕರರು ಆಕ್ರೋಶ ವ್ಯಕ್ತಪಡಿಸಿದರು.

ಡಾಕ್ ಮಿತ್ರ ಯೋಜನೆ ಸೇರಿದಂತೆ ಮೊದಲಾದ ಯೋಜನೆಗಳ ಮೂಲಕ ಅಂಚೆ ಇಲಾಖೆಯನ್ನು ಖಾಸಗೀಕರಣ ಮಾಡಲು ಸರ್ಕಾರ ಮುಂದಾಗಿದೆ. ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ (ಪಿಓಎಸ್‌ಬಿ) ಅನ್ನು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐಪಿ ಪಿಬಿ) ಎಂಬ ಖಾಸಗಿ ಸಂಸ್ಥೆಗೆ ಸ್ಥಳಾಂತರಿಸುವ ನಿರ್ಧಾರ ಕೈಬಿಡಬೇಕು ಎಂದು ಒತ್ತಾಯಿಸಿದರು. ನೂತನ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹಳೇ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು. ಗ್ರಾಮೀಣ ಡಾಕ್ ಸೇವಕರಿಗೆ ನಾಗರಿಕ ಸೇವಕ ಸ್ಥಾನಮಾನ ನೀಡಬೇಕು ಮತ್ತು ಅವರ ಸೇವೆಯನ್ನು ಕ್ರಮಬದ್ಧಗೊಳಿಸಬೇಕು. 8ನೇ ಕೇಂದ್ರ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ನೀಡಬೇಕು. 2020ರ ಜನವರಿಯಿಂದ 2021ರ ಜೂನ್‌ವರೆಗೆ ತಡೆಯಿಡಿದಿರುವ ಬಾಕಿ ಭತ್ಯೆಗಳನ್ನು ಪಾವತಿ ಮಾಡಬೇಕು ಎಂದು ಆಗ್ರಹಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಐಪಿಇಯು ಮೈಸೂರು ವಿಭಾಗದ ಕಾರ್ಯದರ್ಶಿ ಎನ್.ವನಜಾಕ್ಷ, ಜಿಲ್ಲೆಯಲ್ಲಿ ನಮ್ಮ ಸಂಘಟನೆ ನೌಕರರೇ ಶೇ.80ರಷ್ಟು ಇದ್ದಾರೆ. ಅವರು ಯಾರೂ ಇಂದು ಕರ್ತವ್ಯ ನಿರ್ವಹಿಸಿಲ್ಲ. ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಬಹುತೇಕ ಅಂಚೆ ಕಚೇರಿಗಳು ಮುಚ್ಚಲ್ಪಟ್ಟಿದ್ದವು. ಮುಷ್ಕರ ಯಶಸ್ವಿಯಾಗಿದೆ ಎಂದು ತಿಳಿಸಿದರು. ಎಐಪಿಇಯು ಮೈಸೂರು ವಿಭಾಗದ ಅಧ್ಯಕ್ಷ ಎನ್.ಕೃಷ್ಣ, ನೌಕರರ ಮುಖಂಡರಾದ ಕೆಂಡಗಣ್ಣಯ್ಯ, ಹೆಚ್.ಜಿ.ರಾಜು, ಆರ್.ಪ್ರಶಾಂತ್, ಎಂ.ಎನ್.ಗಿರಿಧರ್, ಸಿ.ಆರ್.ರಂಗಸ್ವಾಮಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸ್ವಚ್ಛತಾ ವಾಹನಗಳ ಚಾಲಕರು, ಲೋಡರ್ಸ್ ಹುದ್ದೆಗೆ ಟೆಂಡರ್ ಖಂಡಿಸಿ ದಸಂಸ ಪ್ರತಿಭಟನೆ

ಮೈಸೂರು, ಆ.10(ಎಸ್‌ಪಿಎನ್)– ಕಸ ಸಾಗಿಸುವ ವಾಹನಗಳ ಚಾಲಕ ಹಾಗೂ ಲೋಡರ್ಸ್ ಹುದ್ದೆಗಳಿಗೆ (45 ಹುದ್ದೆಗಳಿಗೆ) ಕರೆದಿರುವ ಟೆಂಡರ್ ಹಾಗೂ ಗುತ್ತಿಗೆದಾರನ ಪರವಾನಗಿಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರು ಹೂಟಗಳ್ಳಿ ನಗರಸಭೆ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಎಸ್.ಮಂಜುನಾಥ್ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ಹೊರಹಾಕಿದರು. ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೂಟಗಳ್ಳಿಯ ನಗರಸಭೆಯ ಕಾರ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅಂದರೆ ಕಸ ತುಂಬುವ ಕಾರ್ಮಿಕರು ಮತ್ತು ಕಸ ಸಾಗಿಸುವ ವಾಹನ ಚಾಲಕರ ಹುದ್ದೆಗಳಿಗೆ ನಗರಸಭೆಯಿಂದ ಮೈಸೂರಿನ ವಿಶ್ವ ಎಂಟರ್‌ಪ್ರೈಸಸ್‌ಗೆ ಗುತ್ತಿಗೆ ನೀಡಲಾಗಿದೆ ಎಂದು ತಿಳಿಸಿದರು.

ಇದರಲ್ಲಿ 17 ಚಾಲಕ ಹಾಗೂ 18 ಲೋಡರ್ಸ್ ಹುದ್ದೆಗಳಿಗೆ ಗುತ್ತಿಗೆ ಪಡೆದಿರುವ ಮಾಲೀಕರು ಟೆಂಡರ್ ಕರೆದು ಅಮಾಯಕರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದು, ಇದನ್ನು ತಪ್ಪಿಸುವಂತೆ ಒತ್ತಾಯಿಸಿದರಲ್ಲದೆ, ಸ್ಥಳೀಯ ನಿರುದ್ಯೋಗಿ ಯುವಕರಿಗೆ ಈ ಹುದ್ದೆಗಳನ್ನು ನೀಡಬೇಕೆಂದು ಸ್ಥಳೀಯ ಶಾಸಕರಾದ ಜಿ.ಟಿ.ದೇವೇಗೌಡರು ಸೂಚನೆ ನೀಡಿದ್ದರೂ ಟೆಂಡರ್ ಪಡೆದಿರುವ ಗುತ್ತಿಗೆದಾರರು, ಹೆಚ್ಚಿನ ಹಣ ಪಡೆದು ಬೇರೆಯವರಿಗೆ ಈ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು, ಸ್ಥಳೀಯ ಯುವಕರನ್ನು ಕಸ ಸಂಗ್ರಹ ವಾಹನಗಳ ಚಾಲಕ ಹಾಗೂ ಲೋಡರ್ಸ್ ಹುದ್ದೆಗಳಿಗೆ ನೇಮಿಸಲು ನಿರ್ಲಕ್ಷ್ಯ ಧೋರಣೆ ತಾಳಿರುವ ಈ ಗುತ್ತಿಗೆದಾರರ ಪರವಾನಗಿ ರದ್ದುಗೊಳಿಸಿ, ನಗರಸಭೆಯಿಂದಲೇ ನೇರ ನೇಮಕಾತಿ ಮಾಡಿಕೊಳ್ಳುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು. ದಸಂಸ ಮುಖಂಡರಾದ ನಂಜುಂಡ ಮೌರ್ಯ, ಶಂಕರ್, ಸಿದ್ದರಾಜು, ಸಿ.ಮಂಜುನಾಥ್, ಮಹೇಶ್, ರಾಧಾ ಸುಕನ್ಯಾ, ತಾಯಮ್ಮ ಸೇರಿದಂತೆ ಇತರೆ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ
30x40
W/ Face, J.P.Nagar, ರಿಂಗ್ ರೋಡ್, ಹತ್ತಿರ
9886644944
9886644944

ಗೌರಿ ಗಣೇಶ
ಹಬ್ಬಕ್ಕೆ ಆರ್ಕೇಸ್ಟ್ರಾ ಕಾರ್ಯಕ್ರಮಕ್ಕೆ ಸಂಪರ್ಕಿಸಿ



PRK
ಮ್ಯೂಸಿಕ್ ಆರ್ಕೇಸ್ಟ್ರಾ, ಮೈಸೂರು
9902639555

ಜಮೀನು ಮಾರಾಟಕ್ಕಿದೆ
ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಕೋಮ್ಮೇರಹಳ್ಳಿ ಗ್ರಾಮದಲ್ಲಿ 1 ಎಕರೆ, 7 ಗುಂಟೆ ಜಮೀನು ಮಾರಾಟಕ್ಕಿದೆ.
9483084345
6362703932

ಬೇಕಾಗಿದ್ದಾರೆ
ಬ್ಯೂಟಿಷಿಯನ್ (Female)
ಸಂಬಳ: 8000-10,000
Trendz the Beauty Saloon
ಸರಸ್ವತಿಪುರಂ, ಮೈಸೂರು.
9742142115

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

ಬಸವರಾಜು ಬಿಲ್ಡರ್ಸ್
ಯಾವುದೇ ಅಡ್ವಾನ್ಸ್ ಇಲ್ಲದೇ ಶೇ.5% ಕೆಲಸ ಮುಗಿಯುವವರೆಗೆ ಸಾಮಾನು (ಮೆಟಿರೀಯಲ್ಸ್) ಸಹಿತ ವಾಸ್ತು ಪ್ರಕಾರ ಅಂದವಾದ ಮನೆಗಳನ್ನು ಕಟ್ಟಿಕೊಡುತ್ತೇವೆ.
9845953751

WANTED
Telelcallers - 5 Posts
Qualification: PUC & above, Experience: Freshers or 1 year. Work Place: Vivekananda Nagar, Mysore. Contact:
8105519836

ಬೇಕಾಗಿದ್ದಾರೆ
ಎಲ್ಲಾ ಜಿಲ್ಲೆಗಳಲ್ಲಿರುವ MNC / NON MNC ಕಂಪನಿಗಳಿಗೆ ಯುವಕ – ಯುವತಿಯರು ಬೇಕಾಗಿದ್ದಾರೆ. Company Work / Office Work / Security/ House Keeping / Helpers / Packing. 7th, 10th, PUC, ITI, Diploma, Degree Pass / Fail ಸಂಬಳ 13,000-20,000. Contact:
9844602275

ಮೈಸೂರು ಮ್ಯಾರೇಜ್ ಲಿಂಕ್ಸ್
ವಧು ವರರನ್ನು ಹುಡುಕಲು ಸಹಾಯಬೇಕೇ? ನಮಗೆ ಕರೆ ಮಾಡಿ
ಡಾ.ಗುರೂಜಿ ಮೈಸೂರು
6361740552
Lady Receptionist ಬೇಕಾಗಿದ್ದಾರೆ

HOUSE FOR RENT
Two Bed Room house is available for Rent on Sanjeravi Road, Behind Jagadamba Petrol Bunk in Kuvempunagar, Mysore. Contact
9945799886

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

ಶ್ರೀ ಗೌರಿ ಶಂಕರ ಟ್ರಾವೆಲ್ಸ್
26.09.2022 (7 ದಿನ): ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯ, ಬಾಬಾಬೈದ್ಯನಾಥ್ ದಿಯೋಗರ್ ಇತ್ಯಾದಿ.
8.10.2022 (12/18 ದಿನ): ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರಿನಾಥ್, ಉತ್ತರಕಾಶಿ, ಗುಪ್ತಕಾಶಿ, ಮಾನ, ಹರಿದ್ವಾರ್, ದೆಹಲಿ, ಇತ್ಯಾದಿ (ವಿಮಾನ, ಟ್ರೈನ್ ಮತ್ತು ಬಸ್) (ಊಟ, ವಸತಿ ಸೇರಿರುತ್ತದೆ.)
9620002114

MUDA APPROVED SITES
30x40, 30x50, 20x30
ReRa & Bank
ಸಾಲದೊಂದಿಗೆ ಬೆಳವಾಡಿ (ವಿಜಯನಗರ 4ನೇ ಹಂತ) ಹುಣಸೂರು ರಸ್ತೆಗೆ 1.5 km
9035565773

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ದೋಸೆ ಕುಕ್, ಸೌತ್ ಇಂಡಿಯನ್ ಕುಕ್, ಸೌತ್ ಇಂಡಿಯನ್ ಅಸಿಸ್ಟೆಂಟ್, ರುಬ್ಬುವುದು, ಕಟ್ಟಿಂಗ್ ಮಾಡುವವರು, ನಾರ್ತ್ ಇಂಡಿಯನ್ ಅಸಿಸ್ಟೆಂಟ್, ಕಾಫಿ, ಜ್ಯೂಸ್ ಮಾಡುವವರು, ಚಾಟ್ಸ್ ಕೌಂಟರ್, ವೈಟರ್, ಹೆಲ್ಪರ್ಸ್ (ಹೆಂಗಸರಿಗೂ ಅವಕಾಶವಿದೆ) ಸಂಪರ್ಕಿಸಿ:
6362498234

Star Solar
Renewable Energy



JUST Easy EMI
Offer Last 2 Days Only
*5 /10 Years Guaranty
19,499/-
200 Ltr
www.starsolar.net
Old system Exchange offer available
Manufacturing : Belawadi Industrial Sub,Mysore
9945616293 / 9449966293

ಮುಡಾ ಅಪ್ರೂವ್ಡ್ ಸೈಟ್ಸ್, ಮೈಸೂರು ರೆಡಿ ಫಾರ್ ಸೇಲ್
30x40, 40x60, 50x80
ಸೈಟ್ಸ್, ಆನಂದಸಾಗರ್, ನಿತ್ಯಾನಂದಸಾಗರ, ಪರಮಾನಂದ ಸಾಗರ, ಸುಖಾನಂದ ಸಾಗರ, ಆತ್ಮಾನಂದಸಾಗರ, ಕುಬೇರಾನಂದಸಾಗರ, ವಿಜಯನಗರ ಮತ್ತು ಬೇಕಾದ ಏರಿಯಾಗಳಲ್ಲಿ ಸೈಟ್ಸ್‌ಗಾಗಿ ಸಂಪರ್ಕಿಸಿ
9019040617 / 8147474199
8971741751

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS	8000/-
	Age Limit	18 to 35

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಸೋಲಾರ್ ವಾಟರ್ ಹೀಟರ್
Solar Water Heater
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ



Vinaykrishna
9611648636

SITE FOR SALE
40x60 MUDA
alloted with Clear Documents. Kesare 3rd Stage, Near Pushpa Ashram.
Brokers Excuse.
8095443308

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ಯುವಕ, ಯುವತಿಯರು, ಮಹಿಳೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ, ಸಂಬಳ: 10,000 ರಿಂದ 15,000. ಮೊದಲು ಬಂದವರಿಗೆ ಆದ್ಯತೆ.
9035324777 / 9035081222
7259306665

HE & SHE CHRISTION MATRIMONY
ಕ್ರೈಸ್ಥ ವಧು –ವರರ ಎಲ್ಲಾ ಪಂಗಡಗಳ ಸಮುದಾಯದವರು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಿ. 1 ವರ್ಷ ಉಚಿತ ಸೇವೆ. 50 ಸಾವಿರಕ್ಕೆ ಮದುವೆ ಮಾಡಿಕೊಡಲಾಗುವುದು. ಮೊತ್ತಬ್ಬರಿಗೆ ದಾರಿ ತೋರಿಸಿ. ಬದುಕಲು ಅವಕಾಶ ಮಾಡಿಕೊಡಿ. Meeting Time:- 4pm to 6pm. M.V.Nelson
9880099929 / 9844446469

ಬಾಡಿಗೆಗೆ / ಭೋಗ್ಯಕ್ಕಿದೆ
1) 4000 ಚದರ ಅಡಿ ನೆಲ ಮಹಡಿ
2) 4000 ಚದರ ಅಡಿ ಮೊದಲನೆ ಮಹಡಿ
3) 15000 ಚದರ ಅಡಿ ಖಾಲಿ ಜಾಗ
ಸ್ಥಳ : ಎಲ್.ಜಿ. ಬಾಲಕೃಷ್ಣ & ಬ್ರದರ್ಸ್, (ಚೈನ್ ಫ್ಯಾಕ್ಟರಿ ಪಕ್ಕ) ಜೆ.ಪಿ.ನಗರ, ಮೈಸೂರು
: ಸಂಪರ್ಕಿಸಿ :
Ph.: 9986756866

ಬೋಳು ತಲೆಯ ಸಮಸ್ಯೆಯೇ?



ಕಿಮೊತರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

S M GOLD COMPANY
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5500
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

Sudarshan Saur
SOLAR WATER HEATER



ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

SITE FOR SALE
60x40 feet,
East facing, Site at beautiful Layout Ahad City 6km from Ring Road Towards Mahadevapura Road.
Rs. 1500-00 per SFT. Contact:
9901231117

ಮೈಸೂರಿನಲ್ಲಿ ಉದ್ಯೋಗ
ಕುವೆಂಪುನಗರದಲ್ಲಿರುವ B.M.A.W Groups ಕಂಪನಿಯಲ್ಲಿ ಖಾಲಿಯಿರುವ 278 ವಿವಿಧ ಹುದ್ದೆಗಳಿಗೆ ಗ್ರಾಮೀಣ + ನಗರದ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ:– SSLC (Pass), PUC, ITI, JOC, Dip, Any Degree etc. ವಯೋಮಿತಿ: 18 to 32 years, ತಿಂಗಳಿಗೆ 26,000 – 34,000 (ಉಚಿತ ವಸತಿಯೊಂದಿಗೆ ಗ್ರಾಮೀಣದವರಿಗೆ ಹೆಚ್ಚಿನ ಆದ್ಯತೆ) ರೂಪಶ್ರೀ:–
6360560825 / 9844219943

ಮಂಗಳೂರಿನಲ್ಲಿ ಹೋಂನರ್ಸ್ ಕೆಲಸಕ್ಕೆ ಜನ ಬೇಕಾಗಿದ್ದಾರೆ.
ಮಹಿಳೆಯರ ವೇತನ 16,000–18,000
ಪುರುಷರ ವೇತನ 18,000–22,000
ಸಂಪರ್ಕಿಸಿ:
WeCare Home Nursing
8105890333 / 8792127333

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
20X30, 30X40 & 30X50
ಪೊಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು. ಸಂಬಳ: 8000 – 10000 ರವರೆಗೆ, ಸ್ಥಳ: ಎನ್.ಆರ್.ಮೊಹಲ್ಲಾ, ಚಾಮುಂಡಿಪುರಂ, GTR Hotel ಹತ್ತಿರ, Field Work ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 15,000 (Life Insurance) ಕಂಪ್ಯೂಟರ್ ಜ್ಞಾನವುಳ್ಳ (ಕನ್ನಡ, ಇಂಗ್ಲೀಷ್, ಹಿಂದಿ)
8050912616

ಮನೆ ಬಾಡಿಗೆಗೆ ಇದೆ
20x30, 314/D
2ನೇ ಕ್ರಾಸ್, 2ನೇ ಮೇನ್, 2ನೇ ಹಂತ, ಪೂರ್ವ ದಿಕ್ಕು ಪಾರ್ಕ್‌ನ ಎದುರು, 'ಎಂ' ಬ್ಲಾಕ್, ಕುವೆಂಪುನಗರ, ಮೈಸೂರು
8825961290

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Apartment for Sale
4 BHK Duplex, East facing (HIG - 1st Floor) at Sharadadevinagar, 2 balcony, 1 common & 1 attached B/R.
Call: 96868 34455

2 ಸೈಟುಗಳು ಹುಣಸೂರಿನಲ್ಲಿ ಮಾರಾಟಕ್ಕಿವೆ
ಸೈಟ್ ನಂ. 163, 164, 9x12 ಮೀ ಅಳತೆ, North ದಿಕ್ಕು, ಪ್ರೀತಿ ಲೇಔಟ್, ಚಿಕ್ಕ ಹುಣಸೂರು, ಟೈಟಲ್ ಡೀಡ್, ಖಾತಾ ಹೊಂದಿರುವ ಸೈಟುಗಳು. ಸಂಪರ್ಕಿಸಿ:
Mob: 9972045518

LAPTOP REPAIR JOB & TRAINING
1) Laptop Repair. (2) Desktop Repair. (3) Peripheral's Repair 4) CCTV Installation.
Training fees: 25,000/-
Duration: 3 months.
*Intel Core-i3 Laptop Fre (RF)
Loan facility available to join. Call
9663579654, 9902955544

HOUSE FOR RENT
Two bedrooms house for rent 1st Floor, near Nirmala Convent, 55, 6th Cross, Gokulam 1st Stage, Mysore.
9986589770, 9986724216

ನಿಮ್ಮ ತಾರಸಿ ಸೋರುತ್ತಿದಿಯೇ
ನಿಮ್ಮ ಮನೆಯಲ್ಲಿ ನಲ್ಲಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ.. ಕರೆಮಾಡಿ
VASANTHA BUILDERS
9035012579
8151035074

ಬೇಕಾಗಿದ್ದಾರೆ
ಫರ್ನೀಚರ್ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ ಅನುಭವವುಳ್ಳ ಪುರುಷರು / ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
9902435523

FOR SALE
30x40 Duplex, Vijayanagar 2nd Stage.
Mob: 9741628964

Document Lost
I, Noor Fathima, residing at Door No. 11/2, 11th Cross, St. Mary's Road, N.R. Mohalla, Mysore-570 007, have lost Allotment and Possession Letter for Property No. 32, MUDA, 4437/1 L14 Corporation while renovation. Finders contact:
Mob: 9986782231

House For Rent
2 BHK, First Floor Shakthinagar, Behind Sub Register Office
Mob: 8618767165

ಮನೆ ಭೋಗ್ಯಕ್ಕಿದೆ
40X30, 2 ಬೆಡ್ ರೂಂ, # 1107, 6ನೇ ಮೇನ್, ಕೆನರಾ ಬ್ಯಾಂಕ್ ಎದುರು ಶ್ರೀರಾಂಪುರ, ಸಂಪರ್ಕಿಸಿ
7090354487

SECURITY REQUIREMENT
In Vontikoppal, St. Josheph School, Sathagalli, St. Joseph Women College
8951212305 / 9972910382

WANTED
Wholesale Medical Shop ಗೆ
Office Boys - 3
Order Boys - 3
ಹುಡುಗಿಯರು – 3
10th, PUC, Pass or Fail, Degree
9008899043 / 9739377827
7899999038

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟು / ಮನೆ – ಕೊಳ್ಳಲು / ಮಾರಲು
ಸೈಟು ಮಾರಾಟಕ್ಕಿದೆ
40x60 ಪರಮಾನಂದ ಸಾಗರ, ಲೇಔಟ್, MUDA Approved
9538412881

WE ARE HIRING
Receptionist (Female)
Digital Marketing (Male)
Marketing & Sales Executives (Male)
Telecallers (Female)
RVIN GROUP
Mail: rvingroup@gmail.com
Call & Whatsapp:
9901387775

SITE FOR SALE
40x60 NORTH
Dwarakanagar, No.386.
Rs. 45 Lakhs
Genuine Buyer Contact:
9741514776

ಬೇಕಾಗಿದ್ದಾರೆ
ಸಂಭ್ರಮ ಬಾರ್ & ರೆಸ್ಟೋರೆಂಟ್
ಸಪ್ಲೈಯರ್, ಕ್ಲೀನರ್ ಹಾಗೂ ಭಟ್ಟರು
9945108109 / 9900422201

URGENTLY REQUIRED
(Only Ladies)
Computer Operator and one who can handle backend work. Attractive Salary & Incentive.
Wanted Experienced DRIVERS
6360171713 / 7406708748

ಬೇಕಾಗಿದ್ದಾರೆ
ಹುಡುಗರು ಬೇಕಾಗಿದ್ದಾರೆ. ಎಲೆಕ್ಟ್ರಿಕ್ ಸ್ಕೂಟರ್ ಶೋ ರೂಂನಲ್ಲಿ ಸೇಲ್ಸ್ ವಿಭಾಗಕ್ಕೆ ಕೆಲಸ ಮಾಡಲು ಆಸಕ್ತಿಯುಳ್ಳವರು / ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ. ಟಿ.ಕೆ.ಲೇಔಟ್, ಮೈಸೂರು.
9845303731 / 9742130003

ಬೇಕಾಗಿದ್ದಾರೆ
ಮನೆ ಕೆಲಸ ಮಾಡಲು 45 ವಯಸ್ಸಿನ ಒಳಗಿನ ಮಹಿಳೆಯರು ಬೇಕಾಗಿದ್ದಾರೆ. ಸಮಯ: 9.30 ರಿಂದ 6 ರವರೆಗೆ, ಸ್ಥಳ: ಶ್ರೀರಾಂಪುರ
7676111076

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass/Fail ಆದವರಿಗೆ Packing, Helper, Checking, Billing, front office, Telephone Attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14000–39000 ಸೇರಿ. ಸಂಪರ್ಕಿಸಿ:
9353753194 / 9980630131

ಕಾಯರ್ ಎಂಪೋರಿಯಂ
ಕರ್ನಾಟಕ ಸರ್ಕಾರದ ಉದ್ದಿಮೆಯಾದ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ, ಶಾಖೆಯಾದ ಕಾಯರ್ ಎಂಪೋರಿಯಂ ಮಾರಾಟ ಮಳಿಗೆ ನಂ.15, ವಿ.ವಿ.ಕಟ್ಟಡ ಹಿಂಭಾಗ, ಕೆ.ಆರ್.ಆಸ್ಪತ್ರೆ, ಮೈಸೂರು–570001. ಇಲ್ಲಿ ಶೇಕಡ 20% ರಿಯಾಯಿತಿಯಲ್ಲಿ ತೆಂಗಿನ ನಾರಿನ ಉತ್ಪನ್ನಗಳಾದ ಕಾಯರ್ ಮ್ಯಾಟ್ಸ್, ಮ್ಯಾಟಿಂಗ್ಸ್, ರಬ್ಬರ್ ಮಿಶ್ರಿತ ತೆಂಗಿನ ನಾರಿನ ಮ್ಯಾಟ್ರಸ್, ಪಿಲ್ಲೋಸ್, ಕುಷನ್, ತೆಂಗಿನ ಕಡ್ಡಿಪೊರಕೆ ಮತ್ತು ಇತರೆ ಉತ್ಪನ್ನಗಳು ದೊರೆಯುತ್ತದೆ. ಇಂದೇ ಒಮ್ಮೆ ಭೇಟಿ ಕೊಡಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ದೂರವಾಣಿ ಸಂಖ್ಯೆ: 0821-2425271
ಸಂಚಾರಿ ದೂರವಾಣಿ ಸಂಖ್ಯೆ: 8618818259

HOUSE FOR SALE
30x40
South Facing House #43, 2nd Cross, 3rd Main, Jayanagar, Mysore
9901676374

ಮನೆ ಮಾರಾಟಕ್ಕಿದೆ
30x40
12 Sq.ft. Built, Near St.Joseph Central School, Vijayangar 2nd Stage, 2 BHK, Single Floor, West Facing, 1.20 CR, Negotiable
9008485961

ಮನೆ ಭೋಗ್ಯಕ್ಕಿದೆ
30x40
ನೆಲ ಮಹಡಿ, ಹೊಸಮನೆ, 2BHK, Saint Anne's School ಪಕ್ಕ, ಗಣೇಶ್‌ನಗರ, ಎನ್.ಆರ್.ಮೊಹಲ್ಲ, ಮೈಸೂರು.
9663944172 / 9620751942

ಬೇಕಾಗಿದ್ದಾರೆ
ಪದವೀಧರ ವರನಿಗೆ ವಧು ಬೇಕಾಗಿದೆ. ಗುಂಡ್ಲುಪೇಟೆ, ನಂಜನಗೂಡು, ಬೇಗೂರು ಸುತ್ತಮುತ್ತ ಮ್ಯಾರೇಜ್ ಬ್ರೋಕರ್ಸ್ ಇದ್ದರೆ ಸಂಪರ್ಕಿಸಿ:
9741934744

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

FOR SALE
30x40, 30x50
MUDA Approved Sites
Opp. JK Tyres, KRS Road, Mysore. Ready for Registration With all facilities.
LOHITHYA PROPERTIES
513 ,14main Saraswathi Puram Mysore 570009
9886841683

SITE FOR SALE
Site No.177, N/F on 60 ft Road, Vivekananda Block, Teachers Layout, Mysuru.
40x50,
Per Sq.Ft. Rs.5,500/-
Slightly Negotiable
(Brokers Excuse)
9964482234

DOCUMENT LOST
I, Prathia Rani J. Purchased property bearing house no.8679, 2nd Phase, Vijayanagar 4th Stage, Mysore City. We have lost the orginal Kathaof Mr. Raviraj, No. MYS-1-08620-2012-13 Date: 17/01/2013. The document was registered in MUDA and registered in the office of Sub registrar office, Mysore. Complaint has been lodged on 30/07/2022 in Vijayanagar Police Station Mysore-17 Founder Please Call: 9964179901

SITE FOR SALE
30x40
Jnanabharathi Lay-out 2nd Stage, Dadada Halli, East Face, MUDA Khata, Direct Selling by Owner
Price: 21 Lacs
9342123373

WANTED
Female Telecaller - 4
Female candidates - 10
Male candidates - 8
For data entry operator
More information call Media tv
9743283001

FOR SALE
A)30x40 30x50 sites available attch Brahmins E blk layout
B) 40x60 site Hebbal near Kalyani hotel
C) 40x60 N/E Corner Aditya Circle Near Dattagalli
D) 20x30 G+1 New House University layout
E)12 x36 House Near Vijaya Bank Circle Kuvempu Nagar
PRAKRUTHI PROPERTIES
90359 90359 / 95386 90359

ಮನೆ ಬಾಡಿಗೆಗೆ ಇದೆ
E242, 3ನೇ ಕ್ರಾಸ್, 1ನೇ ಹಂತ, ಗ್ರೌಂಡ್ ಫ್ಲೋರ್, ಕಾರ್ನರ್ ಮನೆ, ಮೇಘಾ ಮೆಡಿಕಲ್ ಡೌನ್ ರಸ್ತೆ, ಕುವೆಂಪುನಗರ, ಮೈಸೂರು.
9886973148
7975441365

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಮೈಸೂರಿನ ಸುತ್ತಾಮುತ್ತಾ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ಬೇಕಾಗಿದ್ದಾರೆ. ವಯಸ್ಸು:20 ರಿಂದ 45 ವರ್ಷಗಳು, ಅಗತ್ಯ ವಿವರಗಳೊಂದಿಗೆ ಸಂಪರ್ಕಿಸಿ:– #380/ಎ, 2ನೇ ಮಹಡಿ, ಕೃಷ್ಣವಿಲಾಸ ರಸ್ತೆ, ಮೈಸೂರು
9513089922

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಸಂಬಳ: 12,000 ರಿಂದ 18,000 (ESI, PF ಸೌಲಭ್ಯ ಇರುತ್ತದೆ.)
8050699742 / 7892480649

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ, ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time- Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary / PF - EST, Age: above 30 year's
9008799156
8861611395

WANTED
KIDSPACE PLAY AREA
ವಿಜಯನಗರ 3rd Stage ನಲ್ಲಿರುವ ಕಂಪನಿಗೆ Receptionist (Basic Computer Knowledge) Female candidate only living in and around Vijayanagar 3rd Stage
9900402149

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಮಡಿಕೇರಿ–ಮಂಗಳೂರು ಹೆದ್ದಾರಿಯಲ್ಲಿ ಬೆಟ್ಟ ಕುಸಿತದ ಆತಂಕ



ಮಡಿಕೇರಿ,ಆ.10– ಕೊಡಗಿನಾದ್ಯಂತ ಆಶ್ಲೇಷ ಮಳೆಯ ತೀವ್ರತೆ ಇಳಿಮುಖವಾಗುತ್ತಿರುವ ಹಂತದಲ್ಲೆ ಭಾರೀ ಗುಡ್ಡ ಕುಸಿತದ ಆತಂಕ ಕಂಡು ಬರುತ್ತಿದೆ. ಮದೆ ಗ್ರಾಮದ ಕರ್ತೋಜಿ ಯಲ್ಲಿ ದಿನದ ಹಿಂದೆಯಷ್ಟೆ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಪಕ್ಕದ ಬೆಟ್ಟದಲ್ಲಿ ಭಾರೀ ಬಿರುಕು ಮೂಡಿತ್ತು. ಈ ಹಿನ್ನೆಲೆ ಬೆಟ್ಟ ಬಿರುಕು ಬಿಟ್ಟ ಪ್ರದೇಶದಲ್ಲಿ ಅಗತ್ಯ ಬಂದೋಬಸ್ತ್ ಏರ್ಪಡಿಸಲಾಗಿದ್ದು, ತೀವ್ರ ನಿಗಾವಹಿಸಿ ವಾಹನಗಳ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ.

ಸ್ಥಳದಲ್ಲೇ 2 ಬೃಹತ್ ಹಿಟಾಚಿ ಯಂತ್ರಗಳು, ಟಿಪ್ಪರ್ ಲಾರಿಗಳನ್ನು ಸನ್ನದ್ದ ಸ್ಥಿತಿಯಲ್ಲಿರಿಸ ಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಇಂಜಿನಿಯರ್‌ಗಳು ಸ್ಥಳದಲ್ಲೇ ಬೀಡು ಬಿಟ್ಟಿದ್ದು, ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಅವಲೋಕಿಸುತ್ತಿದ್ದಾರೆ. ವಾಹನ ಸಂಚಾರ ಅಪಾಯ ಎದುರಾಗದಂತೆ ತಡೆಯಲು ರಸ್ತೆಯ ಎರಡೂ ಬದಿಗಳಲ್ಲಿ ಪೊಲೀಸ್ ಸಿಬ್ಬಂದಿ ಗಳನ್ನು ನಿಯೋಜನೆ ಮಾಡಲಾಗಿದೆ.

ಕುಸಿದ ಮನೆ: ಮದೆ ಗ್ರಾಮ ಪಂಚಾಯ್ತಿ ವ್ಯಾಪ್ತಿ ಬೆಟ್ಟತ್ತೂರು ಗ್ರಾಮದ ಆನಂದ ಎಂಬವರ ಮನೆ ಭಾರೀ ಗಾಳಿ ಮಳೆಯ ಹಿನ್ನೆಲೆ ಕುಸಿದು ಬಿದ್ದು ಹಾನಿ ಸಂಭವಿಸಿದ್ದರೆ, ಸೋಮವಾರ ಪೇಟೆ ಹೋಬಳಿ ಯಡೂರು ಗ್ರಾಮದ ರಾಣಿ ಎಂಬುವರ ಮನೆಯ ಪಾರ್ಶ್ವ ಕುಸಿದು ಹಾನಿ ಯಾಗಿದೆ. ಮಾದಾಪುರ ಬಳಿಯ ಮುಖ್ಯ ರಸ್ತೆಯಲ್ಲಿ ಸಣ್ಣ ಪ್ರಮಾಣದ ಬರೆ ಕುಸಿತ ಸಂಭವಿಸಿರುವ ಬಗ್ಗೆ ವರದಿಯಾಗಿದೆ.

ಮನೆಗುರುಳಿದ ಮರ: ಸುಂಟಿಕೊಪ್ಪ ಬಳಿಯ ಕಂಬಿಬಾಣೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಅತ್ತೂರು ನಲ್ಲೂರು ಗ್ರಾಮದ ನಿವಾಸಿ ಅಕ್ಕಮ್ಮ ರೈ ಎಂಬವರ ಮನೆಯ ಮೇಲೆ ಭಾರೀ ಗಾತ್ರದ ಮರ ಉರುಳಿ ಬಿದ್ದಿದೆ. ಪರಿಣಾಮ ಮೇಲ್ಛಾವಣಿ ಸೇರಿದಂತೆ ಗೋಡೆ ಹಾಗೂ ಗೃಹೋಪಯೋಗಿ ವಸ್ತುಗಳು ಹಾನಿಗೊಂಡಿರುವ ಬಗ್ಗೆ ವರದಿಯಾಗಿದೆ.

ಮಳೆ ಹಾಗೂ ಗಾಳಿಯ ರಭಸಕ್ಕೆ ಮನೆಯ ಮೇಲೆ ಮಂಗಳವಾರ ರಾತ್ರಿ 9.30ರ ಸಂದರ್ಭ ದಲ್ಲಿ ಮರಬಿದ್ದಿದ್ದು ಅದೃಷ್ಟವಶಾತ್ ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಮಲಗುವ ಕೋಣೆಯ ಮಂಚದ ಮೇಲೆ ಮರದ ರೆಂಬೆ, ಹೆಂಚುಗಳು ಬಿದ್ದಿದ್ದು ಮನೆಯಲ್ಲಿದ್ದ ಅಕ್ಕಮ್ಮ ರೈ ಹಾಗೂ ಅವರ ಪುತ್ರ ವಿಶ್ವನಾಥ ರೈಗೆ ಯಾವುದೇ ಹಾನಿಯಾಗಿಲ್ಲ. ಸುಂಟಿಕೊಪ್ಪ ನಾಡ ಕಚೇರಿಯ ಕಂದಾಯ ಪರಿವೀಕ್ಷಕ ಪ್ರಶಾಂತ್ ಹಾಗೂ ಗ್ರಾಮ ಲೆಕ್ಕಿಗ ನಸೀಮ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಬೆಟ್ಟ ಬಿರುಕು ಬಿಟ್ಟ ಸ್ಥಳದಲ್ಲಿ ಭಾರೀ ಬಂದೋಬಸ್ತ್

ರಾತ್ರಿ ಸಂಚಾರ ಬಂದ್

ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ರಾತ್ರಿ ವೇಳೆ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಕರ್ತೋಜೆ ಬಳಿ ಭಾರೀ ಬೆಟ್ಟ ಕುಸಿಯುವ ಆತಂಕ ಇರುವ ಹಿನ್ನೆಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನಿಗಳು ಸ್ಥಳ ಪರಿಶೀಲನೆ ನಡೆಸಿ ಜಿಲ್ಲಾಡಳಿತಕ್ಕೆ ವರದಿ ನೀಡಿದ್ದಾರೆ. ಮದೆನಾಡು ಭಾಗದಲ್ಲಿ ಮಳೆ ಮುಂದುವರೆದಿರುವ ಕಾರಣ ಯಾವ ಕ್ಷಣದಲ್ಲಾದರೂ ಬೆಟ್ಟ ಬಿರುಕು ಬಿಟ್ಟ ಪ್ರದೇಶ ಕುಸಿಯುವ ಸಾಧ್ಯತೆ ಇದೆ. ಈ ಕಾರಣ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಆ.10ರಿಂದ ಜಾರಿಗೆ ಬರುವಂತೆ ರಾತ್ರಿ 8.30 ಗಂಟೆಯಿಂದ ಬೆಳಗಿನ 6.30ರವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಆದೇಶ ಹೊರಡಿಸಿದ್ದಾರೆ. ಈ ನಿರ್ಬಂಧ ಆ.12ರ ರಾತ್ರಿ 8.30ರಿಂದ ಬೆಳಗಿನ 6.30ರವರೆಗೂ ಜಾರಿಯಲ್ಲಿರಲಿದೆ.



ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಯಲ್ಲಿ ಮಳೆ ಗಾಳಿಗೆ 1 ಭಾರೀ ಭೂ ಕುಸಿತ, 1 ಅಲ್ಪ ಪ್ರಮಾಣದ ಲಘು ಭೂ ಕುಸಿತ ಪ್ರಕರಣ ಸಂಭವಿಸಿದೆ. 2 ಮನೆಗಳು ಸಂಪೂರ್ಣ ಧ್ವಂಸವಾಗಿದ್ದರೆ, 2 ಮನೆಗಳು ಶೇ.50ರಷ್ಟು ಹಾನಿಗೆ ಒಳಗಾಗಿದ್ದು, 7 ಮನೆಗಳಿಗೆ ಭಾಗಶಃ ಹಾನಿ ಸಂಭವಿಸಿದೆ. 117 ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ಚೆಸ್ಕಾಂಗೆ 11.70 ಲಕ್ಷ ರೂ. ನಷ್ಟವಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ದಂಪತಿ ಕಲಹ: ಪತ್ನಿ ಕೊಲೆಯಲ್ಲಿ ಅಂತ್ಯ

ಒಂಟಿ ನಳಿಗೆ ಬಂದೂಕಿನಿಂದ ಗುಂಡಿಕ್ಕಿ ಹತ್ಯೆ

● ಪತ್ನಿಯೇ ಆತ್ಮಹತ್ಯೆ ಮಾಡಿಕೊಂಡಳು ಎಂದು ಬಿಂಬಿಸಲು ಯತ್ನ



ಗೋಪಾಲ



ಶುಷ್ಮ

ಮಡಿಕೇರಿ,ಆ.10– ಗಂಡ–ಹೆಂಡತಿಯ ಜಗಳವು ಪತ್ನಿಯ ಕೊಲೆಯಲ್ಲಿ ಅಂತ್ಯವಾದ ಘಟನೆ ಮಡಿಕೇರಿ ತಾಲೂಕಿನ ಚೆಟ್ಟಳ್ಳಿ ಗ್ರಾಮ ದಲ್ಲಿ ನಡೆದಿದೆ. ಚೇರಳ ಶ್ರೀಮಂಗಲ ಗ್ರಾಮ ನಿವಾಸಿ ಬಟ್ಟೀರ ಶುಷ್ಮ(43) ಕೊಲೆಯಾದ ಮಹಿಳೆ. ಆರೋಪಿ ಬಟ್ಟೀರ ಗೋಪಾಲನನ್ನು ಮಡಿ ಕೇರಿ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಘಟನೆ ವಿವರ: ಪತ್ನಿಯ ಮೇಲೆ ಸಂಶಯ ಗೊಂಡ ಪತಿ ಬಟ್ಟೀರ ಗೋಪಾಲ ಮಂಗಳ ವಾರ ರಾತ್ರಿ ಪತ್ನಿ ಶುಷ್ಮ ಅವರೊಂದಿಗೆ ಜಗಳ ಆರಂಭಿಸಿದ್ದಾನೆ. ಬಳಿಕ ಕೋಣೆಯೊ ಳಗೆ ಇದ್ದ ತನ್ನ ಒಂಟಿನಳಿಗೆ ಕೋವಿಯಿಂದ ಎದೆಯ ಭಾಗಕ್ಕೆ ಗುಂಡಿಕ್ಕಿದ್ದಾನೆ. ತದ ನಂತರ ಶುಷ್ಮಾ ಕೋವಿಯಿಂದ ತಾನೇ ಗುಂಡಿಕ್ಕಿ ಕೊಂಡು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಕುಟುಂಬದವರಿಗೆ ಮಾಹಿತಿ ನೀಡಿದ್ದಾನೆ.

ವಿಷಯ ತಿಳಿದ ಗ್ರಾಮಸ್ಥರು ರಾತ್ರಿ ಚೆಟ್ಟಳ್ಳಿ ಪೊಲೀಸ್ ಉಪಠಾಣೆಗೆ ಮಾಹಿತಿ ನೀಡಿ ದ್ದಾರೆ. ಸ್ಥಳಕ್ಕಾಗಮಿಸಿದ ಠಾಣಾ ಎಎಸ್ಐ ಶ್ರೀನಿವಾಸ್ ಮೇಲಾಧಿಕಾರಿಗಳ ಸೂಚನೆ ಯಂತೆ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ಮಡಿಕೇರಿ ಗ್ರಾಮಾಂತರ ಠಾಣೆಗೆ ವೃತ್ತ ನಿರೀಕ್ಷಕ ಅನುಪ್ ಮಾದಪ್ಪ, ಪಿಎಸ್ಐ ದೇವ ರಾಜು, ಘಟನಾ ಸ್ಥಳಕ್ಕೆ ಆಗಮಿಸಿ ಆರೋಪಿ ಯನ್ನು ವಿಚಾರಣೆಗೆ ಒಳಪಡಿಸಿದಾಗ ತಾನೇ ಗುಂಡಿಕ್ಕಿ ಪತ್ನಿಯನ್ನು ಹತ್ಯೆ ಮಾಡಿ ರುವುದಾಗಿ ಪತಿ ಗೋಪಾಲ ಒಪ್ಪಿಗೊಂಡಿ ದ್ದಾನೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ. ಆರೋಪಿ ಗೋಪಾಲನನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಮಂಚಳ್ಳಿ ಕಾಫಿ ತೋಟದಲ್ಲಿ ಮರಿ ಆನೆ ಪತ್ತೆ

ಗೋಣಿಕೊಪ್ಪ, ಆ.10– ಪೊನ್ನಂಪೇಟೆ ತಾಲೂಕಿನ ಕುಟ್ಟ ಸಮೀಪ ಮಂಚಳ್ಳಿ ಗ್ರಾಮದ ಕಾಫಿ ತೋಟದಲ್ಲಿ ಎರಡೂವರೆ ತಿಂಗಳ ಗಂಡು ಕಾಡಾನೆ ಮರಿ ಪತ್ತೆಯಾಗಿದೆ.

ಸ್ಥಳಕ್ಕೆ ಶ್ರೀಮಂಗಲ ವಲಯ ಅರಣ್ಯಾಧಿ ಕಾರಿ ಡಿಸ್ನಿ ದೇಚಮ್ಮ, ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಶಂಕರ್ ಭೇಟಿ ನೀಡಿ ಪರಿ ಶೀಲನೆ ನಡೆಸಿದರು. ಶ್ರೀಮಂಗಲ ವಲಯ ಅರಣ್ಯಾಧಿಕಾರಿ ಡಾ.ಬಿ.ಜಿ.ಗಿರೀಶ್ ಪ್ರಥಮ ಚಿಕಿತ್ಸೆ ನೀಡಿದರು. ಕಾಡಾನೆ ಮರಿ ಆರೋಗ್ಯ ವಾಗಿದ್ದು, ತಿತಿಮತಿ ಮತ್ತಿಗೋಡು ಸಾಕಾನೆ ಶಿಬಿರಕ್ಕೆ ರವಾನಿಸಲಾಗಿದೆ.



ದಂತ ಮಾರಾಟ ಮಾಡಲು ಯತ್ನ: ಇಬ್ಬರ ಸೆರೆ



ಮಡಿಕೇರಿ, ಆ.10– ಅಕ್ರಮವಾಗಿ ಆನೆಯ ದಂತ ವೊಂದನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಸಿಐಡಿ ಪೊಲೀಸ್ ಅರಣ್ಯ ಘಟಕ ಯಶಸ್ವಿಯಾಗಿದೆ.

ಆಶಿತ್.ಪಿ ಹಾಗೂ ಸುಭಾಷ್ ಬಂಧಿತ ಆರೋಪಿ ಗಳು, ಒಂದು ದಂತವನ್ನು ವಶಕ್ಕೆ ಪಡೆಯಲಾಗಿದೆ. ಮಡಿಕೇರಿ– ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಕಾಟಕೇರಿ ಜಂಕ್ಷನ್ ಬಸ್ಸು ತಂಗುದಾಣದ ಬಳಿ ಆನೆಯ ದಂತವನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿರುವಾಗ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದರು.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್‌ಚಂದ್ರ ಅವರ ನಿರ್ದೇಶನದ ಮೇರೆಗೆ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಪ್ರಭಾರ ಪೊಲೀಸ್ ಅಧೀಕ್ಷಕ ಶ್ರೀನಿವಾಸ್ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿ.ಎಸ್.ಐ ಸಿ.ಯು.ಸವಿ ಹೆಡ್ ಕಾನ್ಸ್ಟೇಬಲ್‌ಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ ಹಾಗೂ ಕಾನ್ಸ್ ಟೇಬಲ್ ಮಂಜುನಾಥ ಪಾಲ್ಗೊಂಡಿದ್ದರು.

2023ರ ಚುನಾವಣೆಯಲ್ಲಿ ಮಂಡ್ಯದಿಂದ ಕನಿಷ್ಠ 5 ಸ್ಥಾನದಲ್ಲಿ ಕಾಂಗ್ರೆಸ್ ಗೆಲ್ಲಿಸಿ: ಡಿಕೆಶಿ



ಮಂಡ್ಯ, ಆ.10– ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಿಂದ ಕನಿಷ್ಠ 5 ಸ್ಥಾನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು. ಈ ನಿಟ್ಟಿನಲ್ಲಿ ಈಗಿನಿಂದಲೇ ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕರೆ ನೀಡಿದರು.

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಬೆಂಗಳೂರಿನಲ್ಲಿ ಆ.15ರಂದು ಕಾಂಗ್ರೆಸ್‌ನಿಂದ ಹಮ್ಮಿಕೊಂಡಿರುವ ಬೃಹತ್ ಪಾದಯಾತ್ರೆ ಸಂಬಂಧ ನಗರದ ಖಾಸಗಿ ಸಮುದಾಯ ಭವನದಲ್ಲಿ ಬುಧವಾರ ನಡೆದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಜಿಲ್ಲೆಯ ಎಲ್ಲಾ 7 ಸ್ಥಾನಗಳಲ್ಲಿಯೂ ಸೋಲುವ ಮೂಲಕ ಶೋಚನೀಯ ಸ್ಥಿತಿಯಲ್ಲಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಒಗ್ಗಟ್ಟಿನ ಮಂತ್ರ ಹಾಗೂ ಶಕ್ತಿಯುತ ಪರಿಶ್ರಮದ ಪರಿಣಾಮ ದಿನೇಶ್ ಗೂಳಿಗೌಡ ಹಾಗೂ ಮಧು ಜಿ.ಮಾದೇಗೌಡ ಅವರ ಗೆಲುವು ದೊರಕಿದೆ. ಇದೇ ಹೋರಾಟ 2023ರ ಚುನಾವಣೆಯಲ್ಲೂ ಇರಬೇಕು ಎಂದರು.

ಬೆಂಗಳೂರಿನಲ್ಲಿ ನಡೆಯುವ ಪಾದಯಾತ್ರೆಗೆ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕನಿಷ್ಠ 2 ಸಾವಿರ ಜನರನ್ನು ಕರೆತನ್ನಿ ಎಂದ ಅವರು, ಕರ್ನಾಟಕದಲ್ಲಿ ಬಿಜೆಪಿ ಕಿತ್ತೊಗೆಯಬೇಕು. ಮಂಡ್ಯದಲ್ಲಿ ಜೆಡಿಎಸ್ ಸೋಲಿಸಬೇಕು. ಕಾಂಗ್ರೆಸ್ ಗೆಲ್ಲಿಸಬೇಕು ಎಂದು ಹೇಳಿದರು.

ಮಂಡ್ಯ ಕಾಂಗ್ರೆಸ್ಸಿಗರ ಬಗ್ಗೆ ಅಸಮಾಧಾನ ಗೊಂಡ ಡಿಕೆಶಿ, ನಮ್ಮ ಕಾರ್ಯಕರ್ತರಲ್ಲಿ ಶಿಸ್ತಿಲ್ಲ. ವೇದಿಕೆ ಮೇಲೆ ಗುಂಪುಗಾರಿಕೆ, ಹಾರ, ತುರಾಯಿ ಬಿಟ್ಟು ಪಕ್ಷವನ್ನು ಸಂಘಟಿಸಿ, ದಿನೇಶ್ ಹಾಗೂ ಮಧು ಗೆಲ್ಲಿಸಿದಂತೆ ಮುಂದಿನ ಚುನಾವಣೆಯಲ್ಲೂ ಕನಿಷ್ಠ 5 ಸೀಟು ಗೆಲ್ಲಿಸಿದರೆ ನಿಮ್ಮ ಬಗ್ಗೆ ಒಲವು ಹೆಚ್ಚಾಗುವುದು ಎಂದು ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ಆಗಸ್ಟ್ 15ರಂದು ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ವೃತ್ತದಿಂದ ನ್ಯಾಷನಲ್ ಕಾಲೇಜು ಮೈದಾನದವರೆಗೂ ಲಕ್ಷಾಂತರ ಕಾಂಗ್ರೆಸ್ಸಿಗರು ಪಾಲ್ಗೊಳ್ಳಲಿದ್ದು, 75ನೇ ಸ್ವಾತಂತ್ರ್ಯೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

> ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಆ.15ರಂದು ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಎಲ್ಲ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಪಾದಯಾತ್ರೆ ಯಶಸ್ವಿಗೊಳಿಸಬೇಕು. ಭಾರತ ಸ್ವತಂತ್ರಗೊಳ್ಳಲು ಕಾಂಗ್ರೆಸ್ ಪಕ್ಷದ ಪಾತ್ರ ಅಪಾರವಾಗಿದೆ. ಇತಿಹಾಸ ವಿರುವ ಕಾಂಗ್ರೆಸ್‌ನಿಂದ ಅಮೃತ ಮಹೋತ್ಸವ ಆಚರಿಸುವುದರಲ್ಲಿ ವಿಶೇಷ ಅರ್ಥವಿದೆ.
> –ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರು.

ವೇದಿಕೆಯಲ್ಲಿ ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಎಂ.ಎಸ್.ಆತ್ಮಾನಂದ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮಾಜಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಬಾಲರಾಜು, ಮುಖಂಡರಾದ ಗಣಿಗ ರವಿಕುಮಾರ್, ದಡದಪುರ ಶಿವಣ್ಣ, ಡಾ.ಕೃಷ್ಣ, ಡಾ.ರವೀಂದ್ರ, ಅಮರಾವತಿ ಚಂದ್ರಶೇಖರ್ ಇತರರಿದ್ದರು.

ಹರ್ ಘರ್ ತಿರಂಗಾ ವಿರುದ್ಧ ಕಿಡಿ



ಮದ್ದೂರು, ಆ.10– ಕಾಂಗ್ರೆಸ್ ಪಾದಯಾತ್ರೆ ಮಾಡುತ್ತಿರುವುದನ್ನು ಮನಗಂಡು ಬಿಜೆಪಿ ಅವರು 'ಹರ್ ಘರ್ ತಿರಂಗಾ' ಎಂದು ಮನೆ ಮೇಲೆ ಬಾವುಟ ಹಾರಿಸಿ ಎಂದು ಹೇಳುತ್ತಿದ್ದಾರೆ. ಬಾವುಟವನ್ನು ಸರ್ಕಾರದಿಂದ ಉಚಿತವಾಗಿ ನೀಡಬಹುದಿತ್ತು ಹಣ ನೀಡಿ ಬಾವುಟ ಪಡೆದು ಹಾರಿಸಿ ಎಂದು ಹೇಳುತ್ತಿರುವುದು ಎಷ್ಟು ಸರಿ? ಎಂದು ಬಿಜೆಪಿ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಿಡಿಕಾರಿದರು.

ಪಟ್ಟಣದ ಶಿವಪುರದ ವೆಂಕಟೇಶ್ವರ ಸಮುದಾಯ ಭವನದಲ್ಲಿ ಬುಧವಾರ ಆಯೋಜಿಸಿದ್ದ ಮದ್ದೂರು ಹಾಗೂ ಮಳವಳ್ಳಿ ತಾಲೂಕು ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಹಮ್ಮಿಕೊಂಡಿರುವ ಭಾರತ್ ಜೋಡೋ ಪಾದಯಾತ್ರೆಯ ಯಶಸ್ಸಿಗೆ ಶ್ರಮಿಸಬೇಕು. ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಮೈಸೂರಿನಲ್ಲಿ ಬೃಹತ್ ಬಹಿರಂಗ ಸಭೆಯನ್ನು ಹಮ್ಮಿಕೊಳ್ಳಲಾಗುವುದು. ಮಂಡ್ಯ ಜಿಲ್ಲೆಯಲ್ಲಿ ಭಾರತ್ ಜೋಡೋ ಪಾದಯಾತ್ರೆ ರಾಹುಲ್ ಗಾಂಧಿಯವರ ನೇತೃತ್ವದಲ್ಲಿ 4ರಿಂದ 5ದಿನಗಳು ನಡೆಯಲಿದೆ. ಗುಂಡ್ಲುಪೇಟೆ, ಮೈಸೂರು ಮಾರ್ಗವಾಗಿ ಬಂದು ಶ್ರೀರಂಗಪಟ್ಟಣ, ಪಾಂಡವಪುರ ಹಾಗೂ ನಾಗಮಂಗಲ ಮೂಲಕ ಹೋಗಲಿದೆ ಎಂದರು.

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಕೆಪಿಸಿಸಿ ಸದಸ್ಯ ಎಸ್.ಗುರುಚರಣ್ ಮಾತನಾಡಿದರು. ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಪಿ.ನರೇಂದ್ರಸ್ವಾಮಿ, ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮಾಜಿ ಸದಸ್ಯ ಬಿ.ರಾಮಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಾಮಕೃಷ್ಣ, ಶಿವರಾಮು, ದೇವರಾಜು, ಎಸ್‌ಸಿ–ಎಸ್‌ಟಿ ವಿಭಾಗದ ಜಿಲ್ಲಾಧ್ಯಕ್ಷ ಸುರೇಶ್‌ಕಂಠಿ, ಜೋಗಿಗೌಡ, ಪಿ.ಸಂದರ್ಶ ಇತರರಿದ್ದರು.

ಅಗ್ರಹಾರ ಬಾಚಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಮತದಾರರ ಪಟ್ಟಿಯಲ್ಲಿ ಅಕ್ರಮ ಆರೋಪ

ಜೆಡಿಎಸ್ ಕಾರ್ಯಕರ್ತರು, ಮತದಾನ ವಂಚಿತರಿಂದ ಪ್ರತಿಭಟನೆ



ಕೆ.ಆರ್.ಪೇಟೆ, ಆ.10– ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯ ಮತದಾರರ ಪಟ್ಟಿ ತಯಾರಿಕೆಯಲ್ಲಿ ಅಕ್ರಮ ನಡೆಸಲಾಗಿದೆ ಎಂದು ಆರೋಪಿಸಿ ಗ್ರಾಮದಲ್ಲಿ ಜೆಡಿಎಸ್ ಕಾರ್ಯಕರ್ತರು, ಶೇರುದಾರರು, ಮತದಾನ ವಂಚಿತರು ಪ್ರತಿಭಟನೆ ನಡೆಸಿದರು.

ಸಂಘದ ಕಾರ್ಯದರ್ಶಿಗಳು ನಿಜವಾದ ಹಾಲು ಪೂರೈಕೆ ಮಾಡುವವರಿಗೆ ಮತದಾನ ಹಕ್ಕು ಕೊಡಿಸಿಲ್ಲ. ಇದರಿಂದ ನಿಜವಾದ ಹಾಲು ಉತ್ಪಾದಕರಿಗೆ ಅನ್ಯಾಯವಾಗಿದ್ದು, ನ್ಯಾಯಯುತ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು. ಗ್ರಾಪಂ ಸದಸ್ಯ ಆರ್.ರಮೇಶ್ ಮಾತನಾಡಿ, ಸಹಕಾರ ಇಲಾಖೆಯ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ಕಾರ್ಯದರ್ಶಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಅರ್ಹ ಎಲ್ಲಾ ಶೇರುದಾರರಿಗೂ ಮತದಾನ ಹಕ್ಕು ಕೊಡಿಸಬೇಕು. ಈಗ ನಡೆದಿರುವ ಚುನಾವಣೆಯನ್ನು ಅಕ್ರಮ ಎಂದು ಘೋಷಣೆ ಮಾಡಿ ಮತ್ತೊಮ್ಮೆ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ಮುಖಂಡರಾದ ಬಿ.ವಿ.ನಾಗೇಶ್, ಅಣ್ಣೇಗೌಡ, ಟೆಂಪೋ ಶ್ರೀನಿವಾಸ್, ಈಶ್ವರ್, ಕಂಸಣ್ಣನ ದೇವರಾಜು, ಎ.ವಿ.ಪ್ರದೀಪ್, ಬಿ.ವಿ.ಮಂಜೇಗೌಡ, ಪ್ರಕಾಶ್, ಗ್ರಾಪಂ ಸದಸ್ಯೆ ರೇಣುಕಾ ಈಶ್ವರ್, ಹೋಟೆಲ್ ನಾಗಣ್ಣ, ಪುಟ್ಟಸ್ವಾಮಿಗೌಡ ಸೇರಿದಂತೆ ನೂರಾರು ಮಹಿಳಾ ಶೇರುದಾರರು ಹಾಗೂ ಗ್ರಾಮಸ್ಥರು ಇದ್ದರು.

ಚಿಟ್ಟನಹಳ್ಳಿ ಗ್ರಾಮದ ಅಭಿವೃದ್ಧಿಗೆ ಸಿಎಸ್‌ಪಿ ಕೊಡುಗೆ ಅಪಾರ

ಶಾಸಕರ ವಿರುದ್ಧ ನಡೆದ ಪ್ರತಿಭಟನೆ ಖಂಡಿಸಿ ಗ್ರಾಮಸ್ಥರ ಪ್ರತಿಭಟನೆ



ಚಿನಕುರಳಿ, ಆ.10– ಚಿಟ್ಟನಹಳ್ಳಿ ಗ್ರಾಮದ ಅಭಿವೃದ್ಧಿಗೆ ಶಾಸಕ ಸಿ.ಎಸ್.ಪುಟ್ಟರಾಜು ಅವರ ಕೊಡುಗೆ ಅಪಾರವಾಗಿದೆ. ಅವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡೋದು ಸರಿಯಲ್ಲ ಎಂದು ಚಿಟ್ಟನಹಳ್ಳಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಚಿಟ್ಟನಹಳ್ಳಿ ಗ್ರಾಮ ದಲ್ಲಿ ಶಾಸಕರ ಪರವಾಗಿ ಪ್ರತಿಭಟನೆ ನಡೆಸಿದ ಗ್ರಾಮಸ್ಥರು ಶಾಸಕರ ವಿರುದ್ಧ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿ.ಎಸ್.ಪುಟ್ಟರಾಜು ಅವರು ಶಾಸಕರಾದ ಬಳಿಕ ಚಿಟ್ಟನಹಳ್ಳಿ ಗ್ರಾಮಕ್ಕೆ ಸಾಕಷ್ಟು ಅನುದಾನ ತಂದು ಗ್ರಾಮವನ್ನು ಅಭಿವೃದ್ಧಿಪಡಿಸಿದ್ದಾರೆ. ಕೆರೆ ತೊಣ್ಣೂರಿನಿಂದ ಮೇಲುಕೋಟೆಗೆ ಕುಡಿಯುವ ನೀರು ತೆಗೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಗ್ರಾಮಸ್ಥರ ಮನವಿ ಮೇರೆಗೆ ಗ್ರಾಮಕ್ಕೂ ಕುಡಿಯುವ ನೀರಿನ ಸೌಲಭ್ಯ ಪೂರೈಸಿದರು ಎಂದರು. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಗ್ರಾಮಕ್ಕೆ ಪ್ರೌಢಶಾಲೆಯನ್ನು ಮಂಜೂರು ಮಾಡಿಸಿಕೊಟ್ಟರು, ಜತೆಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಿದರು. ಗ್ರಾಮದ ಬಗ್ಗೆ ಶಾಸಕರು ಪ್ರೀತಿ, ಕಾಳಜಿ ಇಟ್ಟುಕೊಂಡು ಗ್ರಾಮವನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡಿದ್ದಾರೆ ಕೋವಿಡ್ ಸಂದರ್ಭದಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸಿ ಧೈರ್ಯ ತುಂಬುವ ಕೆಲಸ ಮಾಡಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ದೇಶಿಗೌಡ ಸಿ.ಟಿ.ಕುಮಾರ, ವೆಂಕಟೇಶ್, ಎಸ್.ಸೋಮಶೇಖರ್, ಡಿ.ಶಿವಣ್ಣ, ಅಣ್ಣಾಸ್ವಾಮಿ, ಸಿ.ಎಂ.ಲಿಂಗರಾಜು, ಪುಟ್ಟರಾಜು, ಎಂ.ಸ್ವಾಮಿ, ಜಗದೀಶ್, ಶಂಕರೇಗೌಡ, ಸೋಮೇಗೌಡ, ಗ್ರಾಪಂ ಸದಸ್ಯ ಲಕ್ಷ್ಮೀಲಿಂಗರಾಜು, ಉದಯಕುಮಾರ್, ಪಾಪೇಗೌಡ, ನರಸಿಂಹಚಾರಿ, ರಾಮಚಂದ್ರಚಾರಿ, ಅಶೋಕ ಸೇರಿದಂತೆ ಹಲವರು ಹಾಜರಿದ್ದರು.

ಮಾಜಿ ರಾಜ್ಯಪಾಲ ಬಿ.ರಾಚಯ್ಯನವರ ಜನ್ಮ ಶತಮಾನೋತ್ಸವ ಆಚರಣೆ

ರಾಜ್ಯದ ಉದ್ದಗಲಕ್ಕೂ ಬಿ.ರಾಚಯ್ಯ ಹೆಜ್ಜೆ ಗುರುತು

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಬಣ್ಣನೆ



ಚಾಮರಾಜನಗರ, ಆ.10–ಮಾಜಿ ರಾಜ್ಯಪಾಲರಾದ ಬಿ.ರಾಚಯ್ಯ ಅವರು ತಮ್ಮ ಹೆಜ್ಜೆ ಗುರುತುಗಳನ್ನು ರಾಜ್ಯದ ಉದ್ದಗಲಕ್ಕೂ ಬಿಟ್ಟು ಹೋಗಿದ್ದಾರೆ ಎಂದು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಬಣ್ಣಿಸಿದರು.

ದಲಿತ ಮತ್ತು ಪ್ರಗತಿಪರ ಸಂಘಗಳ ಒಕ್ಕೂಟ ನಗರದ ಜೆ.ಹೆಚ್.ಪಟೇಲ್ ಸಂಭಾಂಗಣ ದಲ್ಲಿ ಬುಧವಾರ ಆಯೋಜಿಸಿದ್ದ ಬಿ.ರಾಚಯ್ಯ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಬಿ.ರಾಚಯ್ಯ ಅವರು ಸಚಿವರಾಗಿ ಎಲ್ಲಾ ಖಾತೆ ಗಳನ್ನು ಸಮರ್ಥವಾಗಿ ನಿರ್ವಹಿಸಿದರು. ಬಡವರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದರು. ತಾನು ಮಾಡಿದ ಕೆಲಸವನ್ನು ಅವರು(ಬಿ.ರಾಚಯ್ಯ) ಎಂದೂ ಹೇಳಿಕೊಂಡ ವರಲ್ಲ. ಜನರೇ ಮಾತನಾಡುವಂತೆ, ಜನರೇ ಹೇಳುವಂತೆ ಕೆಲಸ ಮಾಡಿದ ಮಹಾನಾಯಕ ಎಂದರು. ಬಿ.ರಾಚಯ್ಯ ಅವರು ಜನಪರ ಆಡಳಿತ ನೀಡುವ ಮೂಲಕ ಒಂದು ಚರಿತ್ರೆ ನಿರ್ಮಾಣ ಮಾಡಿದ್ದಾರೆ ಪ್ರಾಮಾಣಿಕ, ಹಾಗೂ ಗುಣಾತ್ಮಕ ನಾಯಕತ್ವ ಗುಣದ ವ್ಯಕ್ತಿಯಾಗಿದ್ದ ಬಿ.ರಾಚಯ್ಯ ಅಜರಾಮರರಾಗಿ ನಮ್ಮೆಲ್ಲರಲ್ಲೂ ಶಾಶ್ವತರಾಗಿದ್ದಾರೆ ಎಂದು ಬಿ.ರಾಚಯ್ಯ ಅವರ ಸೇವೆ ಸ್ಮರಿಸಿದ ಹೆಚ್.ಸಿ.ಮಹದೇವಪ್ಪ, ನಾನು ಶಾಸಕ–ಮಂತ್ರಿಯಾಗಲು ಹಾಗೂ ಇಷ್ಟು ಮಟ್ಟಕ್ಕೆ ಬೆಳೆಯಲು ಬಿ.ರಾಚಯ್ಯ ಅವರು ಕಾರಣ ಎಂದರು.

ಮುಡುಕನಪುರ ಮಠದ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವ ಬಿ.ಬಿ.ನಿಂಗಯ್ಯ, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಜಿಪಂ ಮಾಜಿ ಸದಸ್ಯ ಸಿ.ಎನ್.ಬಾಲರಾಜು, ಅಂಕಣಕಾರ ಎಸ್.ಲಕ್ಷ್ಮಿನರಸಿಂಹ, ಬಿ.ರಾಚಯ್ಯ ಅವರ ಪುತ್ರರಾದ ಎ.ಆರ್.ಬಾಲರಾಜು ಹಾಗೂ ಮಾಜಿ ಶಾಸಕರೂ ಆದ ಎ.ಆರ್.ಕೃಷ್ಣಮೂರ್ತಿ, ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ವೆಂಕಟರಮಣಸ್ವಾಮಿ ಹಾಜರಿದ್ದರು.

ಕುಟುಂಬಸ್ಥರಿಂದ ವಿಶೇಷ ಪೂಜೆ



ಚಾಮರಾಜನಗರ,ಅ.10–ಜಿಲ್ಲೆಯ ಹಿರಿಯ ಮುತ್ಸದ್ಧಿ ರಾಜಕಾರಣಿ, ಘನತೆವೆತ್ತ ಮಾಜಿ ರಾಜ್ಯಪಾಲ ಬಿ.ರಾಚಯ್ಯನವರ 100ನೇ ವರ್ಷದ ಜನ್ಮ ದಿನೋತ್ಸವವನ್ನು ಅವರ ಸ್ವಗ್ರಾಮ ತಾಲೂಕಿನ ಆಲೂರಿನಲ್ಲಿರುವ ಚಿರಶಾಂತಿ ಧಾಮದಲ್ಲಿ ಆಚರಿಸಲಾಯಿತು.

ಬುಧವಾರ ಬೆಳಗ್ಗೆ 11 ಗಂಟೆಗೆ ಬಿ.ರಾಚಯ್ಯನವರ ಪತ್ನಿ ಗೌರಮ್ಮ, ಬಿ.ರಾಚಯ್ಯ ಅವರ ಪುತ್ರರಾದ ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಜಿಪಂ ಮಾಜಿ ಸದಸ್ಯ ಆರ್.ಬಾಲರಾಜು ಹಾಗೂ ಕುಟುಂಬಸ್ಥರು ಬಿ.ರಾಚಯ್ಯನವರ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಐವರು ಪುತ್ರಿಯರು, ನಾಲ್ವರು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ರಾಚಯ್ಯನವರ ಅಭಿಮಾನಿಗಳು, ಹಿತೈಷಿಗಳು ಭಾಗವಹಿಸಿ ರಾಚಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ನಿವೃತ್ತ ಪೊಲೀಸ್ ಮಹಾನಿರ್ದೇಶಕ ಮರಿಸ್ವಾಮಿ ಮಾತನಾಡಿ, ರಾಚಯ್ಯ ಅವರು ಜನಸೇವೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟವರು. ಅವರ ಅಳಿಯನಾಗಿ ಬಹಳ ಹತ್ತಿರದಿಂದ ಅವರ ಆಡಳಿತ ವೈಖರಿ, ಜನಪರ ಕಾಳಜಿ ನೋಡಿದ್ದೇನೆ. ಜಿಲ್ಲೆಯಲ್ಲಿ ನೀರಾವರಿ ಪೂರಕವಾಗಿ ಸುವರ್ಣಾವತಿ, ಚಿಕ್ಕಹೊಳೆ ಜಲಾಶಯ ನಿರ್ಮಾಣ, ಹೊಂಗನೂರು ಹಿರಿಕೆರೆ ಏತ ನೀರಾವರಿ, ಬೆಲ್ಲವತ್ತ ಜಲಾಶಯ ನಿರ್ಮಾಣ ಮಾಡಿ ಜಿಲ್ಲೆಯ ರೈತರಿಗೆ ಅನುಕೂಲ ಕಲ್ಪಿಸಿದ್ದಾರೆ ಎಂದು ಸ್ಮರಿಸಿದರು.

ರಾಚಯ್ಯ ಅವರ ಪುತ್ರ, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಜಿಲ್ಲಾಧಿಕಾರಿ ಪುಟ್ಟಮಾದಯ್ಯ, ಮಾಜಿ ಸಚಿವ ಬಿ.ಬಿ.ನಿಂಗಯ್ಯ, ವೆಂಕಟೇಶ ಪ್ರಸಾದ್, ಎ.ಆರ್.ಪ್ರಭಾ, ಎ.ಆರ್.ವೇದಾವತಿ, ಎ.ಆರ್.ಉಮಾವತಿ, ಎ.ಆರ್.ತ್ರಿವೇಣಿ, ಎ.ಆರ್.ಅರತಿ, ಮಂಜುಳಾ ಕೃಷ್ಣಮೂರ್ತಿ, ವಿಜಯಲಕ್ಷ್ಮಿ ಆರ್.ಬಾಲರಾಜ್, ಆರ್.ಕೆ.ರೋಷಿಣಿ, ಆರ್.ಕೆ. ಶ್ರೀವರ್ಧನ್, ಶರತ್‌ಕುಮಾರ್, ಲೋಹಿತ, ಆಯತಿ, ತೇಜಸ್ವಿನಿ, ಜಿಪಂ ಸದಸ್ಯ ನಿಖಿಲ್ ಚಕ್ರವರ್ತಿ, ಮಾಳ್ವಿಕ, ಆಲೂರು ಮಹದೇವಯ್ಯ, ಮಲ್ಲಣ್ಣ, ಎಸ್.ಮಹದೇವಯ್ಯ, ಡಾ.ನಂಜಯ್ಯ ಹೊಂಗನೂರು, ಆರ್.ಮಹದೇವ್, ನಾಗರಾಜ್, ಹೊಂಗನೂರು ಪುಟ್ಟಸ್ವಾಮಿ, ಕೆಎಂಎಫ್ ನಿರ್ದೇಶಕ ನಂಜುಂಡಸ್ವಾಮಿ, ತೋಟೇಶ್, ಎ.ಸಿ.ಪ್ರವೀಣ್, ಎಪಿಎಂಸಿ ನಿರ್ದೇಶಕ ಹೊಮ್ಮ, ರವಿಶಂಕರಮೂರ್ತಿ, ಹೊಂಗನೂರು ಚೇತನ್ ಗ್ರಾಪಂ ಅಧ್ಯಕ್ಷ ಎ.ಸಿ.ಮಹದೇವಸ್ವಾಮಿ ಇತರರಿದ್ದರು.

ರೈಲಿಗೆ ಸಿಲುಕಿ ಯುವಕ ಆತ್ಮಹತ್ಯೆ



ಚಾಮರಾಜನಗರ, ಆ. 10–ಯುವಕನೋರ್ವ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮರೆಯಾಲ ಗ್ರಾಮದ ಬಳಿ ಮಂಗಳವಾರ ರಾತ್ರಿ ನಡೆದಿದೆ.

ತಾಲೂಕಿನ ಜನ್ನೂರು ಗ್ರಾಮದ ರೇವಣ್ಣ ಪುತ್ರ ಚರಣ್(22) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತ ಮರೆಯಾಲ ಗ್ರಾಮ ಸೇತುವೆ ಬಳಿ ಮೈಸೂರಿಗೆ ಪ್ರತಿದಿನ ತೆರಳುವ ರಾತ್ರಿ 9.30ರ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿಷಯ ತಿಳಿದ ರೈಲ್ವೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲಿಸಿದುದಲ್ಲದೆ, ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ನಗರದ ಜಿಲ್ಲಾ ಬೋಧನಾ ಆಸ್ಪತ್ರೆಗೆ ರವಾನಿಸಿದರು. ಬುಧವಾರ ಶವಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಚರಣ್ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಆದರೆ ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಬರೆದಿದ್ದು, 'ನನ್ನ ಸಾವಿಗೆ ಪ್ರಭುಸ್ವಾಮಿ, ಅವರ ಪತ್ನಿ, ಮಗ ಪವನ್ ಕುಮಾರ್ ಹಾಗೂ ರಕ್ಷಿತ ಕಾರಣ' ಎಂದು ತಿಳಿಸಿರುವುದಾಗಿ ರೈಲ್ವೆ ಪೊಲೀಸರು ಹೇಳಿದ್ದು, ಇದು ಆತ್ಮಹತ್ಯೆ ಎಂಬುದು ಪರಿಶೀಲನೆ ವೇಳೆ ತಿಳಿದು ಬಂದಿದೆ. ತನಿಖೆ ಮುಂದುವರೆದಿದೆ ಎಂದು ತಿಳಿಸಿದ್ದಾರೆ.

ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಇಬ್ಬರು ರೈತರು ಅಸ್ವಸ್ಥ

ಕೊಳ್ಳೇಗಾಲ,ಆ.10–ಅರಣ್ಯ ಇಲಾಖೆ ವಶಪಡಿಸಿಕೊಂಡ ಭೂಮಿ ಹಿಂತಿರುಗಿಸುವಂತೆ ಆಗ್ರಹಿಸಿ ಡಿಸಿಎಫ್ ಕಚೇರಿ ಮುಂಭಾಗ ಉಪವಾಸ ಕುಳಿತಿದ್ದ ಇಬ್ಬರು ರೈತರು ಬುಧವಾರ ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದಾರೆ. ಜಾಗೇರಿ ಪ್ರದೇಶದ ಬೂದುಗಟ್ಟೆ ದೊಡ್ಡಿಯ ವೆಂಕಟರಮಣ ಬೋವಿ ಮತ್ತು ವೀರಣ್ಣ ಬೋವಿ ಅಸ್ವಸ್ಥಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. 6ಕ್ಕೂ ಹೆಚ್ಚು ರೈತರು ಧರಣಿ ಮುಂದುವರೆಸಿದ್ದಾರೆ. ಆಸ್ಪತ್ರೆ ಸೇರಿರುವ ಇಬ್ಬರು ರೈತರು ನಾಳೆ ಚೇತರಿಸಿಕೊಂಡ ಬಳಿಕ ಪುನಃ ಉಪವಾಸದಲ್ಲಿ ಭಾಗವಹಿಸುವರು ಎಂದು ಪ್ರತಿಭಟನಾನಿರತರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ

ಭೂರಹಿತರಲ್ಲ: 2020ರ ಮಾರ್ಚ್ 6ರಂದು ಬೆಂಗಳೂರಿನ ರೆಸಾರ್ಟ್ ಮಾಲೀಕ ಎ.ಎ.ರವೀಂದ್ರ ಅವರಿಗೆ ಸತ್ತೇಗಾಲ ಜಾಗೇರಿಯ ಬೂದಗಟ್ಟೆ ದೊಡ್ಡಿಯ ವೆಂಕಟರಮಣಭೋವಿ, ಸರ್ವೆ ನಂ.174ರಲ್ಲಿನ 3ಎಕರೆ ಜಮೀನನ್ನು 7.50 ಲಕ್ಷ ರೂ.ಗೆ ಮಾರಾಟ ಮಾಡಲು ಕ್ರಯ ಒಪ್ಪಂದ ಮಾಡಿಕೊಂಡಿದ್ದು, 1.50 ಲಕ್ಷ ರೂ.ಗಳನ್ನು ಮುಂಗಡವಾಗಿ ಪಡೆದಿದ್ದಾರೆ. ಉಳಿದ 6 ಲಕ್ಷ ರೂ.ಗಳನ್ನು ಕ್ರಯ ನೋಂದಣಿ ವೇಳೆ ನೀಡಲು ಕರಾರು ಮಾಡಿಕೊಟ್ಟಿದ್ದಾರೆ. ವೆಂಕಟರಮಣ ಭೋವಿ ಅವರ ಜಮೀನಿನ ಪಕ್ಕದಲ್ಲಿ ರವೀಂದ್ರ ಅವರ ಜಮೀನು ಇದೆ. ವೆಂಕಟರಮಣ ಭೋವಿ ಭೂರಹಿತರೂ ಅಲ್ಲ. ಹನೂರು ತಾಲೂಕಿನ ಅಜ್ಜೀಪುರ ಗ್ರಾಮದ ಸರ್ವೆ ನಂ.928ರಲ್ಲಿ 2 ಎಕರೆ 10 ಗುಂಟೆ ಭೂಮಿ ಹೊಂದಿದ್ದಾರೆ ಎಂದು ಡಿಎಫ್‌ಓ ಏಡುಕೊಂಡಲು ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ರೈತ ಮುಖಂಡ ಶೈಲೇಂದ್ರ, ವೆಂಕಟಭೋವಿ ಇನ್ನಿತರರಿಗೆ ಸೇರಿದ ಭೂಮಿಯನ್ನು ಅರಣ್ಯ ಇಲಾಖೆ ವಶಪಡಿಸಿಕೊಂಡಿದ್ದು, ಇದನ್ನು ಬಿಟ್ಟುಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಡಿಸಿಎಫ್ ಏಡುಕೊಂಡಲು, ಸಂತೋಷ್‌ಕುಮಾರ್ ವರ್ಗಾವಣೆ

ಚಾಮರಾಜನಗರ, ಆ.10– ಮಲೆ ಮಹದೇಶ್ವರ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ.ಏಡುಕೊಂಡಲು ಹಾಗೂ ಬಿಳಿಗಿರಿರಂಗನಾಥಸ್ವಾಮಿ ದೇವಾಲಯ(ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಜಿ.ಸಂತೋಷ್‌ಕುಮಾರ್ ಅವರನ್ನು ವರ್ಗಾಯಿಸಿ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ವಿ.ಏಡುಕೊಂಡಲು ಅವರನ್ನು ಕೋಲಾರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ವರ್ಗಾವಣೆ ನಿಂಯೋಜಿಸಿದ್ದು, ಅವರ ಸ್ಥಾನಕ್ಕೆ ಡಾ.ಜಿ.ಸಂತೋಷ್‌ಕುಮಾರ್ ಅವರನ್ನು ನಿಯೋಜಿಸಿದೆ. ಮೈಸೂರು ಕಾರ್ಯಯೋಜನೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ದೀಪಾ ಜೆ.ಕಾಂಟ್ರಾಕ್ಟರ್ ಅವರನ್ನು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ವರ್ಗಾವಣೆ ಮಾಡಿದೆ.

ಒಂದನೇ ಪುಟದಿಂದ

ಗಜಪಡೆ ದರ್ಬಾರ್



ಅರಣ್ಯ ಭವನದಿಂದ ಮೆರವಣಿಗೆ ಮೂಲಕ ಆಗಮಿಸಿದ ಗಜಪಡೆ.



ಅರಮನೆ ಮುಂಭಾಗದ ಪ್ರಾಂಗಣದಲ್ಲಿ ದಸರಾ ಗಜಪಡೆಯ ಮಾವುತ, ಕಾವಾಡಿಗಳಿಗೆ ಅಗತ್ಯ ವಸ್ತುಗಳ ಕಿಟ್ ವಿತರಿಸಲಾಯಿತು.

ಪಂಚಫಲ ನೀಡಿದರು. ಗಪಪಡೆ ಅರಮನೆ ಪ್ರವೇಶ ಕಾರ್ಯಕ್ರಮದಲ್ಲಿ ವಿವಿಧ ಕಲಾ ತಂಡಗಳು ಸಾಥ್ ನೀಡಿದವು. ದ್ವಾರದ ಬಳಿ ಪೂರ್ಣಕುಂಭ ಸ್ವಾಗತ, ಮಂಗಳ ವಾದ್ಯ, ನಾದಸ್ವರದೊಂದಿಗೆ ಅರಮನೆಯತ್ತ ಆನೆಗಳು ಹೆಜ್ಜೆ ಹಾಕಿದವು. ಗಜಪಡೆಗೆ ಅಶ್ವರೋಹಿ ಪಡೆ, ಪೊಲೀಸ್ ಬ್ಯಾಂಡ್ ಸಾಥ್ ನೀಡಿತು. ಬಳಿಕ ಸಂಪ್ರದಾಯದಂತೆ ಅರಮನೆ ಮಂಡಳಿಯಿಂದ ಪೂಜೆ ಸಲ್ಲಿಸಲಾಯಿತು. ದಸರಾ ಮಹೋತ್ಸವದ ಚಟುವಟಿಕೆಯಲ್ಲಿ ತೊಡಗುವ ಅಧಿಕಾರಿಗಳಿಗೆ ಮಂಡಳಿ ವತಿಯಿಂದ ಶಾಲು ಹೊದಿಸಿ ಗೌರವ ಸಲ್ಲಿಸಲಾಯಿತು. ಮಾವುತರು, ಕಾವಾಡಿಗಳಿಗೆ ದಿನನಿತ್ಯದ ಪದಾರ್ಥಗಳು ಸೇರಿ ಇನ್ನಿತರ ವಸ್ತುಗಳನ್ನು ಒಳಗೊಂಡ ಕಿಟ್‌ಅನ್ನು ಸಚಿವ ಸೋಮಶೇಖರ್ ವಿತರಿಸಿದರು.

ಬಳಿಕ ಅರಮನೆ ಮುಂಭಾಗದ ಪ್ರಾಂಗಣದಲ್ಲಿ ದಸರಾ ಆನೆಗಳ ಮಾವುತ, ಕಾವಾಡಿಗಳಿಗೆ ಅಗತ್ಯ ವಸ್ತುಗಳ ಕಿಟ್ ವಿತರಿಸಲಾಯಿತು. ಈ ವೇಳೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸಂಪ್ರದಾಯದಂತೆ ದಸರಾ ಮಹೋತ್ಸವವನ್ನು ನಡೆಸಿಕೊಡುವಂತೆ ಫಲತಾಂಬೂಲ ನೀಡಲಾಯಿತು. ಪೂಜೆಯ ನಂತರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ. ರಾಮದಾಸ್, ಎಲ್.ನಾಗೇಂದ್ರ ಸೇರಿದಂತೆ ಇತರೆ ಜನಪ್ರತಿನಿಧಿಗಳು ಪುಷ್ಪಾರ್ಚನೆ ನೆರವೇರಿಸುವುದರೊಂದಿಗೆ ಗಜಪಡೆಯನ್ನು ಬರ ಮಾಡಿಕೊಂಡರು. ಈ ಸಂದರ್ಭದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಹಂಗಾಮಿ ಉಪ ಮೇಯರ್ ಅನ್ವರ್‌ಬೇಗ್, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ರಘು ಕೌಟಿಲ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಕಾಡಾ ಅಧ್ಯಕ್ಷ ನಿಜಗುಣರಾಜು, ಅಪರ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಜಗತ್ ರಾಮ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಎಸ್ಪಿ ಆರ್.ಚೇತನ್, ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕಮಲಾ ಕರಿಕಾಳನ್, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಜಿಪಂ ಸಿಇಒ ಬಿ.ಆರ್.ಪೂರ್ಣಿಮಾ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ ಇತರರಿದ್ದರು.

ಅರಣ್ಯ ಇಲಾಖೆಯಿಂದ ಬೀಳ್ಕೊಡುಗೆ: ಅಶೋಕಪುರಂನ ಅರಣ್ಯ ಭವನದಲ್ಲಿ ಆ.7ರ ಸಂಜೆಯಿಂದ ಬೀಡು ಬಿಟ್ಟಿದ್ದ ಗಜಪಡೆಗೆ ಸಂಪ್ರದಾಯದಂತೆ ಬುಧವಾರ ಬೆಳಗ್ಗೆ 6.25 ರಿಂದ 7.20ರವರೆಗೆ ಅರಣ್ಯ ಇಲಾಖೆ ವತಿಯಿಂದ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು. ಅಪರ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಜಗತ್ ರಾಮ್, ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕೆ.ಕಮಲಾ ಕರಿಕಾಳನ್ ಹಾಗೂ ಇನ್ನಿತರ ಹಿರಿಯ ಅಧಿಕಾರಿಗಳು ಪೂಜೆ ಸಲ್ಲಿಸಿದ ಬಳಿಕ ಬೀಳ್ಕೊಟ್ಟರು.

ಎರಡು ವರ್ಷಗಳ ನಂತರ ಹಳೆಯ ಮೆರುಗನ್ನು ಮರುಗಳಿಸುವಂತೆ ಆನೆಗಳ ಪಯಣ ನಡೆಯಿತು. ಕೊರೊನಾ ಹಿನ್ನೆಲೆಯಲ್ಲಿ 2020ರಲ್ಲಿ ಅರಣ್ಯ ಭವನದಿಂದ ಲಾರಿಗಳ ಮೂಲಕವೇ ಅರಮನೆ ಆವರಣಕ್ಕೆ ಆನೆಗಳನ್ನು ಕರೆತರಲಾಗಿತ್ತು. ಕಳೆದ ವರ್ಷ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ನಿರ್ಬಂಧಿಸಿ ಆನೆಗಳನ್ನು ಯಾವುದೇ ಆಡಂಬರವಿಲ್ಲದೆ ಅರಮನೆಗೆ ಕರೆತರಲಾಗಿತ್ತು. ಆದರೆ ಈ ಬಾರಿ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಿರುವುದರಿಂದ ಅರಣ್ಯ ಭವನದಿಂದ ಅರಮನೆಗೆ ಗಜಪಡೆಯನ್ನು ಸಂಭ್ರಮದಿಂದಲೇ ಕರೆತರಲಾಯಿತು.

ನಂತರ ಅರಣ್ಯ ಭವನದಿಂದ ಹೊರಟ ಆನೆಗಳು ಕಾಲ್ನಡಿಗೆಯಲ್ಲಿ ಅಶೋಕಪುರಂ ರಸ್ತೆ, ಬಲ್ಲಾಳ್ ವೃತ್ತ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್, ಬಿಎನ್ ರಸ್ತೆ ಮೂಲಕ ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಬಂದವು. ಇದೇ ಮೊದಲ ಬಾರಿಗೆ ದಸರಾದಲ್ಲಿ ಪಾಲ್ಗೊಳ್ಳುತ್ತಿರುವ ಮಹೇಂದ್ರ ಆನೆ ವಾಹನಗಳ ಸದ್ದಿಗೆ ಬೆಚ್ಚದೆ ಶಾಂತ ರೀತಿಯಲ್ಲೆ ಹೆಜ್ಜೆ ಹಾಕಿ ಗಮನ ಸೆಳೆಯಿತು. ಮಾರ್ಗದುದ್ದಕ್ಕೂ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಆನೆಗಳ ಗಾಂಭೀರ್ಯವನ್ನು ದಾರಿಹೋಕರು, ಸಾರ್ವಜನಿಕರು ಕಣ್ತುಂಬಿಕೊಂಡರು. ನೂರಾರು ಮಂದಿ ಮೊಬೈಲ್‌ನಲ್ಲಿ ಆನೆಗಳ ಚಿತ್ರವನ್ನು ಸೆರೆ ಹಿಡಿದು ಸಂಭ್ರಮಿಸಿದರು.

ನಾಳೆ ತೂಕ ಪಾಲನೆ: ಸಂಪ್ರದಾಯದಂತೆ ಅರಮನೆಗೆ ಬಂದ ಮರು ದಿನವೇ ತೂಕ ಮಾಡಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಆ.11ರಂದು 9ಕ್ಕೆ ಧನ್ವಂತ್ರಿ ರಸ್ತೆಯಲ್ಲಿರುವ ತೂಕ ಮಾಡುವ ಕೇಂದ್ರದಲ್ಲಿ ಆನೆಗಳಿಗೆ ತಪಾಸಣೆ ಮಾಡಿಸಲಾಗುತ್ತದೆ. ಇನ್ನೆರಡು ದಿನದ ನಂತರ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಆನೆಗಳಿಗೆ ತಾಲೀಮು ನಡೆಸಲಾಗುತ್ತದೆ. ಹಂತ ಹಂತವಾಗಿ ಬಾರ ಹೊರುವ, ಮರದ ಅಂಬಾರಿ ಹೊರುವ ತಾಲೀಮು ನಡೆಸಲಾಗುತ್ತದೆ.

ಅಭಿಮನ್ಯು ಪ್ರತ್ಯೇಕ ವಾಸ್ತವ್ಯ: ಅರಮನೆ ಅಂಗಳದಲ್ಲಿ ನಿರ್ಮಿಸಿರುವ ಮೂರು ಶೆಡ್‌ಗಳಲ್ಲಿ 9 ದಸರೆ ಆನೆಗಳು ವಾಸ್ತವ್ಯ ಹೂಡಿವೆ. ಈ ಪೈಕಿ ಕ್ಯಾಪ್ಟನ್ ಅಭಿಮನ್ಯು ಮತ್ತು ಚೈತ್ರ ಆನೆ ಒಂದು ಶೆಡ್‌ನಲ್ಲಿವೆ. ಮತ್ತೊಂದು ದೊಡ್ಡ ಶೆಡ್‌ನಲ್ಲಿ ಮಾಸ್ಟರ್ ಅರ್ಜುನ, ಗೋಪಾಲಸ್ವಾಮಿ, ಮಹೇಂದ್ರ, ಭೀಮ, ಹಾಗೂ ಲಕ್ಷ್ಮೀ ಆನೆಗಳು ಬೀಡುಬಿಟ್ಟಿವೆ. ಕೋಟೆ ಆಂಜನೇಯಸ್ವಾಮಿ ದೇವಾಲಯದ ಸಮೀಪದ ಶೆಡ್‌ನಲ್ಲಿ ಧನಂಜಯ ಮತ್ತು ಕಾವೇರಿ ಆನೆಯಲ್ಲಿ ಕಟ್ಟಿ ಹಾಕಲಾಗಿದೆ.

ಖಾಲಿ ಬಿದ್ದಿವೆ

ತಿಳಿಸಿದರು. ದೊರೆತಿ ರುವ ಭೂಮಿಯಲ್ಲಿ ಬಡಾವಣೆ ನಿರ್ಮಿಸು ವುದಲ್ಲದೆ, ಬೆಂಗಳೂರು ಬಿಡಿಎ ಮಾದರಿ ಯಲ್ಲೇ ಮೈಸೂರಿನಲ್ಲೂ ಬಡವರು ಮತ್ತು ಮಧ್ಯಮ ವರ್ಗದವರಿಗೆ ಗುಂಪು ಮನೆ ಗಳನ್ನು ನಿರ್ಮಿಸಿಕೊಡಲು ಸರ್ಕಾರ ಬಯಸಿದೆ ಎಂದರು.

ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ಆರ್ಥಿಕತೆಯನ್ನು ಬಲಪಡಿಸಿ ಜನರಿಗೆ ನಿವೇಶನಗಳನ್ನು ವಿತರಿಸಲು ಯೋಜಿಸಲಾಗಿದ್ದು ಹಾಸನದಲ್ಲಿ 1200 ಎಕರೆ, ಬಳ್ಳಾರಿಯಲ್ಲಿ 120 ಎಕರೆ,ದಾವಣಗೆರೆಯಲ್ಲಿ ಐವತ್ತೇಳು ಎಕರೆ ಸೇರಿದಂತೆ ಹಲವು ಕಡೆ ಭೂಮಿ ಖರೀದಿಸಲಾಗಿದೆ ಎಂದು ನುಡಿದರು. ಹಲವು ಕಾಲದಿಂದ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ನಿವೇಶನ ಹಂಚಿಕೆ ಮಾಡುವ ಕಾರ್ಯ ನಡೆದಿಲ್ಲ. ಆದರೆ ಇನ್ನು ಮುಂದೆ ಸಣ್ಣ ಮಟ್ಟದಲ್ಲಾದರೂ ಭೂಮಿಯನ್ನು ಅಭಿವೃದ್ಧಿಪಡಿಸಿ ಜನರಿಗೆ ಹಂಚಿಕೆ ಮಾಡುವುದು ಸರ್ಕಾರದ ಯೋಚನೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಆರ್ಥಿಕವಾಗಿ ಸದೃಢಗೊಳಿಸಿ ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಎಲ್ಲ ರೀತಿಯ ಕ್ರಮಗಳನ್ನು ಕೈಗೊಂಡಿದ್ದೇವೆ. ಆದರೆ ಹಲವು ಕಡೆ ರೈತರು ಭೂಮಿ ಕೊಡಲು ಮುಂದೆ ಬರುತ್ತಿಲ್ಲ. ರೈತರು ಭೂಮಿ ಕೊಡದೆ ನಾವೂ ನಿವೇಶನಗಳನ್ನು ಅಭಿವೃದ್ಧಿ ಮಾಡುವುದು ಕಷ್ಟ.

ರೈತರು ಭೂಮಿ ಕೊಟ್ಟರೆ ಅಭಿವೃದ್ಧಿಗೊಂಡಿದ್ದರಲ್ಲಿ ಅರ್ಧ ಅವರ ಪಾಲು: ರೈತರು ಭೂಮಿ ಕೊಡಲು ಮುಂದೆ ಬಂದರೆ ಅಭಿವೃದ್ಧಿಪಡಿಸುವ ಭೂಮಿಯಲ್ಲಿ ಅರ್ಧದಷ್ಟು ಭೂಮಿಯನ್ನು ರೈತರಿಗೇ ಕೊಡುವುದಾಗಿ ನುಡಿದ ಅವರು,ಎಲ್ಲ ಕಡೆ ಬಂಡವಾಳ ಹೂಡಿ ಭೂಮಿ ಖರೀದಿಸುವುದು ಕಷ್ಟ ಎಂದರು. ಈ ಮಧ್ಯೆ ರಾಜ್ಯದಲ್ಲಿ ನಕ್ಷೆ ಇಲ್ಲದಿರುವುದೂ ಸೇರಿದಂತೆ ಹಲವು ಕಾನೂನುಗಳನ್ನು ಉಲ್ಲಂಘಿಸಿ ಜನ ಮನೆ ನಿರ್ಮಿಸಿಕೊಂಡಿದ್ದು ಇದನ್ನು ಸಕ್ರಮಗೊಳಿಸುವ ಸಂಬಂಧ ಈ ತಿಂಗಳಲ್ಲೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ರಾಜ್ಯದ ಹಲವು ನಗರಗಳಲ್ಲಿ ಜಾರಿಯಲ್ಲಿರುವ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿ ಪ್ರಗತಿಪಥದಲ್ಲಿದ್ದು ಮುಂದಿನ ಏಪ್ರಿಲ್ ತಿಂಗಳ ಒಳಗಾಗಿ ಕಾಮಗಾರಿ ಪೂರ್ಣಗೊಳಿಸಲು ಸಂಬಂಧಪಟ್ಟವರಿಗೆ ಮುಖ್ಯಮಂತ್ರಿಗಳು ಆದೇಶ ನೀಡಿದ್ದಾರೆ ಎಂದರು. ಸ್ಮಾರ್ಟ್ ಸಿಟಿ ವಿಸ್ತರಣೆಗೆ ಮನವಿ: ಸ್ಮಾರ್ಟ್ ಸಿಟಿ ಯೋಜನೆಯನ್ನು ಇನ್ನೂ ಹಲವು ನಗರಗಳಿಗೆ ವಿಸ್ತರಿಸಲು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದ್ದರೂ ಹಣಕಾಸಿನ ಕೊರತೆಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿಲ್ಲ. ಹೀಗಾಗಿ ಉತ್ತರ ಪ್ರದೇಶದಲ್ಲಿ ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾದ ನಗರಗಳನ್ನು ಹೊರತುಪಡಿಸಿ ಇತರ ನಗರಗಳ ಅಭಿವೃದ್ಧಿಗೆ ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿದ್ದಾರೆ.ನಾವು ಕೂಡಾ ಕರ್ನಾಟಕದಲ್ಲಿ ಅದೇ ಕೆಲಸ ಮಾಡಿದ್ದೇವೆ ಎಂದರು.

ಪ್ರಸಕ್ತ ಸಾಲಿನಿಂದಲೇ ಸಂಗೀತ ವಿವಿಯಲ್ಲಿ ಆದಿವಾಸಿ ನೃತ್ಯ, ಸಂಗೀತದ ಬಗ್ಗೆ ಸರ್ಟಿಫಿಕೇಟ್, ಡಿಪ್ಲೊಮಾ ಕೋರ್ಸ್ ಪ್ರಾರಂಭ

ಆದಿವಾಸಿ ಸಂಸ್ಕೃತಿ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ, ಸಂಗೀತ ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ ಪ್ರಕಟ



ಮೈಸೂರಿನ ಸಂಗೀತ ವಿವಿ ಆವರಣದಲ್ಲಿ ಬುಧವಾರ ನಡೆದ ಆದಿವಾಸಿ ಸಂಸ್ಕೃತಿ ಕುರಿತ ವಿಚಾರ ಸಂಕಿರಣ ಹಾಗೂ ಕಾರ್ಯಾಗಾರಕ್ಕೆ ಸಂಗೀತ ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ ಡೋಲು ಬಾರಿಸುವ ಮೂಲಕ ಚಾಲನೆ ನೀಡಿದರು.

ಮೈಸೂರು,ಆ.10(ಪಿಎಂ)– ಆದಿವಾಸಿ ಸಮುದಾಯದ ನೃತ್ಯ ಮತ್ತು ಸಂಗೀತದ ಬಗ್ಗೆ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯಲ್ಲಿ (ಸಂಗೀತ ವಿವಿ) ಈ ವರ್ಷದಿಂದಲೇ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೋಮಾ ಕೋರ್ಸ್ ಪ್ರಾರಂಭ ಮಾಡಲಾಗುವುದು ಎಂದು ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ ತಿಳಿಸಿದರು.

ಮೈಸೂರಿನ ಸಂಗೀತ ವಿವಿ ಆವರಣದಲ್ಲಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ನಾಗ್ಪುರ್‌ನ ದಕ್ಷಿಣ ಕೇಂದ್ರ ವಲಯ ಸಾಂಸ್ಕೃತಿಕ ಕೇಂದ್ರ, ನವದೆಹಲಿಯ ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು, ಮೈಸೂರು ರಂಗಾಯಣ, ಮುಕ್ತ ವಿವಿ ಹಾಗೂ ಸಂಗೀತ ವಿವಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ಆದಿವಾಸಿ ನೃತ್ಯ ಮಹೋತ್ಸವ ಅಂಗವಾಗಿ ಆದಿವಾಸಿ ಸಂಸ್ಕೃತಿ ಕುರಿತಂತೆ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಹಾಗೂ ಕಾರ್ಯಾಗಾರ ಉದ್ಘಾಟಿಸಿ, ನಂತರ ಅವರು ಮಾತನಾಡಿದರು.

ನಮ್ಮ ವಿವಿ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯಿಂದ ದೇವನಹಳ್ಳಿಯಲ್ಲಿ ಡೋಲು ಬಾರಿಸುವ ತರಬೇತಿ ಕೇಂದ್ರ ಸ್ಥಾಪನೆ ಮಾಡಿದ್ದೇವೆ. 4 ವರ್ಷಗಳಿಂದ ಇದು ಯಶಸ್ವಿಯಾಗಿ ನಡೆಯುತ್ತಿದೆ. ಆದಿವಾಸಿ ಕಲೆಗಳಿಗೂ ಇದೇ ವ್ಯವಸ್ಥೆ ಮಾಡಲು ಈಗಾಗಲೇ ತೀರ್ಮಾನಿಸಿದ್ದು, ವಿವಿ ಆಡಳಿತ ಮಂಡಲಿಯಲ್ಲಿ ಅನುಮೋದನೆ ಪಡೆದು ಜಾರಿಗೆ ತರಲಾಗುವುದು. ಜೊತೆಗೆ ಇದಕ್ಕೆ ಸರ್ಕಾರದ ಸಹಾಯ ಧನ ಕೋರಲಾಗುವುದು ಎಂದು ಹೇಳಿದರು.

ಆದಿವಾಸಿ ಕಲೆ ದಾಖಲೀಕರಣ: ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳಿಗೆ ಸ್ಕ್ರಿಪ್ಟ್ ಹಾಗೂ ಕಲಿಕೆ ಪದ್ಧತಿ ಇದೆ. ಅದು ಆದಿವಾಸಿ ಕಲೆಗಳಿಗೂ ದೊರೆಯಬೇಕು. ಆದಿವಾಸಿ ಸಮುದಾಯಗಳ ಕಲೆಗಳ ಬಗ್ಗೆ ಇತ್ತೀಚೆಗೆ ಸಂಶೋಧನೆಗಳು ನಡೆದು ಪುಸ್ತಕ ಹೊರ ಬಂದಿವೆ. ಅಂತೆಯೇ ನಮ್ಮ ವಿವಿ ಹಾಗೂ ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆ ಜಂಟಿ ಆಶ್ರಯದಲ್ಲಿ ಆದಿವಾಸಿಗಳ ಸಂಸ್ಕೃತಿ, ಸಂಪ್ರದಾಯ ಮತ್ತು ನೃತ್ಯ ಸೇರಿದಂತೆ ಮೊದಲಾದ ಕಲೆಗಳನ್ನು ದಾಖಲೀಕರಣ ಮಾಡಲು ಉದ್ದೇಶಿಸಲಾಗಿದೆ ಎಂದರು.

ನಮ್ಮ ಸಂಸ್ಕೃತಿಯ ಮೂಲಬೇರು ಬುಡಕಟ್ಟು. ಇಂದಿಗೂ ಬುಡಕಟ್ಟು ಸಮುದಾಯಕ್ಕೆ ಪೂರ್ಣ ಪ್ರಮಾಣದಲ್ಲಿ ಶಿಕ್ಷಣ ದೊರೆತಿಲ್ಲ. ಜೊತೆಗೆ ಉದ್ಯೋಗ ಹಾಗೂ ಹಕ್ಕುಗಳು ಸಂಪೂರ್ಣವಾಗಿ ದೊರಕಿಸಿಕೊಡಲು ಪ್ರಯತ್ನ ಇಂದಿಗೂ ನಡೆಯುತ್ತಲೇ ಇದೆ. ವಿಶ್ವದಲ್ಲಿ ಶೇ.47 ಹಾಗೂ ರಾಷ್ಟ್ರದಲ್ಲಿ ಶೇ.87 ರಷ್ಟು ಆದಿವಾಸಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದು ವಿಷಾದಿಸಿದರು.

ಇದಕ್ಕೂ ಮುನ್ನ ವಿವಿ ಆವರಣದಲ್ಲಿ ಆಬುಜ್ಮದೀಯ ನೃತ್ಯ (ಛತೀಸ್‌ಘಡ), ಬಂಜಾರ ನೃತ್ಯ (ಮಹಾರಾಷ್ಟ್ರ), ಶೈಲಾ ಕರ್ಮ ನೃತ್ಯ (ಮಧ್ಯಪ್ರದೇಶ), ಮಾಥುರಿ ಆದಿವಾಸಿ ನೃತ್ಯ (ತೆಲಂಗಾಣ), ದಮಾಮಿ ಸಿದ್ಧಿ ನೃತ್ಯ, ಜೇನು ಕುರುಬ ನೃತ್ಯ, ಡೊಳ್ಳು ಕುಣಿತ (ಕರ್ನಾಟಕ) ಸೇರಿದಂತೆ ಮೊದಲಾದ ಕಲಾ ಪ್ರಕಾರಗಳ ಪ್ರದರ್ಶನ ನಡೆಯಿತು. ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್ಯ, ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ.ಗೌಡ, ಸಂಗೀತ ವಿವಿ ಕುಲಸಚಿವ ಪ್ರೊ.ಟಿ.ಎಸ್. ದೇವರಾಜು, ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ತಳವಾರ್, ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಹಾಸನ ರಘು, ಮೈಸೂರು ವಿಭಾಗದ ಸಂಘಟನಾ ಕಾರ್ಯದರ್ಶಿ ಡಾ.ಕೆ.ವಸಂತಕುಮಾರ್ ಮತ್ತಿತರರು ಹಾಜರಿದ್ದರು.

ಸೆಪ್ಟೆಂಬರ್ ಎರಡನೇ ವಾರದಲ್ಲಿ ಬಳ್ಳಾರಿಯಲ್ಲಿ ರಾಷ್ಟ್ರಮಟ್ಟದ ಬೃಹತ್ ಆದಿವಾಸಿ ನೃತ್ಯ ಉತ್ಸವ

ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮುರನ್ನು ಆಹ್ವಾನಿಸುವ ಉದ್ದೇಶ

ಮೈಸೂರು,ಆ.10(ಪಿಎಂ)– ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆ (ಟಿಆರ್‌ಐ) ವತಿಯಿಂದ ಸೆಪ್ಟೆಂಬರ್ ಎರಡನೇ ವಾರದಲ್ಲಿ ರಾಷ್ಟ್ರಮಟ್ಟದ ಬೃಹತ್ ಆದಿವಾಸಿ ನೃತ್ಯ ಉತ್ಸವ ಆಯೋಜಿಸಲಾಗುತ್ತಿದೆ. ಇದರ ಉದ್ಘಾಟನೆಗೆ ಆದಿವಾಸಿ ಸಮುದಾಯದವರೂ ಆದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ರಾಜೇಶ್ ಜಿ.ಗೌಡ ತಿಳಿಸಿದರು.

ಆದಿವಾಸಿ ಸಂಸ್ಕೃತಿ ಕುರಿತಂತೆ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಬುಡಕಟ್ಟು ಸಂಶೋಧನಾ ಸಂಸ್ಥೆಯು ಆದಿವಾಸಿಗಳಿಗೆ ನೃತ್ಯ ಮಹೋತ್ಸವ ಕಾರ್ಯಕ್ರಮವನ್ನು ಪ್ರತಿವರ್ಷ ರಾಜ್ಯ ಮಟ್ಟದಲ್ಲಿ ಹಮ್ಮಿಕೊಳ್ಳುತ್ತಿದೆ. ಕಳೆದ ವರ್ಷ ನವೆಂಬರ್‌ನಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಈ ನೃತ್ಯ ಮಹೋತ್ಸವ ನಡೆಸಲಾಯಿತು ಎಂದರು.

ರಾಷ್ಟ್ರಮಟ್ಟದ ಆದಿವಾಸಿ ನೃತ್ಯ ಮಹೋತ್ಸವ ಆಚರಣೆ ಮಾಡಲು ಭಾರತ ಸರ್ಕಾರದಿಂದ ನಿರ್ದೇಶನ ಬಂದಿತು. ಈ ಹಿನ್ನೆಲೆಯಲ್ಲಿ ಈಗಾಗಲೇ ಪೂರ್ವಭಾವಿ ಸಭೆ ಮಾಡಲಾಗಿದೆ. ಸಭೆಯಲ್ಲಿ ಈ ಉತ್ಸವಕ್ಕೆ ಭಾರತದ ರಾಷ್ಟ್ರಪತಿ ಅವರನ್ನು ಆಹ್ವಾನಿಸಲು ಉದ್ದೇಶಲಾಗಿದೆ. ಸೆಪ್ಟೆಂಬರ್ 2ನೇ ವಾರದಲ್ಲಿ ಈ ಕಾರ್ಯಕ್ರಮವನ್ನು ಬಳ್ಳಾರಿಯಲ್ಲಿ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ದಾಖಲೀಕರಣಕ್ಕೆ ಸಂಪೂರ್ಣ ಸಹಕಾರ: ಆದಿವಾಸಿ ಕಲೆ ಮತ್ತು ಸಂಸ್ಕೃತಿ ದಾಖಲೀಕರಣ ಮಾಡುವುದು ಅಗತ್ಯ. ಈ ಕೆಲಸ ಟಿಆರ್‌ಐ ವತಿಯಿಂದ ಆಗುತ್ತಿದ್ದು, ಇನ್ನು ಹೆಚ್ಚಿನ ರೀತಿಯಲ್ಲಿ ಆಗಬೇಕು ಎಂಬುದು ನಮ್ಮ ಉದ್ದೇಶ. ರಾಜ್ಯದಲ್ಲಿ ಸುಮಾರು 50 ವಿವಿಧ ಬುಡಕಟ್ಟು ಸಮುದಾಯಗಳು ನೆಲೆಸಿವೆ. ಅದರಲ್ಲಿ ಅರಣ್ಯ ಮೂಲದ ಬುಡಕಟ್ಟು ಸಮುದಾಯಗಳು ಸುಮಾರು 17ರಷ್ಟಿವೆ. ಅವರ ಆಚಾರ–ವಿಚಾರ, ಕಲೆ ದಾಖಲೀಕರಣ ಅಗತ್ಯವಿದೆ. ಆದಿವಾಸಿಗಳ ಸಂಸ್ಕೃತಿ, ಸಂಪ್ರದಾಯ ಮತ್ತು ನೃತ್ಯ ಸೇರಿದಂತೆ ಇನ್ನಿತರೆ ಕಲೆಗಳನ್ನು ದಾಖಲೀಕರಣ ಮಾಡಲು ಟಿಆರ್‌ಐ ವತಿಯಿಂದ ಸಂಗೀತ ವಿವಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಇಂದು ಮೈಸೂರಲ್ಲಿ ಯುವಜನ ಮಹೋತ್ಸವ

ಮೈಸೂರು,ಆ.10–ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಯುವಜನ ಮಹೋತ್ಸವ ಹಾಗೂ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜ್ ಮತ್ತು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆಯನ್ನು 2022ರ ಆಗಸ್ಟ್ 11ರಂದು ಬೆಳಗ್ಗೆ 11 ಗಂಟೆಗೆ ಮಹಾರಾಜ ಕಾಲೇಜ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೆರವೇರಿಸುವರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉನ್ನತ ಶಿಕ್ಷಣ ಸಚಿವ ಹಾಗೂ ಮೈಸೂರು ವಿವಿ ಸಮಕುಲಾಧಿಪತಿ ಡಾ.ಸಿ.ಎನ್.ಅಶ್ವಥ್ ನಾರಾಯಣ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಚಿತ್ರ ನಟ ಯಶ್, ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಶಾಸಕರು ಉಪಸ್ಥಿತರಿರುವರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸೈಬರ್ ಅಪರಾಧ: ಬೀದಿ ನಾಟಕ ಜಾಗೃತಿ



ಮೈಸೂರು,ಆ.10(ಜಿಎ)–ಮೈಸೂರು ಸೈಬರ್ ಕ್ರೈಂ ಪೊಲೀಸರು ಬೀದಿ ನಾಟಕದ ಮೂಲಕ ಸಾರ್ವಜನಿಕರಿಗೆ ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸಿದರು.

ನಗರದ ಸೈಬರ್ ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ ಪೊಲೀಸ್ ಠಾಣಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಬುಧವಾರ ಸಂಜೆ ಚಿಕ್ಕಗಡಿಯಾರ ವೃತ್ತದ ಬಳಿ ಬೀದಿ ನಾಟಕ ಮಾಡುವ ಮೂಲಕ ಆನ್ಲೈನ್ ಮೂಲಕ ಸಾರ್ವಜನಿಕರನ್ನು ಹೇಗೆ ವಂಚಿಸುತ್ತಿದ್ದಾರೆ ಎಂಬುದರ ಬಗ್ಗೆ ಅರಿವು ಮೂಡಿಸಲಾಯಿತು.

'ಜಾಗೃತಿ' ಎಂಬ ಶೀರ್ಷಿಕೆ ಅಡಿ ಬೀದಿ ನಾಟಕ ಮಾಡಿದ ಕಲಾವಿದರು ಪ್ರಮುಖವಾಗಿ ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ನಿಂದ ನಿಮ್ಮನ್ನು ಮದುವೆಯಾಗುವುದಾಗಿ ಹೇಗೆ ವಂಚಿಸುತ್ತಾರೆ, ಆರ್‌ಬಿಐನಿಂದ ಅನುಮತಿ ಪಡೆಯದ ಲೋನ್ ಆ್ಯಪ್ ಮೂಲಕ ವಂಚಿಸಿ ಮಾನಸಿಕವಾಗಿ ಹಿಂಸೆ ನೀಡಿ ವೈಯಕ್ತಿಕ ಫೋಟೋಗಳನ್ನು ಸಾಮಾಜಿಕ ಜಾಲತಾಣ ಮತ್ತು ನಿಮ್ಮ ಸಂಬಂಧಿಕರಿಗೆ ಕಳುಹಿಸಿ ಚಾರಿತ್ರ್ಯಕ್ಕೆ ಧಕ್ಕೆಯುಂಟು ಮಾಡುತ್ತಿರುವುದರ ಬಗ್ಗೆ ಮತ್ತು olx, quikr ಮೂಲಕ ಆರ್ಮಿ ಅಧಿಕಾರಿ ಅಥವಾ ಸಿಬ್ಬಂದಿಗಳ ಹೆಸರನ್ನು ಬಳಸಿಕೊಂಡು ಅಪರಿಚಿತ ವ್ಯಕ್ತಿಗಳ ವಾಹನಗಳನ್ನು ಮಾರಾಟ ಮಾಡುವುದಾಗಿ ನಂಬಿಸಿ ಹಣ ಪಡೆದುಕೊಂಡು ವಂಚನೆ ಮಾಡುತ್ತಿದ್ದಾರೆ ಮತ್ತು ಅಂತಹ ಪ್ರಕರಣಗಳ ಬಗ್ಗೆ ಹೇಗೆ ಎಚ್ಚರ ವಹಿಸಬೇಕು ಎಂಬುದನ್ನು ನಾಟಕದ ಮೂಲಕ ಮಾಹಿತಿ ನೀಡಲಾಯಿತು.

ಬ್ಯಾಂಕಿನ ಅಧಿಕಾರಿ ಹಾಗೂ ಸಿಬ್ಬಂದಿ ಎಂದು ಹೇಳಿ ನಿಮಗೆ ಕರೆಮಾಡಿ ನಿಮ್ಮ ಖಾತೆಗೆ ಯಾರಾದರೂ ಅಪರಿಚಿತ ವ್ಯಕ್ತಿಗಳು ಕರೆಮಾಡಿ OTP ಸಂದೇಶವನ್ನು ಮತ್ತೊಂದು ಸಂಖ್ಯೆಗೆ ಫಾರ್ವರ್ಡ್ ಮಾಡಿ ಅಥವಾ ಲಿಂಕ್‌ಗಳನ್ನು ಕಳುಹಿಸಿ / ಲಿಂಕ್‌ನ್ನು ಕ್ಲಿಕ್ ಮಾಡಿ ಎಂದು ತಿಳಿಸಿದರೆ ಮಾಡಬೇಡಿ. ಅದರ ಬದಲು ನೇರವಾಗಿ ನಿಮ್ಮ ಖಾತೆ ಇರುವ ಬ್ಯಾಂಕಿಗೆ ಹೋಗಿ ಮಾಹಿತಿಯನ್ನು ನೀಡಿ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಬೇಕಿದೆ. ತಿಂಗಳಿಗೆ ಈ ರೀತಿಯ 180ಕ್ಕೂ ಹೆಚ್ಚು ಸೈಬರ್ ಪ್ರಕರಣಗಳು ಮೈಸೂರು ಭಾಗದಲ್ಲಿ ದಾಖಲಾಗುತ್ತಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು ಎಂದು ಜಾಗೃತಿ ಮೂಡಿಸಲಾಯಿತು. ಪ್ರವೀಣ್ ಬೆಳ್ಳಿ ಅವರ ತಂಡದಿಂದ ಈ ಜಾಗೃತಿ ಮೂಡಿಸುವ ಬೀದಿ ನಾಟಕವನ್ನು ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ಗಾರ್ಮೆಂಟ್ಸ್, ಶಾಲಾ, ಕಾಲೇಜು ಸೇರಿದಂತೆ ವಿವಿಧ ಭಾಗಗಳಲ್ಲೂ ಬೀದಿನಾಟಕ ನಡೆಸಲು ನಿರ್ಧರಿಸಿದ್ದಾರೆ. ಕಾರ್ಯಕ್ರಮದಲ್ಲಿ ಸೈಬರ್ ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎನ್. ಜಯಕುಮಾರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಸಿದ್ದೇಶ್, ಅನಿಲ್‌ಕುಮಾರ್, ಮೈಸೂರು ವಿವಿ ಪ್ರಾಧ್ಯಾಪಕರಾದ ಪ್ರೊ.ಜಗದೀಶ್, ಪ್ರೊ.ಮನೋಹರ್ ಸೇರಿದಂತೆ ಠಾಣೆಯ ಸಿಬ್ಬಂದಿ ಇದ್ದರು.



ಮೈಸೂರು ರೇಸ್ ಕ್ಲಬ್ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ರೇಸ್ ಪ್ರತಿನಿಧಿ ಟಿಪ್‌ಸ್ಟರ್ ಪಿ.ಜಿ.ಚಂದ್ರಶೇಖರ್ ಅವರು ಎಂಆರ್‌ಸಿ ಛೇರ್ಮನ್ ವೈ.ಬಿ.ಗಣೇಶ್ ಅವರಿಂದ ಟಿಪ್‌ಸ್ಟರ್ ಟ್ರ್ಯಾಲಿ ಬಹುಮಾನ ಪಡೆದರು. ಈ ವೇಳೆ ಎಂಆರ್‌ಸಿ ಕಮಿಟಿ ಸದಸ್ಯರು, ಸ್ಟೀವರ್ಡ್ಸ್‌ಗಳು ಉಪಸ್ಥಿತರಿದ್ದಾರೆ.



ಮೈಸೂರಿನ ದೇವನೂರು ಕೆರೆ ಬಳಿಯಿಂದ ಕೆಸರೆ 3ನೇ ಹಂತದವರೆಗೆ 3.50 ಕೋಟಿ ವೆಚ್ಚದಲ್ಲಿ ತ್ಯಾಜ್ಯ ನೀರು ನಿರ್ವಹಣೆಗಾಗಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು. ಈ ವೇಳೆ ಉಪ ಮೇಯರ್ ಅನ್ವರ್ ಬೇಗ್ (ಅಲ್ತಾಫ್), ಕಾರ್ಪೊರೇಟರ್ ಪ್ರದೀಪ್‌ಚಂದ್ರ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಮುಖಂಡರಾದ ಮಹದೇವ್, ಮಹಮ್ಮದ್ ಎಕ್ಬಾಲ್ ಪಾಷಾ ಇದ್ದರು.

ನಿಧನ

ಸ್ವಾಮಿಗೌಡ



ಮೈಸೂರು, ಆ.10–ಹಿಂಡಗೂಡ್ಲು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ನಿರ್ದೇಶಕ ಸ್ವಾಮಿಗೌಡ ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾರೆ. ಬಹಳ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು ಬುಧವಾರ ಮುಂಜಾನೆ ನಿಧನ ಹೊಂದಿದರು. ಇವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು. ಮೃತರ ನಿಧನಕ್ಕೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಜಮೀನ್ದಾರ್ ಜವರಪ್ಪ



ಕೆ.ಆರ್.ಪೇಟೆ, ಆ.10– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಸಿಂಗನಹಳ್ಳಿಯ ಜಮೀನ್ದಾರ್ ಜವರಪ್ಪ(96) ಅವರು ಬುಧವಾರ ನಿಧನರಾದರು. ಮೃತರು ಪತ್ನಿ ಜಯಮ್ಮ, ಸೇರಿದಂತೆ ಜನ ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 11 ಗಂಟೆಗೆ ಸಿಂಗನಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ನಾಳೆಯಿಂದ ಮೈಸೂರು-ಚೆನ್ನೈ ನಡುವೆ ಮತ್ತೊಂದು ವಿಮಾನ



ಮೈಸೂರು,ಆ.10(ಆರ್‌ಕೆ)-ಮೈಸೂರು-ಚೆನ್ನೈ ನಡುವೆ ಮತ್ತೊಂದು ವಿಮಾನ ಹಾರಾಟ ಆಗಸ್ಟ್ 12ರಿಂದ ಆರಂಭವಾಗಲಿದೆ. ಈಗಾಗಲೇ ನಿತ್ಯವೂ ಸಂಜೆ ವೇಳೆ ಮೈಸೂರು-ಚೆನ್ನೈ ಇಂಡಿಗೋ ವಿಮಾನ ಸೇವೆ ಒದಗಿಸುತ್ತಿದ್ದು, ಪ್ರಯಾಣಿಕರಿಂದ ಭಾರೀ ಬೇಡಿಕೆ ಹಿನ್ನೆಲೆಯಲ್ಲಿ ಇದೀಗ ವಾರದಲ್ಲಿ 3 ದಿನ ಬೆಳಗ್ಗೆ ಅಲಯನ್ಸ್ ಏರ್ ಸಂಸ್ಥೆಯ ವಿಮಾನ ಹಾರಾಟ ಆರಂಭಿಸಲಿದೆ. 70 ಆಸನ ಸಾಮರ್ಥ್ಯದ ವಿಮಾನವು ಬುಧವಾರ, ಶುಕ್ರವಾರ ಮತ್ತು ಭಾನುವಾರಗಳಂದು ಹಾರಾಟ ನಡೆಸಲಿದೆ. ಚೆನ್ನೈನಿಂದ ಬೆಳಗ್ಗೆ 9.25 ಗಂಟೆಗೆ ಹೊರಡುವ ವಿಮಾನವು ಬೆಳಗ್ಗೆ 11 ಗಂಟೆಗೆ ಮೈಸೂರು ತಲುಪಲಿದೆ. ನಂತರ ಬೆಳಗ್ಗೆ 11.30 ಗಂಟೆಗೆ ಮೈಸೂರಿನಿಂದ ಹೊರಟು ಮಧ್ಯಾಹ್ನ 1 ಗಂಟೆಗೆ ಚೆನ್ನೈ ತಲುಪುವುದು ಎಂದು ಅಲಯನ್ಸ್ ಏರ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಎರಡೂ ನಗರಗಳ ವಿಮಾನ ಸಂಪರ್ಕದಿಂದಾಗಿ ಕೈಗಾರಿಕೋದ್ಯಮ, ಪ್ರವಾಸೋದ್ಯಮ ಹಾಗೂ ಐಟಿ-ಬಿಟಿ ಬೆಳವಣಿಗೆಗೆ ಸಹಕಾರಿಯಾಗುವುದಲ್ಲದೆ, ದೇಶದ ವಿವಿಧ ಭಾಗಗಳಿಗೆ ಸಂಪರ್ಕ ವಿಮಾನಗಳ ತಲುಪಲು ಸಹಕಾರಿಯಾಗಲಿದೆ. ಪ್ರಯಾಣಿಕರಿಗೆ ಹಲವು ಪ್ರಮೋಷನಲ್ ಆಫರ್ ಲಭ್ಯವಿದ್ದು, ಹೆಚ್ಚಿನ ಮಾಹಿತಿಹಾಗಿ www.allianceair.inಗೆ ಲಾಗ್‌ಆನ್ ಆಗಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆ.14ರಂದು ಮೈಸೂರಲ್ಲಿ ಸ್ವಾತಂತ್ರ್ಯ ಓಟ

ಮೈಸೂರು,ಆ.10(ಎಸ್‌ಪಿಎನ್)-'ಆಜಾದಿ ಕಾ ಅಮೃತ್' ಮಹೋತ್ಸವದ ಅಂಗವಾಗಿ ಆ.14ರಂದು ಬೆಳಗ್ಗೆ 7 ಗಂಟೆಗೆ ಮೈಸೂರು ವಿವಿ ಓವೆಲ್ ಮೈದಾನದಲ್ಲಿ 'ಸ್ವಾತಂತ್ರ್ಯ ಓಟ-75'ಅನ್ನು ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ ಆಯೋಜಿಸಲಾಗಿದೆ ಎಂದು ಕ್ಲಬ್‌ನ ಕಾರ್ಯದರ್ಶಿ ಎಂ.ಯೋಗೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೌಢಶಾಲೆಯಿಂದ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗಾಗಿ ಮೂರು ವಿಭಾಗಗಳಲ್ಲಿ ಓಟದ ಸ್ಪರ್ಧೆಯನ್ನು ಏರ್ಪಡಿಸಿದ್ದು, ಮೈಸೂರು ವಿಭಾಗದ ಮೊದಲ ಬಹುಮಾನ ಸಾವಿರ ರೂ., ದ್ವಿತೀಯ ಬಹುಮಾನ 750 ರೂ., ತೃತೀಯ ಬಹುಮಾನ ಜೊತೆಗೆ ಪದಕ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುವುದು. ಅಲ್ಲದೆ, ಈ ಓಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಆಯಾಯ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಿಸಿದ ಗುರುತು ಪತ್ರದೊಂದಿಗೆ ಆ.13 ಸಂಜೆ 4ರಿಂದ 7ರೊಳಗೆ ಲಯನ್ಸ್ ಸಭಾಂಗಣದಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ 94480-46667, 98452-31243, 97519-71978 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಎರಡು ಮನೆ ಬೀಗ ಮುರಿದು ಚಿನ್ನಾಭರಣ, ಬೆಳ್ಳಿ ಪದಾರ್ಥ ಕಳವು

ಮೈಸೂರು, ಆ.10-ಮೈಸೂರು ನಗರದ ಆಲನಹಳ್ಳಿ ಮತ್ತು ಕುವೆಂಪುನಗರ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 2 ಮನೆಗಳ ಬೀಗ ಮುರಿದು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ಆಲನಹಳ್ಳಿ ಠಾಣಾ ವ್ಯಾಪ್ತಿಯ ಸಾರಿಗೆ ನಗರ ನಿವಾಸಿ ಕರಡಿ ರುದ್ರಯ್ಯಗೌಡ(56) ಅವರು ತಮ್ಮ ಪತ್ನಿಯೊಂದಿಗೆ ಸ್ವಗ್ರಾಮ ತಿ.ನರಸೀಪುರ ತಾಲೂಕು ಮಾದಾಪುರಕ್ಕೆ ಆ.6ರಂದು ತೆರಳಿದ್ದು, ಆ.9ರಂದು ಹಿಂತಿರುಗಿದಾಗ ಮನೆಯ ಬಾಗಿಲು ಮುರಿದು ಒಳ ನುಗ್ಗಿದ್ದ ಕಳ್ಳರು, ದೇವರ ಮನೆಯಲ್ಲಿದ್ದ ಅರ್ಧ ಕೆ.ಜಿ. ತೂಕದ ಬೆಳ್ಳಿ ಚೊಂಬು ಕಳವು ಮಾಡಿರುವುದು ಬೆಳಕಿಗೆ ಬಂದಿದೆ.

ಕ್ರೈಂ ಬಾಕ್ಸ್

ಕುವೆಂಪುನಗರ ಠಾಣಾ ವ್ಯಾಪ್ತಿಯ ಶ್ರೀರಾಂಪುರ 2ನೇ ಹಂತದ ನಿವಾಸಿ ಕೆ.ಯು. ನಳಿನಿ(63) ಅವರು ಜು.31ರಂದು ಕುಟುಂಬ ಸಮೇತ ಮಡಿಕೇರಿಗೆ ಹೋಗಿದ್ದು, ಆ.8ರಂದು ಹಿಂತಿರುಗಿದಾಗ ಮನೆಯ ಕಿಟಕಿ ಗ್ರಿಲ್ ಮುರಿದು ಒಳ ನುಗ್ಗಿದ್ದ ಖದೀಮರು, 30 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಎರಡೂ ಪ್ರಕರಣಗಳನ್ನೂ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಜೈಲಲ್ಲಿ ಕೈದಿ ಬಳಿ ಎರಡು ಮೊಬೈಲ್ ಫೋನ್ ಪತ್ತೆ

ಮೈಸೂರು, ಆ.10-ಮೈಸೂರು ಕೇಂದ್ರ ಕಾರಾಗೃಹದ ಕೈದಿಯೋರ್ವನ ಬಳಿ ಎರಡು ಮೊಬೈಲ್ ಫೋನ್‌ಗಳು ಪತ್ತೆಯಾಗಿವೆ. ಕಾರಾಗೃಹದ ಅಧಿಕಾರಿ ಹಾಗೂ ಸಿಬ್ಬಂದಿ, ಆ.6ರಂದು ರಾತ್ರಿ ಕಾರಾಗೃಹದ ಕೊಠಡಿ ಸಂಖ್ಯೆ 7ಕ್ಕೆ ಅನಿರೀಕ್ಷಿತವಾಗಿ ಭೇಟಿ ನೀಡಿ ತಪಾಸಣೆ ನಡೆಸಿದಾಗ ವಿಚಾರಣಾಧೀನ ಬಂಧಿ ಲಕ್ಷ್ಮಣ ಅಲಿಯಾಸ್ ರಾಖಿ ಅಲಿಯಾಸ್ ಕೆ.ಡಿ.ಲಕ್ಷ್ಮಣ ಎಂಬಾತನ ಹಾಸಿಗೆ ಹೊದಿಕೆಯಲ್ಲಿ ರೆಡ್ ಮಿ ಫೋನ್, ಸಿಮ್‌ಕಾರ್ಡ್, ಎರಡು ಏರ್‌ಫೋನ್‌ಗಳು, ಒಂದು ಚಾರ್ಜರ್ ಹಾಗೂ ಅದೇ ಕೊಠಡಿಯಲ್ಲಿ ಕಸದ ಡಬ್ಬಿಯಲ್ಲಿ ಸ್ಯಾಮ್‌ಸಂಗ್ ಮೊಬೈಲ್ ಫೋನ್ ಮತ್ತು ಸಿಮ್‌ಕಾರ್ಡ್ ದೊರಕಿದೆ. ಈ ಸಂಬಂಧ ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಕೆ.ಸಿ.ದಿವ್ಯಶ್ರೀ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಸಾಯಿಖಾನೆಗೆ ಸಾಗಿಸುತ್ತಿದ್ದ 11 ಜಾನುವಾರು ರಕ್ಷಣೆ

ನಂಜನಗೂಡು, ಆ.10-ಕೇರಳದ ಕಸಾಯಿ ಖಾನೆಗೆ ಸಾಗಿಸುತ್ತಿದ್ದ 11 ಜಾನುವಾರುಗಳನ್ನು ರಕ್ಷಿಸಿರುವ ನಂಜನಗೂಡು ಗ್ರಾಮಾಂತರ ಠಾಣಾ ಪೊಲೀಸರು, ಇಬ್ಬರನ್ನು ಬಂಧಿಸಿ, ಐವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಹುಣಸೂರು ಟೌನ್‌ನ ಮೊಹಮ್ಮದ್ ಫೈರೋಜ್(30) ಮತ್ತು ಪಿರಿಯಾಪಟ್ಟಣ ತಾಲೂಕು ರಾವಂದೂರು ಗ್ರಾಮದ ಮಹಮ್ಮದ್ ಷಫೀಕ್ (32) ಬಂಧಿಸಲ್ಪಟ್ಟವರಾಗಿದ್ದು, ಇವರು ನೀಡಿದ ಮಾಹಿತಿ ಮೇರೆಗೆ ಪಿರಿಯಾಪಟ್ಟಣ ತಾಲೂಕು ಅಡಗನಹಳ್ಳಿ ಗ್ರಾಮದ ಸಾಜಿಲ್ ಪಾಷಾ, ಜಬ್ಬಿ ಅಹಮ್ಮದ್ ಅಲಿಯಾಸ್ ಪಪ್ಪು ಮತ್ತು ಮುಬಾರಕ್ ಅಲಿಯಾಸ್ ಮುಬ್ಬು ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ನಂಜನಗೂಡು ಗ್ರಾಮಾಂತರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಅವರು ಆ.8ರಂದು ಮುಂಜಾನೆ ಗಸ್ತಿನಲ್ಲಿದ್ದ ವೇಳೆ ನಂಜನಗೂಡು-ಹುಲ್ಲಹಳ್ಳಿ ಮುಖ್ಯ ರಸ್ತೆಯ ಕಮಲಮ್ಮ ಗುರುಮಲ್ಲಪ್ಪ ಕಲ್ಯಾಣ ಮಂಟಪದ ಪಕ್ಕ ಬರುತ್ತಿದ್ದ ಗೂಡ್ಸ್ ವಾಹನ (ಕೆಎ 45 ಎ 3222)ವನ್ನು ತಡೆದು ತಪಾಸಣೆ ನಡೆಸಿದಾಗ ಅದರಲ್ಲಿ 11 ಜಾನುವಾರುಗಳು ಪತ್ತೆಯಾಗಿವೆ. ವಾಹನದಲ್ಲಿದ್ದ ಮೊಹಮ್ಮದ್ ಫೈರೋಜ್ ಮತ್ತು ಮಹಮ್ಮದ್ ಷಫೀಕ್ ಅವರನ್ನು ವಿಚಾರಣೆಗೊಳಪಡಿಸಿದಾಗ ಇವರಿಗೆ ಪಿರಿಯಾಪಟ್ಟಣ ತಾಲೂಕು ಅಣಗನಹಳ್ಳಿ ಗ್ರಾಮದ ಸಾಜಿಲ್ ಪಾಷಾ ಮತ್ತಿತರರು ಜಾನುವಾರುಗಳನ್ನು ನೀಡಿ, ಅವುಗಳನ್ನು ತಾಳವಾಡಿ ಮಾರ್ಗವಾಗಿ ಕೇರಳದ ಕಸಾಯಿಖಾನೆಗೆ ಸಾಗಿಸುವಂತೆ ತಿಳಿಸಿದ್ದರು ಎಂದು ಮಾಹಿತಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಜಾನುವಾರುಗಳನ್ನು ರಕ್ಷಿಸಿ, ಗೂಡ್ಸ್ ವಾಹನ ವಶಪಡಿಸಿಕೊಂಡು ಐವರ ವಿರುದ್ಧ ಪ್ರಕರಣ ದಾಖಲಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಾಟಿಕೋಳಿ, ಟಗರು ಕಳವು

ಮೈಸೂರು,ಆ.10-ಶೆಡ್‌ನ ಜಾಲರಿ ಕತ್ತರಿಸಿ ನಾಟಿಕೋಳಿಗಳು ಹಾಗೂ ಟಗರುಗಳನ್ನು ಕಳವು ಮಾಡಿರುವ ಘಟನೆ ಮೈಸೂರು ತಾಲೂಕು ದುದ್ದಗೆರೆ ಗ್ರಾಮದಿಂದ ವರದಿಯಾಗಿದೆ. ಮೈಸೂರಿನ ಟಿ.ಕೆ.ಬಡಾವಣೆಯಲ್ಲಿ ವಾಸವಿರುವ ಟಿ.ಆರ್.ನಿಂಗಪ್ಪ(65) ಅವರು ದುದ್ದಗೆರೆ ಗ್ರಾಮದ ಜಮೀನಿನಲ್ಲಿ ಶೆಡ್‌ವೊಂದನ್ನು ನಿರ್ಮಿಸಿ 15 ಟಗರು ಹಾಗೂ 120 ನಾಟಿಕೋಳಿಗಳನ್ನು ಸಾಕುತ್ತಿದ್ದರು. ಪ್ರತೀದಿನ ದುದ್ದಗೆರೆ ಗ್ರಾಮಕ್ಕೆ ತೆರಳಿ ಅವುಗಳಿಗೆ ಮೇವು ಹಾಕಿ ಮೈಸೂರಿಗೆ ಹಿಂತಿರುಗುತ್ತಿದ್ದ ಅವರು ಆ.8ರಂದು ಬೆಳಗ್ಗೆ ಹೋದಾಗ ಖದೀಮರು ಶೆಡ್‌ನ ಜಾಲರಿ ಕತ್ತರಿಸಿ ಒಳ ನುಗ್ಗಿ 15 ಟಗರು ಮತ್ತು 25 ನಾಟಿಕೋಳಿಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ವರುಣಾ ಠಾಣೆ ಪೊಲಿಸರು ತನಿಖೆ ನಡೆಸುತ್ತಿದ್ದಾರೆ.

ಸರ್ಕಾರಿ ನೌಕರರ ಸಂಘದ ಗೃಹ ನಿರ್ಮಾಣ ಸಮಿತಿಯಲ್ಲಿ 9.5 ಕೋಟಿ ಅವ್ಯವಹಾರ

ಮಾಜಿ ಅಧ್ಯಕ್ಷ, ಶಿಕ್ಷಕನ ವಿರುದ್ಧ ಪ್ರಕರಣ ದಾಖಲು

ಮಂಡ್ಯ,ಆ.10-ಇಲ್ಲಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಗೃಹ ನಿರ್ಮಾಣ ಸಮಿತಿಯಲ್ಲಿ 9.5 ಕೋಟಿ ರೂ. ಅವ್ಯವಹಾರ ನಡೆಸಿರುವ ಆರೋಪದಡಿ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಶಿಕ್ಷಕರೊಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ. ಸಮಿತಿಯಲ್ಲಿ 2003ರಿಂದ 2008ರವರೆಗೆ ಅಧ್ಯಕ್ಷರಾಗಿದ್ದ ಟಿ.ಹೆಚ್.ರಾಮಕೃಷ್ಣ ಮತ್ತು ಮಾರಗೊಂಡನಹಳ್ಳಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಲೋಕೇಶ್ ಅವರುಗಳು ಸಂಘದಲ್ಲಿ 9.5 ಕೋಟಿ ರೂ. ಅವ್ಯವಹಾರ ನಡೆಸಿದ್ದಾರೆ. ಅಲ್ಲದೇ ರಾಮಕೃಷ್ಣ ಅವರು ಸಮಿತಿ ಅಧ್ಯಕ್ಷ ಸ್ಥಾನ ತೊರೆದ ನಂತರವೂ ಕೂಡ ಸಮಿತಿಯ ಬ್ಯಾಂಕ್ ಖಾತೆಗಳಲ್ಲಿ ವ್ಯವಹರಿಸಿದ್ದಾರೆ. ಅಲ್ಲದೇ ಅರ್ಹರಲ್ಲದ 12 ಮಂದಿಗೆ ನಿವೇಶನ ಹಂಚಿಕೆ ಮಾಡಿದ್ದಾರೆ ಎಂದು ಸಮಿತಿಯ ಹಾಲಿ ಅಧ್ಯಕ್ಷ ಎಸ್.ಶಂಭುಗೌಡ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡ್ಯ ಪಶ್ಚಿಮ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

'ಪ್ರಜಾಪ್ರಭುತ್ವದ ಉಳಿವಿಗಾಗಿ ಸಂವಿಧಾನ - ಒಂದು ಸಂವಾದ' ಕಾರ್ಯಕ್ರಮಕ್ಕೆ ಚಾಲನೆ

ನಾವು ವಿರೋಧಿಸಬೇಕಿರುವುದು ಕೋಮುವಾದವನ್ನ, ಧರ್ಮವನ್ನಲ್ಲ

ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಅಭಿಮತ



ಮೈಸೂರಿನಲ್ಲಿ 'ಪ್ರಜಾಪ್ರಭುತ್ವದ ಉಳಿವಿಗಾಗಿ ಸಂವಿಧಾನ-ಒಂದು ಸಂವಾದ' ಕಾರ್ಯಕ್ರಮಕ್ಕೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ಚಾಲನೆ ನೀಡಿದರು. ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ, ಸಮನ್ವಯ ಸಮಿತಿ ಸಂಚಾಲಕ ಶಿವಲಿಂಗಯ್ಯ, ಮೈವಿವಿ ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ ಇದ್ದಾರೆ.

ಮೈಸೂರು,ಆ.10(ಆರ್‌ಕೆಬಿ)- ಇಂದು ಮೂಲಭೂತವಾದ, ಕೋಮುವಾದ ವ್ಯಾಪಕವಾಗಿದೆ. ನಮ್ಮ ಜನರಿಗೆ ಸಂವಿಧಾನದ ಮೂಲತತ್ವದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ. ತಿನ್ನುವ ಮೊಟ್ಟೆಯನ್ನು ತಟ್ಟೆಯಿಂದ ಕಸಿದುಕೊಳ್ಳುವ ಇಂತಹ ಆಡಳಿತದಲ್ಲಿ ಧರ್ಮ ಬೆರೆತಿದೆ. ಜಾತ್ಯತೀತ ಎಂಬುದು ಧರ್ಮದ ವಿರೋಧವಲ್ಲ. ಧರ್ಮ ರಾಜಕಾರಣದಲ್ಲಿ ಬೆರೆತಾಗ ಅದು ಕೋಮುವಾದ ಆಗುತ್ತದೆ. ನಾವು ವಿರೋಧಿಸಬೇಕಿರುವುದು ಕೋಮುವಾದವನ್ನೇ ಹೊರತು ಧರ್ಮವನ್ನಲ್ಲ ಎಂದು ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ತಿಳಿಸಿದರು.

> ಉತ್ತರಪ್ರದೇಶದ ಬುಲ್ಡೋಜರ್ ವಿಚಾರವನ್ನು ಅವಶ್ಯಕತೆ ಬಿದ್ದರೆ ನಾವೂ ರಾಜ್ಯದಲ್ಲಿ ಮಾಡುತ್ತೇವೆ ಎಂದು ನಮ್ಮ ರಾಜ್ಯದ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಸಂವಿಧಾನಕ್ಕೆ ವಿರುದ್ಧವಾದ, ಕಾನೂನಿಗೆ ವಿರುದ್ಧವಾದ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾದಂತಹ ಯೋಜನೆಯನ್ನು ತೆಗೆದುಕೊಳ್ಳುವಂತಹ ವ್ಯಕ್ತಿ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಇವೆಲ್ಲವನ್ನೂ ನಾವು ಗಂಭೀರವಾಗಿ ಪರಿಗಣಿಸದಿದ್ದರೆ ಮುಂದೆ ನಮಗೆ ಉಳಿಗಾಲವಿಲ್ಲ. ಹೀಗಾಗಿ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.
>
> -ಹೆಚ್.ಎನ್.ನಾಗಮೋಹನದಾಸ್, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ

> ಕೋಮುವಾದ ಹರಡುವುದು ಸುಲಭ, ಕೇಸರಿ ಶಾಲು, ಸ್ವಲ್ಪ ಕುಂಕುಮ ಮೊಬೈಲ್ ವಾಟ್ಸಾಪ್ ಇದ್ದರೆ ಸಾಕು. ಕೋಮುವಾದ ಪ್ರಬಲವಾಗಿ ಹರಡಬಹುದು. ಇದು ದುರಂತ. ನಮ್ಮೆಲ್ಲರ ಮೆದುಳಿಗೆ ಬಡಿದಿದ್ದ ರೋಗ ತೊಳೆಯಲೆಂದೇ ಆರ್‌ಎಸ್‌ಎಸ್ ಆಳ ಮತ್ತು ಅಗಲ ಕೃತಿ ಬಂದಿದೆ.
>
> -ದಿನೇಶ್ ಅಮೀನ್ ಮಟ್ಟು, ಪತ್ರಕರ್ತ

ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ಒಕ್ಕೂಟ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ ಜಂಟಿಯಾಗಿ ಬುಧವಾರ ಆಯೋಜಿಸಿದ್ದ 'ಪ್ರಜಾಪ್ರಭುತ್ವದ ಉಳಿವಿಗಾಗಿ ಸಂವಿಧಾನ - ಒಂದು ಸಂವಾದ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಡೀ ದೇಶದ ರೈತರಿಗೆ ಕೃಷಿ ಕಾಯ್ದೆಗಳು ಬೇಕಾಗಿರಲಿಲ್ಲ. ಕಾರ್ಪೊರೇಟ್ ಹಿತ ಕಾಪಾಡಲು ಕೃಷಿ ಕಾಯ್ದೆಗಳನ್ನು ತಂದರು. ಯಾಕೆ ತರುತ್ತಿದ್ದೇವೆ ಎಂದು ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡಲಿಲ್ಲ. ಯಾಕೆ ಹಿಂದಕ್ಕೆ ಪಡೆಯುತ್ತಿದ್ದೇವೆ ಎಂದು ಹೇಳಲಿಲ್ಲ. ಇದನ್ನು ಪ್ರಜಾಪ್ರಭುತ್ವ ಎನ್ನಬೇಕೇ? ಇವರಿಗೆ ಈ ಕಾಯ್ದೆಗಳನ್ನು ತರಲು ಪುರುಸೊತ್ತಿದೆ ಆಹಾರ, ಶಿಕ್ಷಣ, ಉದ್ಯೋಗ ಹಕ್ಕು ಜಾರಿಗೊಳಿಸಲು ಪುರುಸೊತ್ತಿಲ್ಲ. ಆದರೆ ಇಂತಹ ಕಾಯ್ದೆಗಳನ್ನು ತರಲು ಅವರಿಗೆ ಪ್ರತಿದಿನವೂ ಪುರಸೊತ್ತಿರುತ್ತದೆ. ಬೆಳಗ್ಗೆ ಲೋಕಸಭಾದಲ್ಲಿ ಮಧ್ಯಾಹ್ನ ರಾಜ್ಯಸಭಾದಲ್ಲಿ ಮಂಡಿಸುತ್ತಾರೆ. ಅಲ್ಲಿ ಪಾಸಾಗುತ್ತದೆ. ನಂತರ ರಾಷ್ಟ್ರಪತಿಗಳು ಅದಕ್ಕೆ ಅಂಕಿತ ಹಾಕುತ್ತಾರೆ. ಇದೇನಾ ಪ್ರಜಾಪ್ರಭುತ್ವ? ಎಂದು ಪ್ರಶ್ನಿಸಿದರು

ಅಂಕಿ ಅಂಶದ ಪ್ರಕಾರ 543 ಸಂಸತ್ ಸದಸ್ಯರಲ್ಲಿ ಶೇ.88ರಷ್ಟು ಮಂದಿ ಸಂಸದರು ಕೋಟ್ಯಾಧಿಪತಿಗಳು. ಅದರಲ್ಲಿ ಶೇ.43ರಷ್ಟು ಕ್ರಿಮಿನಲ್ ಕೇಸ್ ಇರುವವರು. ಇಂಥವರಿಂದ ನಾವು ಏನನ್ನು ನಿರೀಕ್ಷಿಸಲು ಸಾಧ್ಯ? ಎಂದು ಪ್ರಶ್ನಿಸಿದ ಅವರು, ನಾವು ಸಂಸತ್ತಿಗೆ, ವಿಧಾನಸಭೆಗೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳಿಸುವುದು ನಮ್ಮ ಬದುಕಿನ ವಿಚಾರಗಳನ್ನು ಚರ್ಚೆ ಮಾಡಲಿಕ್ಕಾಗಿ. ಚರ್ಚೆ ಮಾಡಿದ್ದನ್ನು ತಿಳಿಸುತ್ತಿಲ್ಲ. ಇಂತಹ ಪರಿಸ್ಥಿತಿ ನಮ್ಮ ದೇಶಕ್ಕೆ ಬಂದಿದೆ. ಇಂತಹ ಜನರನ್ನು ಹಿಮ್ಮೆಟ್ಟಿಸದಿದ್ದರೆ ಮುಂದೆ ಕಷ್ಟವಾಗುತ್ತದೆ. ಹಾಗಾಗಿ ಈ ಪರಿಸ್ಥಿತಿಯನ್ನು ಬದಲಾಯಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಸಂಶೋಧನಾ ವಿದ್ಯಾರ್ಥಿಗಳು, ಹೋರಾಟಗಾರರು, ಯುವಕರು ಇದರ ಬಗ್ಗೆ ಚಿಂತಿಸಬೇಕು. ಜನಸಾಮಾನ್ಯರನ್ನು ಸರಿದಾರಿಗೆ ಕೊಂಡೊಯ್ಯುವ ವಾತಾವರಣ ನಿರ್ಮಿಸಬೇಕಿದೆ. ಹಾಗಾದರೆ ಮಾತ್ರ ಪ್ರಜಾಪ್ರಭುತ್ವ ಉಳಿಸಿಕೊಳ್ಳಲು ಸಾಧ್ಯ ಎಂದರು. ದಲಿತ ಸಂಘರ್ಷ ಸಮಿತಿಯ ಮೈಸೂರು ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಅಧ್ಯಕ್ಷತೆ ವಹಿಸಿದ್ದರು. ದಸಂಸ ಒಕ್ಕೂಟದ ಸಮನ್ವಯ ಸಮಿತಿ ಸಂಚಾಲಕ ಕೆ.ಎನ್.ಶಿವಲಿಂಗಯ್ಯ, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ , ಜಿಲ್ಲಾ ಸಂಚಾಲಕ ಶಂಭುಲಿಂಗಸ್ವಾಮಿ, ಕಲ್ಲಹಳ್ಳಿ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಪುಸ್ತಕ ಬರೆಯುವವನ ವ್ಯಕ್ತಿತ್ವ ಪುಸ್ತಕದಷ್ಟೇ ಮುಖ್ಯ: ದಿನೇಶ್ ಅಮೀನ್ ಮಟ್ಟು

ಮೈಸೂರು: ಇದೇ ವೇಳೆ ದೇವನೂರು ಮಹದೇವ ಅವರ 'ಆರ್‌ಎಸ್‌ಎಸ್ ಆಳ ಮತ್ತ ಅಗಲ' ಕೃತಿ ಬಿಡುಗಡೆ ಮಾಡಿದ ಚಿಂತಕ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಮಾತನಾಡಿ, ಇನ್ನು ಮೂರು ವರ್ಷಗಳಲ್ಲಿ ನೂರು ವರ್ಷ ತುಂಬಲಿರುವ ಆರ್‌ಎಸ್‌ಎಸ್ ಬಗ್ಗೆ ಇಷ್ಟು ವರ್ಷಗಳಿಂದ ಈ ಸರಳವಾದ ವಿಚಾರಗಳನ್ನು ದೇವನೂರರ ಪುಸ್ತಕ ಬರುವವರೆಗೂ ನಮಗೆ ತಿಳಿದಿರಲಿಲ್ಲ ಎಂದರು.

ಇಂಗ್ಲಿಷ್‌ನಲ್ಲಿ ಆರ್‌ಎಸ್‌ಎಸ್ ಬಗ್ಗೆ ನೂರಾರು ಪುಸ್ತಕಗಳಿವೆ. ಅದರ ಕನ್ನಡ ಅನುವಾದಗಳು ಬಂದಿವೆ. ಹಾಗಿದ್ದರೂ ನಮಗೇನೂ ಗೊತ್ತಿಲ್ಲದಿರುವುದು ಇದೆ ಎಂದು ಜನರು ಕುತೂಹಲದಿಂದ ದೇವನೂರರ ಪುಸ್ತಕದತ್ತ ಹೊರಳಿದ್ದಾರೆ. 97 ವರ್ಷದ ಆರ್‌ಎಸ್‌ಎಸ್ ಬಗ್ಗೆ ನಮಗೆ ಹಿಂದೆಯೇ ತಿಳಿದಿದ್ದರೆ ಇಂದು ಈ ಪರಿಸ್ಥಿತಿ ಇರುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಈ ಪುಸ್ತಕ ಯಾಕಿಷ್ಟು ಮಾರಾಟವಾಗಿದೆ ಎಂದರೆ ಪುಸ್ತಕದ ಭಾಷೆಯ ಜೊತೆಗೆ ಬರೆಯುವವರ ಸಾಹಿತ್ಯವೂ ಅಷ್ಟೇ ಮುಖ್ಯ. ಪುಸ್ತಕದಷ್ಟೇ ಪುಸ್ತಕ ಬರೆಯುವವನ ವ್ಯಕ್ತಿತ್ವ ಕೂಡ ಅಷ್ಟೇ ಮುಖ್ಯ. ಬರೆದವರು ದೇವನೂರ ಮಹದೇವ ಎಂಬ ಕಾರಣಕ್ಕೆ ಈ ಪುಸ್ತಕ ಹೆಚ್ಚು ಮಾರಾಟವಾಗುತ್ತಿದೆ. ಕನ್ನಡದ ಎಲ್ಲಾ ಸಾಹಿತಿಗಳು ಇದನ್ನು ಗಮನಿಸಬೇಕು. ಬಹಳಷ್ಟು ಸಾಹಿತಿಗಳಿಗೆ ಓದುಗರ ವರ್ಗ ಇರುತ್ತದೆ. ಅಷ್ಟೇ ಜವಾಬ್ದಾರಿ ಪತ್ರಕರ್ತರಿಗಷ್ಟೇ ಅಲ್ಲ, ಸಾಮಾಜಿಕ ಜವಾಬ್ದಾರಿ ಇಲ್ಲದಿದ್ದರೆ ಆತ ಸಾಹಿತಿ ಇರಲಿ, ಬರಹಗಾರ ಇರಲಿ, ವೈದ್ಯ, ಇಂಜಿನಿಯರ್ ಇರಲಿ ಯಶಸ್ಸು ಸಾಧ್ಯವಿಲ್ಲ. ಸಾಮಾಜಿಕ ಜವಾಬ್ದಾರಿ ಇರಬೇಕು. 'ಆರ್‌ಎಸ್‌ಎಸ್ ಆಳ-ಅಗಲ' ಬರಹಗಾರರನ್ನು ಎಚ್ಚರಿಸುವ ಪುಸ್ತಕ. ಇದೊಂದು ವಿಸ್ತೃತ ರೂಪದ ಕರಪತ್ರ ಎಂದು ಅಭಿಪ್ರಾಯಪಟ್ಟ ಅವರು, ಈ ರೀತಿಯ ಚಳುವಳಿ, ಹೋರಾಟ ಬಿಟ್ಟು ದೇವನೂರರು ಬೇರೆ ಏನಾದರೂ ಬರೆದಿದ್ದರೆ ನೊಬೆಲ್ ಪ್ರಶಸ್ತಿ ಬರುತ್ತಿತ್ತೇನೋ ಎಂದು ಹೇಳಿದರು.

ಹೆಡಗೆವಾರ್, ಗೋಲ್ವಾಲ್ಕರ್, ಸಾವರ್ಕರ್ ಫೋಟೋ ಇಟ್ಟು ಚುನಾವಣೆ ಎದುರಿಸಲಿ: ಬಿಜೆಪಿಗೆ ತಾಕತ್ತಿದ್ದರೆ ಹೆಡಗೆವಾರ್, ಗೋಲ್ವಾಲ್ಕರ್, ಸಾವರ್ಕರ್ ಪೋಸ್ಟರ್ ಹಾಕಿ ಚುನಾವಣೆ ಎದುರಿಸಲಿ. ನಾವು ಗಾಂಧಿ, ಅಂಬೇಡ್ಕರ್, ನೆಹರು, ಲೋಹಿಯಾ ಹಾಕುತ್ತೇವೆ. ನಮಗೆ ತಾಕತ್ತಿದೆ. ಬದ್ಧತೆ ಇದೆ. ಮಾಯಾವತಿಯವರು ನಾರಾಯಣಗುರು, ಪೆರಿಯಾರ್ ಫೋಟೋ ಹಾಕುತ್ತಾರೆ. ನಿಮಗೆ ನಿಮ್ಮ ಐಡಿಯಾಲಜಿಗಳು ಇದೇ ಹೆಡಗೆವಾರ್, ಗೋಲ್ವಾಲ್ಕರ್, ಸಾವರ್ಕರ್ ಅವರ ಫೋಟೋ ಹಾಕಿಕೊಂಡು ಜನರ ಮುಂದೆ ಹೋಗಿ ಓಟು ಕೇಳಲಿ. ಗಾಂಧಿ, ಅಂಬೇಡ್ಕರ್, ಬುದ್ಧ, ಬಸವ ಬಗ್ಗೆ ಮಾತನಾಡುವುದನ್ನು ಬಿಡಲಿ ಎಂದರು. ಇಂದು ಹೆಡಗೆವಾರ್, ಗೋಲ್ವಾಲ್ಕರ್ ಬರೆದ ಪುಸ್ತಕವನ್ನು ಪ್ರಿಂಟ್ ಹಾಕುತ್ತಿದ್ದಾರೆ. ಅದನ್ನಿಟ್ಟುಕೊಂಡು ಹೋದರೆ ಅವರಿಗೆ ಓಟು ಬೀಳುವುದಿಲ್ಲ.ಅವರ ಚಿಂತನೆಗಳನ್ನು ಒಂದೊಂದಾಗಿ ಬಹಳ ವ್ಯವಸ್ಥಿತವಾಗಿ ಇಂಪ್ಲಿಮೆಂಟ್ ಮಾಡುತ್ತಿದ್ದಾರೆ. ಆರ್‌ಎಸ್‌ಎಸ್‌ನವರು ಯಾರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲ. ಹಿಂದೂ ರಾಷ್ಟ್ರ ಸ್ಥಾಪನೆ ಮಾಡುತ್ತೇವೆ ಎನ್ನುತ್ತಿದ್ದಾರೆ ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು.

ಮರಣ ಮೃದಂಗವಾಗಿರುವ ರಸ್ತೆಗಳ ದುರಸ್ತಿಗೆ ಆಗ್ರಹ

ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್



ಮೈಸೂರು, ಆ.10(ಆರ್‌ಕೆಬಿ)- ಮೈಸೂರು ನಗರದಿಂದ ಕೆಆರ್‌ಎಸ್‌ಗೆ ಸಾಗುವ ಮಾರ್ಗದಲ್ಲಿ ರಿಂಗ್ ರಸ್ತೆಯ ಬಲಭಾಗದಿಂದ ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ (ಈಗ ಮಣಿಪಾಲ್ ಆಸ್ಪತ್ರೆ) ಸಾಗುವ ಮಾರ್ಗದ ಮೂರು ಕಡೆ ಅಂಡರ್‌ಪಾಸ್ ರೈಲ್ವೆ ಮೇಲ್ಸೇತುವೆಗಳಿವೆ. ಆದರೆ, 15 ವರ್ಷಗಳ ಹಿಂದೆ ರೂಪಿಸಿದ ಅವೈಜ್ಞಾನಿಕ ಯೋಜನೆಯಿಂದಾಗಿ ಇಂದು ಸಾರ್ವಜನಿಕರು ಸಂಕಷ್ಟ ಅನುಭವಿಸುವಂತಾಗಿದೆ ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರೂ ಆದ ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ತಿಳಿಸಿದ್ದಾರೆ.

ರಿಂಗ್ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ 15 ವರ್ಷದ ಹಿಂದೆ ನಿರ್ಮಿಸಿದ್ದು, ಅರಸೀಕೆರೆ ಸಾಗುವ ರೈಲ್ವೆ ಮಾರ್ಗ, ಬೆಲವತ್ತ ರೈಲ್ವೆ ಮಾರ್ಗ ಹಾಗೂ ಆರ್‌ಬಿಐ ಸಮೀಪದ ರೈಲ್ವೆ ಮಾರ್ಗ ಸೇರಿದಂತೆ ಮೂರೂ ರೈಲ್ವೆ ಟ್ರ್ಯಾಕ್ ಅಂಡರ್‌ಪಾಸ್ ಬಳಿ ರಸ್ತೆಯನ್ನು 4 ಪಥದ ಬದಲು 2 ಪಥಕ್ಕೆ ಇಳಿಸಲಾಗಿದೆ. ಜತೆಗೆ ವಾಹನಗಳು ಒನ್ ವೇ ಇಂದ ಟೂ ವೇಯಲ್ಲಿ ಈ ಜಾಗದಲ್ಲಿ ಸಂಚರಿಸುವಂತಾಗಿದೆ. ಇದರಿಂದ ವಾಹನಗಳು ಮುಖಾಮುಖಿ ಡಿಕ್ಕಿ ಹೊಡೆದು ಅಪಘಾತಗಳಲ್ಲಿ ನಿರಂತರ ಸಾವು, ನೋವುಗಳು ಸಂಭವಿಸುತ್ತಿವೆ. ಮುಂದಾಲೋಚನೆ ಹಾಗೂ ದೂರದೃಷ್ಟಿ ಇಲ್ಲದ ಯೋಜನೆ ರೂಪಿಸಿ, ಅನುಷ್ಠಾನಗೊಳಿಸಿದ ಪರಿಣಾಮ ಆಗುತ್ತಿರುವ ಅನಾಹುತಗಳಿಗೆ ಯಾರನ್ನು ಹೊಣೆ ಮಾಡಬೇಕೆಂಬುದೇ ಯಕ್ಷ ಪ್ರಶ್ನೆಯಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರಿಗೆ ಹೆಚ್ಚಾಗಿ ಪ್ರವಾಸಿಗರು ಬರುವುದರಿಂದ ಅವರಿಗೆ ಈ ಬಗ್ಗೆ ಗೊತ್ತಿರುವುದಿಲ್ಲ. ರಿಂಗ್ ರಸ್ತೆಯಲ್ಲಿ ಎರಡೂ ಬದಿಯಿಂದ ವೇಗವಾಗಿ ಬರುವ ವಾಹನಗಳು ರಸ್ತೆ ಕಿರಿದಾಗಿರುವುದನ್ನು ಗಮನಿಸದೆ ಹಲವು ಬಾರಿ ಅಪಘಾತಗಳು ಸಂಭವಿಸಿ ಸಾವು, ನೋವುಗಳು ಉಂಟಾಗುತ್ತಿವೆ. ಅಮೂಲ್ಯ ಜೀವಗಳ ಸಾವಿನ ಸರಣಿ ಇಲ್ಲಿ ಮುಂದುವರಿದಿದೆ. ಅಧಿಕಾರಿ ವಲಯದ ಅಸಡ್ಡೆ ಪರಿಣಾಮ ಮೈಸೂರು ನಗರದಲ್ಲಿ ನಿತ್ಯ ಅಪಘಾತ ಸಂಭವಿಸುತ್ತಿದ್ದು, ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದು ಆಡಳಿತ ವರ್ಗದ ಬೇಜವಾಬ್ದಾರಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಸ್ಥಳೀಯ ಆಡಳಿತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ರೈಲ್ವೆ ಇಲಾಖೆ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಹೊರಬೇಕಿದೆ. ಆದರೆ, ಎಲ್ಲರೂ ತಮ್ಮ ಬೇಜವಾಬ್ದಾರಿತನ ಪ್ರದರ್ಶಿಸುವ ಮೂಲಕ ಜನರ ಜೀವದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ ಎಂದು ದೂರಿದ್ದಾರೆ. ಹಾಗಾಗಿ, ಮೂರೂ ಭಾಗದಲ್ಲಿರುವ ರೈಲ್ವೆ ಅಂಡರ್‌ಪಾಸ್ ಸೇತುವೆಯನ್ನು ವಿಸ್ತರಿಸಿ ನಾಲ್ಕು ಪಥದ ರಸ್ತೆಯನ್ನಾಗಿ ಮಾಡಬೇಕು. ಇಲ್ಲವಾದರೆ, ಇನ್ನಷ್ಟು ಅಮಾಯಕ ಜೀವಗಳು ಬಲಿಯಾಗುವುದರಲ್ಲಿ ಯಾವುದೇ ರೀತಿಯ ಅನುಮಾನ ಇಲ್ಲವಾಗಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಅವರು ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಉಪಸ್ಥಿತರಿದ್ದರು.

> ಕೆಆರ್‌ಎಸ್ ಮಾರ್ಗದಲ್ಲಿ ಮುಂದುವರೆದರೆ ಕಾಫಿ ಬೋರ್ಡ್ ಸಮೀಪ ಲೆವೆಲ್ ಕ್ರಾಸಿಂಗ್‌ನಲ್ಲೂ ಇದೇ ಪರಿಸ್ಥಿತಿ ಇದ್ದು, ನಿತ್ಯ ಒಂದಿಲ್ಲೊಂದು ಅವಘಡಗಳು ಸಂಭವಿಸುತ್ತಲೇ ಇವೆ. ದಸರಾ ವೇಳೆ ಉಂಟಾಗುವ ವಾಹನಗಳ ದಟ್ಟಣೆಯಿಂದ ನೂರಾರು ವಾಹನಗಳು ಕಿಲೋ ಮೀಟರ್ ದೂರ ಸಾಲುಗಟ್ಟಿ ನಿಲ್ಲುವುದು ಸಾಮಾನ್ಯವಾಗಿದೆ. ಆದ ಕಾರಣ, ಈ ಭಾಗದಲ್ಲಿ ತುರ್ತಾಗಿ ಮೇಲ್ಸೇತುವೆ ಆಗಬೇಕಿದೆ. ಈ ಕುರಿತಂತೆ ಸಂಬಂಧಿಸಿದ ಆಡಳಿತ ವ್ಯವಸ್ಥೆ ತಕ್ಷಣ ಕಾರ್ಯಪ್ರವೃತ್ತರಾಗದಿದ್ದರೆ, ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು. -ಕೆ.ವಿ.ಶ್ರೀಧರ್

ನ್ಯಾ.ಉದಯ್ ಉಮೇಶ್ ಲಲಿತ್ ದೇಶದ 49ನೇ ಮುಖ್ಯ ನ್ಯಾಯಮೂರ್ತಿ



ನವದೆಹಲಿ,ಆ.10-ದೇಶದ 49ನೇ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ. ಉದಯ್ ಉಮೇಶ್ ಲಲಿತ್ ಅವರನ್ನು ನೇಮಕ ಮಾಡಲಾಗಿದೆ. ಈ ಕುರಿತಂತೆ ಕೇಂದ್ರ ಕಾನೂನು ಸಚಿವಾಲಯ ಮಾಹಿತಿ ನೀಡಿದ್ದು, ದೇಶದ 49ನೇ ಸಿಜೆಐಯಾಗಿ ನ್ಯಾಯಮೂರ್ತಿ ಉದಯ್ ಲಲಿತ್ ಅವರನ್ನು ನೇಮಕ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಶೀಘ್ರವೇ ಹಾಲಿ ಸಿಜೆಐ ರಮಣ ಸೇವಾವಧಿ ಅಂತ್ಯವಾಗುವ ಹಿನ್ನೆಲೆಯಲ್ಲಿ ಈ ನೇಮಕ ಮಾಡಲಾಗಿದ್ದು, ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ.ಉದಯ್ ಲಲಿತ್ ನೇಮಿಸಿ ಆದೇಶ ಹೊರಡಿಸಿದೆ. ಎನ್.ವಿ.ರಮಣ ಸೇವಾವಧಿ ಅಂತ್ಯ ಬಳಿಕ ಸಿಜೆಐ ಆಗಿ ಪದಗ್ರಹಣ ಮಾಡಲಿದ್ದಾರೆ. ಸಿಜೆಐ ರಮಣ ಅವರ ಸೇವಾವಧಿ ಆಗಸ್ಟ್ 26, 2022ರಂದು ಕೊನೆಗೊಳ್ಳಲಿದ್ದು, ಅಂದೇ ನ್ಯಾ.ಉದಯ್ ಉಮೇಶ್ ಲಲಿತ್ ಅವರು ಸಿಜೆಐ ಆಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ನಾಳೆ ಶನಿ ಮಹಾ ಶಾಂತಿ


ಮೈಸೂರು, ಆ.10- ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಆ.12ರಂದು ಶುಕ್ರವಾರ ಮಿಥುನ, ಕನ್ಯಾ, ಧನಸ್ಸು, ಮಕರ, ಕುಂಭ ರಾಶಿಯವರಿಗೆ ಶನಿ ಮಹಾ ಶಾಂತಿ, ಬಾದನಿವಾರಕ ಸುದರ್ಶನ ಹೋಮ ಮಹಾ ಮೃತ್ಯುಂಜಯ ಹೋಮ, ಸ್ವಯಂವರಾ ಪಾರ್ವತಿ ಹೋಮ, ವಿದ್ಯಾಪ್ರದ ಶ್ರೀ ದಕ್ಷಿಣಾಮೂರ್ತಿ ಲಕ್ಷ್ಮೀ ಹಯಗ್ರೀವ ಹೋಮ ಏರ್ಪಡಿಸಲಾಗಿದೆ. ಸಂಕಲ್ಪ ಬೆಳಗ್ಗೆ 8.30, ಹೋಮ 10 ಗಂಟೆಗೆ ಪ್ರಾರಂಭವಾಗಿ 12.30ಗೆ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರನ್ನು ಮೊ. 9845183392, 9845183399 ಮೂಲಕ ಸಂಪರ್ಕಿಸಬಹುದು.

ಇಂದು ಯಜುರಾಪಾಕರ್ಮ ಆಚರಣೆ

ಮೈಸೂರು,ಆ.10-ಮೈಸೂರು ಜಯನಗರದ ಶ್ರೀರಾಮಮಂದಿರದಲ್ಲಿ ಯಜುರುಪಾಕರ್ಮ ಆಚರಣೆ ಹಾಗೂ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ರಾಷ್ಟ್ರಧ್ವಜ ವಿತರಣೆ ಕಾರ್ಯಕ್ರಮವನ್ನು ಗುರುವಾರ(ಆ.11) ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ತ್ರಿಮತಸ್ಥ ಬ್ರಾಹ್ಮಣರಿಂದ ನೂತನ ಯಜ್ಞೋಪವೀತ ಜನಿವಾರ ಧಾರಣೆಗೆ ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬೇಕು. ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ವೆಂಗಿಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ರಾಜ್ಯ ಉಪಾಧ್ಯಕ್ಷ ಬಿ.ಆರ್.ನಟರಾಜ ಜೋಯಿಸ್, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಬ್ರಾಹ್ಮಣ ಮಹಾಸಭಾ ರಾಜ್ಯ ಕಾರ್ಯಕಾರಣಿ ಸದಸ್ಯ ಸತ್ಯನಾರಾಯಣ ಉಪಸ್ಥಿತರಿರುವರು. ಹೆಚ್ಚಿನ ಮಾಹಿತಿಗಾಗಿ ದೂ.ಸಂ:94801-66072 ಸಂಪರ್ಕಿಸಬಹುದು.

ಅಪರಾಧ ತಡೆ-ಪತ್ತೆ, ಸಾರ್ವಜನಿಕರ ಸುರಕ್ಷತೆಗಾಗಿ ಸಿಸಿ ಕ್ಯಾಮರಾ ಅಳವಡಿಸಿ

ವಾಣಿಜ್ಯ ವಹಿವಾಟು ಕೇಂದ್ರಗಳ ಮಾಲೀಕರಿಗೆ ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಸಲಹೆ



ಮೈಸೂರು, ಆ. 10 (ಆರ್‌ಕೆ)-ಅಪರಾಧ ತಡೆ-ಪತ್ತೆ ಹಾಗೂ ಸಾರ್ವಜನಿಕರ ರಕ್ಷಣೆಗಾಗಿ ಜನಸಂದಣಿ ಇರುವ ಎಲ್ಲಾ ವಾಣಿಜ್ಯ ವಹಿವಾಟು ಕೇಂದ್ರಗಳಲ್ಲಿ ಗುಣಮಟ್ಟದ ಸಿಸಿ ಕ್ಯಾಮರಾ, ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್ ಚೆಕ್‌ಮೇಟ್ ಮತ್ತು ಹ್ಯಾಂಡ್ ಹೆಲ್ಡ್‌ಮೆಟಲ್ ಡಿಟೆಕ್ಟರ್‌ಗಳನ್ನು ತಪ್ಪದೇ ಅಳವಡಿಸಿ ಎಂದು ಮೈಸೂರಿನ ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಸಲಹೆ ನೀಡಿದ್ದಾರೆ.



ಮೈಸೂರಿನ ಜೆ.ಕೆ. ಮೈದಾನದ ಪ್ಲಾಟಿನಂ ಜ್ಯೂಬಿಲಿ ಹಾಲ್‌ನಲ್ಲಿ ಕರ್ನಾಟಕ ಸಾರ್ವಜನಿಕ ಸುರಕ್ಷತೆ ಕಾಯ್ದೆ 2017 ಅನ್ನು ಅನುಷ್ಠಾನಗೊಳಿಸುವ ಸಂಬಂಧ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಒಂದೇ ಬಾರಿ 100 ಮಂದಿ ಭೇಟಿ ನೀಡುವ ಅಥವಾ ಬೆಳಗ್ಗೆಯಿಂದ ರಾತ್ರಿವರೆಗೆ 500 ಮಂದಿಗಿಂತ ಹೆಚ್ಚು ಜನರು ಬಂದು ಹೋಗುವ ಎಲ್ಲಾ ಕೇಂದ್ರಗಳು ಈ ಕಾಯ್ದೆ ವ್ಯಾಪ್ತಿಗೆ ಬರಲಿದ್ದು, ಅಲ್ಲಿ ಅಗತ್ಯ ಸುರಕ್ಷತಾ ಕ್ರಮ ವಹಿಸಲೇಬೇಕು ಎಂದು ತಿಳಿಸಿದರು.

ಅದರನ್ವಯ ಅಂಗಡಿ, ಮಾರುಕಟ್ಟೆ ಮಾಲ್, ಹೋಟೆಲ್, ಲಾಡ್ಜ್, ಕಲ್ಯಾಣ ಮಂಟಪ, ಸಿನಿಮಾ ಮಂದಿರ, ಹೋಟೆಲ್, ರೈಲು, ಬಸ್, ವಿಮಾನ ನಿಲ್ದಾಣ, ದೇವಾಲಯ, ಚರ್ಚ್, ಮಸೀದಿ, ಖಾಸಗಿ ಸರ್ಕಾರಿ ಕಚೇರಿ, ಕೈಗಾರಿಕೆ, ಕಾರ್ಖಾನೆ, ಉದ್ದಿಮೆ, ಅಂಗಡಿ ಸೇರಿದಂತೆ ಜನಸಂದಣಿ ಇರುವ ಎಲ್ಲಾ ಬಗೆಯ ವಾಣಿಜ್ಯ ಕೇಂದ್ರಗಳಲ್ಲಿ ಕಾಯ್ದೆಯಲ್ಲಿ ಸೂಚಿಸಿರುವಂತೆ ಅಗತ್ಯ ಸುರಕ್ಷತಾ ಕ್ರಮಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೈಗೊಂಡು ನಿರ್ವಹಣೆ ಮಾಡಬೇಕೆಂದು ಸಲಹೆ ನೀಡಿದರು.

ಭಯೋತ್ಪಾದನಾ, ವಿಧ್ವಂಸಕ ಕೃತ್ಯ ನಡೆದಲ್ಲಿ ಅಮಾಯಕರ ಪ್ರಾಣ ಹಾನಿಯಾಗುತ್ತದೆ. ಸಾರ್ವಜನಿಕರ ಆಸ್ತಿಪಾಸ್ತಿ ನಷ್ಟವಾಗಿ ಕಾನೂನು ಸುವ್ಯವಸ್ಥೆ ಹಾಳಾಗುವುದರಿಂದ ಅಂತಹ ಸಮಾಜಘಾತುಕ ಶಕ್ತಿಗಳನ್ನು ತಡೆಗಟ್ಟುವುದು, ಅಪರಾಧ ಪ್ರಕರಣಗಳನ್ನು ಪತ್ತೆ ಮಾಡಲು ಸಹಾಯವಾಗುವಂತೆ ಕರ್ನಾಟಕ ಸರ್ಕಾರವು 2017ರಲ್ಲಿ ಸಾರ್ವಜನಿಕ ಸುರಕ್ಷತಾ ಕಾಯ್ದೆಯನ್ನು ತಂದು 2018ರ ಜುಲೈ 27ರಿಂದ ರಾಜ್ಯಾದ್ಯಂತ ಜಾರಿಗೆ ತಂದಿದೆ ಎಂದು ತಿಳಿಸಿದರು.

ಹೈ ರೆಸೂಲ್ಯೂಷನ್ ಹೊಂದಿರುವ 3.6 ಮಿ.ಮೀ.ಗಿಂತ ಹೆಚ್ಚು ಪೋಕಲ್ ಲೆಂತ್ ಹೊಂದಿರುವ ಲೆನ್ಸ್, ಕನಿಷ್ಠ 50 ಗಜದವರೆಗೆ ಸೆರೆ ಹಿಡಿಯುವ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಕನಿಷ್ಠ 3 ತಿಂಗಳವರೆಗೆ ಸ್ಟೋರೇಜ್ ಮಾಡುವ ಡಿವೈಸ್ ಬಳಸಬೇಕು. ಡೋರ್ ಫ್ರೇಮ್ ಡಿವೈಸ್ ಬಳಸಬೇಕು, ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್ ಚೆಕ್ ಮೇಟ್ ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್, ವಾಹನ ತಳಭಾಗ ಶೋಧಿಸುವ ಕನ್ನಡಿ, ಬ್ಯಾಗೇಜ್ ಸ್ಕ್ಯಾನರ್‌ಗಳನ್ನೂ ಎಲ್ಲಾ ವಾಣಿಜ್ಯ, ಕೈಗಾರಿಕಾ ಸಂಸ್ಥೆಗಳು, ಧಾರ್ಮಿಕ ಕೇಂದ್ರ, ಶೈಕ್ಷಣಿಕ ಸಂಸ್ಥೆ, ಆಸ್ಪತ್ರೆ, ಕ್ರೀಡಾ ಸಂಕೀರ್ಣಗಳಲ್ಲಿ ಅಳವಡಿಸಿ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಬೇಕು ಎಂದರು.

ಸಿಸಿ ಕ್ಯಾಮರಾಗಳು ದಿನದ 24 ಗಂಟೆಯೂ ಚಲಾವಣೆಯಲ್ಲಿರಬೇಕು. ಕೇಂದ್ರದ ಪ್ರವೇಶ, ನಿರ್ಗಮನ ಮತ್ತು ವಾಹನ ನಿಲುಗಡೆ ಸ್ಥಳಗಳನ್ನು ಸೆರೆ ಹಿಡಿಯುವಂತಿರಬೇಕು. ಕನಿಷ್ಠ 3 ತಿಂಗಳವರೆಗೆ ದಾಸ್ತಾನು ಮಾಡುವ ವ್ಯವಸ್ಥೆಯೊಂದಿಗೆ ಕಾರ್ಯನಿರ್ವಹಿಸುವಂತೆ ವಾಣಿಜ್ಯ ಕೇಂದ್ರಗಳ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ವ್ಯವಸ್ಥೆ ಮಾಡಿಕೊಳ್ಳಬೇಕು. ಕಾಯ್ದೆಯನ್ವಯ ಕ್ರಮ ವಹಿಸದಿದ್ದರೆ ಅಂತಹವರಿಗೆ ನೋಟೀಸ್ ನೀಡಲಾಗುವುದು. ನಂತರವೂ ಕ್ಯಾಮರಾ ಅಳವಡಿಸದಿದ್ದರೆ 5000 ರೂ. ದಂಡ. ಇಷ್ಟಾದರೂ ಕ್ರಮ ವಹಿಸದಿದ್ದಲ್ಲಿ 10,000 ರೂ. ದಂಡ ಹಾಕಲು ಅವಕಾಶವಿದೆ. ನಂತರವೂ 2 ತಿಂಗಳೊಳಗೆ ಕ್ರಮ ವಹಿಸದಿದ್ದಲ್ಲಿ ಉದ್ದಿಮೆಯ ಬಂದ್ ಮಾಡಿಸಬಹುದಾಗಿದೆ ಎಂದು ಶಶಿಧರ್ ಎಚ್ಚರಿಕೆ ನೀಡಿದರು. ದೇವರಾಜ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್, ಲಷ್ಕರ್ ಠಾಣೆಯ ಪಿ.ಸಿ. ಸಂತೋಷ್, ನಜರ್‌ಬಾದ್ ಠಾಣೆಯ ಜೀವನ್, ಉದಯಗಿರಿ ಠಾಣೆಯ ರಾಜು, ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್, ಸಬ್ ಇನ್ಸ್‌ಪೆಕ್ಟರ್‌ಗಳು ಹಾಗೂ ಆ ಠಾಣಾ ವ್ಯಾಪ್ತಿಯ ವಾಣಿಜ್ಯ ವಹಿವಾಟು ಕೇಂದ್ರಗಳ ಮಾಲೀಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಹಲ್ಲೆಗೊಳಗಾದ ಬಿಜೆಪಿ ಪುರಸಭಾ ಸದಸ್ಯನ ನಿವಾಸಕ್ಕೆ ಉಸ್ತುವಾರಿ ಸಚಿವರ ಭೇಟಿ



ಆರೋಪಿಗಳ ಮೇಲೆ ಕ್ರಮ ಜರುಗಿಸದ ಇನ್ಸ್‌ಪೆಕ್ಟರ್ ಸಸ್ಪೆಂಡ್ ಮಾಡಿಸುವುದಾಗಿ ಸಚಿವರ ಭರವಸೆ

ತಿ.ನರಸೀಪುರ, ಆ.10– ಪುರಸಭಾ ಸದಸ್ಯ ಹಾಗೂ ಬಿಜೆಪಿ ಮುಖಂಡ ಎಸ್.ಕೆ.ಕಿರಣ್ ಮೇಲೆ ಹಲ್ಲೆ ನಡೆಸಿದ ಆರೋಪಿಗಳ ಮೇಲೆ ಕಾನೂನು ಕ್ರಮ ಜರುಗಿಸದೇ ನಿರ್ಲಕ್ಷ್ಯ ತೋರಿದ ಪಟ್ಟಣ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಅವರನ್ನು ಕೂಡಲೇ ಸಸ್ಪೆಂಡ್ ಮಾಡುವ ಸಂಬಂಧ ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಗಮನಕ್ಕೆ ತರಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭರವಸೆ ನೀಡಿದರು.

ಪುರಸಭೆಯ ಮತ್ತೊಬ್ಬ ಸದಸ್ಯ ಟಿ.ಎಂ. ನಂಜುಂಡ ಸ್ವಾಮಿ ಕುಮ್ಮಕ್ಕಿನಿಂದ ಹಲ್ಲೆ ಗೊಳಗಾದರೆನ್ನಲಾದ ಎಸ್.ಕೆ.ಕಿರಣ್ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿ ಹಲ್ಲೆ ನಡೆಸಿದ ಆರೋಪಿಗಳಿಗೆ ಶಿಕ್ಷೆ ಕೊಡಿಸುವುದರ ಜೊತೆಗೆ ಕುಟುಂಬಸ್ಥರಿಗೆ ಭದ್ರತೆ ಒದಗಿಸುವ ಭರವಸೆ ನೀಡಿ ಅವರು ಮಾತನಾಡಿದರು. ಬಿಜೆಪಿಯ ಪ್ರಾಮಾಣಿಕ ಕಾರ್ಯಕರ್ತ ಕಿರಣ್ ಮೇಲಿನ ಹಲ್ಲೆ ಬಗ್ಗೆ ಸಂಪೂರ್ಣ ಮಾಹಿತಿ ಪಡೆದಿದ್ದೇನೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಗಮನಕ್ಕೆ ಘಟನೆಯ ವಿವರ ನೀಡಿದ್ದೇನೆ. ಹಲ್ಲೆ ನಡೆದ ಕೆಲವೇ ನಿಮಿಷಗಳಲ್ಲಿ ಜಿಲ್ಲಾಧ್ಯಕ್ಷರು ಮಾಹಿತಿ ನೀಡಿದ್ದ ಹಿನ್ನೆಲೆಯಲ್ಲಿ 24 ಗಂಟೆಯೊಳಗೆ ಹಲ್ಲೆ ಆರೋಪಿಗಳನ್ನು ಬಂಧಿಸುವಂತೆ ಸೂಚನೆ ನೀಡಿದ್ದೆ ಬಿಜೆಪಿ ಕಾರ್ಯಕರ್ತರ ಮೇಲೆ ಮಾರಣಾಂತಿಕವಾಗಿ ಹಲ್ಲೆಯಾಗಿದ್ದರೂ ಸ್ಥಳೀಯ ಪೊಲೀಸರು ಕ್ರಮಕ್ಕೆ ಮುಂದಾಗಿಲ್ಲ. ಪೊಲೀಸರಿಗೆ ಭಯವೇ ಇಲ್ಲದಂತಾಗಿದೆ. ಇದೇ 21 ನೇ ತಾರೀಖು ಮೂಗೂರು ಗ್ರಾಮಕ್ಕೆ ಮುಖ್ಯಮಂತ್ರಿಗಳು ಆಗಮಿಸುತ್ತಿದ್ದು ಘಟನೆ ಸಂಬಂಧ ಕಾರ್ಯಕರ್ತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಕಾರ್ಯಕರ್ತರೇ ಅವರಿಗೆ ಹೇಳುವುದಕ್ಕೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ ಎಂದರು.

ಇಂದು ಸಂಜೆ ಮುಖ್ಯಮಂತ್ರಿಗಳು ಸಭೆಯೊಂದರಲ್ಲಿ ಭಾಗವಹಿಸುತ್ತಿದ್ದು,ಕರ್ತವ್ಯ ಲೋಪವೆಸಗಿದ ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಅವರನ್ನು ಸಸ್ಪೆಂಡ್ ಮಾಡಲು ಅಥವಾ ಬೇರೆಡೆ ವರ್ಗಾವಣೆ ಮಾಡಲು ಮುಖ್ಯಮಂತ್ರಿ ಹಾಗೂ ಗೃಹಸಚಿವರನ್ನು ಖುದ್ದಾಗಿ ಒತ್ತಾಯಿಸುವೆ ಎಂದರು. ಹಲ್ಲೆಗೊಳಗಾದ ಕಿರಣ್ ಕುಟುಂಬಕ್ಕೆ ಪೊಲೀಸ್ ರಕ್ಷಣೆ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ಬಿಜೆಪಿ ಸದಸ್ಯನ ಮೇಲೆ ದೈಹಿಕ ಹಲ್ಲೆ ನಡೆಸಿದ ಆರೋಪಿಗಳಿಂದ ಮುಚ್ಚಳಿಕೆ ಬರೆಸಿಕೊಳ್ಳುವ ಜೊತೆಗೆ ಹಲ್ಲೆಗೆ ಕುಮ್ಮಕ್ಕು ನೀಡಿದವರನ್ನು ಪತ್ತೆ ಹಚ್ಚಿ ಅವರನ್ನು ರೌಡಿ ಲಿಸ್ಟ್‌ಗೆ ಸೇರಿಸಲು ಪೊಲೀಸರಿಗೆ ಸೂಚನೆ ನೀಡುತ್ತೇನೆ ಎಂದು ತಿಳಿಸಿದರು.

ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕ್ಷೇತ್ರಾಧ್ಯಕ್ಷ ಲೋಕೇಶ್ ನಾಯಕ್, ಮಾಜಿ ಅಧ್ಯಕ್ಷ ಪರಶಿವಮೂರ್ತಿ, ಪುರಸಭಾ ಸದಸ್ಯರಾದ ಎನ್. ಲೋಕೇಶ್, ಕೆ.ನಂಜುಂಡಸ್ವಾಮಿ, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಯುವ ಮೋರ್ಚಾ ಅಧ್ಯಕ್ಷ ಕುರುಬೂರು ಶಿವಶಂಕರ್ ಉಪಾಧ್ಯಕ್ಷ ಸಿ.ಬಿ ಹುಂಡಿ ಸಿದ್ದು, ಗ್ರಾ.ಪಂ.ಸದಸ್ಯರಾದ ಕಿರಗಸೂರು ಮಹದೇವಸ್ವಾಮಿ, ಶಿವರಾಜ್, ತಾ.ಪಂ. ಮಾಜಿ ಸದಸ್ಯ ರತ್ನರಾಜ್, ಟಿಎಪಿಸಿಎಂಎಸ್ ನಿರ್ದೇಶಕ ಫ್ಯಾನ್ಸಿ ಮೋಹನ್, ನೆರಗ್ಯಾತನಹಳ್ಳಿ ಪುಟ್ಟಸ್ವಾಮಿ, ಅರವಿಂದ್, ನಂದಕುಮಾರ್ ವಾಸು, ಪುಷ್ಪಮ್ಮ ಮತ್ತಿತರರಿದ್ದರು.

ರಸ್ತೆ ಅಪಘಾತದಲ್ಲಿ ಮೃತಪಟ್ಟವರ ನಿವಾಸಕ್ಕೆ ಕುರುಬ ಸಮಾಜದ ಮುಖಂಡರ ಭೇಟಿ



ಹೆಚ್.ಡಿ.ಕೋಟೆ, ಆ.10– ಅಣ್ಣೂರು ಗ್ರಾಮದ ಸಮೀಪ ಬೈಕ್ ಮತ್ತು ಕ್ಯಾಂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ತಾಲೂಕಿನ ಚಿಕ್ಕ ಕಾಳೇಗೌಡನಪುರ ಗ್ರಾಮದ ನಿವಾಸಿಗಳಾದ ಪ್ರಭು, ಸಣ್ಣ ಸ್ವಾಮಿ, ಸಿದ್ದರಾಜು, ಅವರುಗಳ ನಿವಾಸಕ್ಕೆ ಕೋಟೆ ಕುರುಬ ಸಮಾಜದ ಮಾಜಿ ಪ್ರಧಾನ ಕಾರ್ಯದರ್ಶಿ ಇ. ರಾಜೇಗೌಡ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳುವುದರ ಮೂಲಕ ಧನಸಹಾಯ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕುರುಬ ಸಮಾಜದ ಅಧ್ಯಕ್ಷ ಸುಬ್ರಹ್ಮಣ್ಯ, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆನಂದ್, ಸಮಾಜದ ಮುಖಂಡರುಗಳಾದ ಬೀರೇಗೌಡ, ವಡ್ಡರಗುಡಿ ರಮೇಶ, ಕಾಂಜಿ ಗೌಡ, ಬಸಪ್ಪ, ಕಾರ್ತಿಕ್, ಸೋಮೇಗೌಡ, ರಾಮಕೃಷ್ಣ, ಸಿದ್ದರಾಮೇಗೌಡ, ಕುಮಾರಸ್ವಾಮಿ, ಮುಂತಾದವರು ಹಾಜರಿದ್ದರು.

ರಸ್ತೆ ಡಾಂಬರೀಕರಣಕ್ಕೆ ಶಾಸಕರ ಗುದ್ದಲಿ ಪೂಜೆ



ಹುಣಸೂರು, ಆ.10– ತಾಲೂಕು ಕಟ್ಟೆಮಳಲವಾಡಿ ಗ್ರಾಮದ ಮೂಲಕ ಹಾದು ಹೋಗಿರುವ ಸಣ್ಣೇನಹಳ್ಳಿ ರಸ್ತೆಗೆ 4 ಕೋಟಿ ರೂ. ವೆಚ್ಚದ ಡಾಂಬರೀಕರಣ ಕಾಮಗಾರಿಗೆ ಬುಧವಾರ ಶಾಸಕ ಹೆಚ್.ಪಿ ಮಂಜುನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ತಾಲೂಕಿನಲ್ಲಿ 5 ವರ್ಷದ ಹಿಂದೆ ಪ್ರತಿ ತಿಂಗಳಿಗೊಮ್ಮೆ ಯಾವುದಾದರೊಂದು ಕಾಮಗಾರಿಗೆ ಈ ಗ್ರಾಮದಲ್ಲಿ ಗುದ್ದಲಿ ಪೂಜೆ ನೆರವೇರಿಸುತ್ತಿದ್ದೆ. ಆದರೆ ಈ ನಾಲ್ಕು ವರ್ಷದಲ್ಲಿ ಯಾವ ಕಾಮಗಾರಿಗಳಿಗೂ ಗುದ್ದಲಿ ಪೂಜೆ ಮಾಡಲಾಗಿಲ್ಲ. ಕಾರಣ 8 ತಿಂಗಳು ಬೇರೆ ಶಾಸಕರು ಆಯ್ಕೆಯಾಗಿ ಅವರು ರಾಜೀನಾಮೆ ನೀಡಿದ ನಂತರ ಮತ್ತೆ ಚುನಾವಣೆ ನಡೆದು ನಾನು ಮರು ಆಯ್ಕೆಯಾದ ನಾಲ್ಕೂವರೆ ವರ್ಷದ ನಂತರ ಇದೇ ಮೊದಲ ಬಾರಿಗೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ಮಾಡಿದ್ದೇನೆ ಎಂದರು. ರಸ್ತೆಯ ಅಕ್ಕ ಪಕ್ಕದ ನಿವಾಸಿಗಳು ಒತ್ತುವರಿ ಬಿಟ್ಟುಕೊಟ್ಟು ರಸ್ತೆ ಕಾಮಗಾರಿ ಮಾಡಲು ಸಹಕರಿಸಬೇಕು. ಗ್ರಾಮದ ಮುಖಂಡರು ಇದರ ಜವಾಬ್ದಾರಿಯನ್ನು ಹೊತ್ತು ಕಾಮಗಾರಿ ನಡೆಯಲು ಸಹಕರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಸುಧಾಮಣಿ, ಉಪಾಧ್ಯಕ್ಷೆ ರುಕ್ಮಿಣಿ, ಬಿಜೆಪಿ ಮುಖಂಡ ನಾಗರಾಜ್ ಮಲ್ಲಾಡಿ, ಯು॥ ಶಂಕ್ರಯ್ಯ, ನಸ್ರುಲ್ಲಾ ಖಾನ್, ಸದಸ್ಯರಾದ ವರಲಕ್ಷ್ಮಿ, ಸೌಮ್ಯ, ನಟರಾಜು, ಆಂಜನೇಯ, ತಗಡಯ್ಯ, ನಾಗೇಂದ್ರಶೆಟ್ಟಿ, ಮಹದೇವ ಸೇರಿದಂತೆ ಎಲ್ಲಾ ಸದಸ್ಯರು ಗ್ರಾಮದ ಮುಖಂಡರು ಇದ್ದರು.

ಆ.21ರಂದು ಮೂಗೂರಿಗೆ ಮುಖ್ಯಮಂತ್ರಿ

ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಗೋಪುರ ಕಳಸ ಪ್ರತಿಷ್ಠಾಪನೆ, ಕುಂಬಾಭಿಷೇಕದಲ್ಲಿ ಭಾಗಿ



ಮೂಗೂರು, ಆ.10– ಆ.21ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇಗುಲದ ನೂತನ ಗೋಪುರದ ಕಳಸ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಜಿಲ್ಲಾಡಳಿತ ಅಚ್ಚುಕಟ್ಟಾಗಿ ಕಾರ್ಯಕ್ರಮ ವ್ಯವಸ್ಥೆ ಮಾಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಆವರಣದಲ್ಲಿ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಶಾಸಕರಾದ ಎಂ. ಅಶ್ವಿನ್ ಕುಮಾರ್, ಸಿ.ಎಸ್. ಪುಟ್ಟರಾಜು, ಸಾ.ರಾ.ಮಹೇಶ್, ಎಂಎಲ್‌ಸಿ ಮರಿತಿಬ್ಬೇಗೌಡರ ಮನವಿ ಮೇರೆಗೆ ಉದ್ಘಾಟನೆಯ ಸಂಬಂಧ ಕಂದಾಯ ಮುಜರಾಯಿ ಇಲಾಖೆಯ ಅಧಿಕಾರಿಗಳ ಸಭೆ ಕರೆಯಲಾಗಿತ್ತು. ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಇಂದು ನಡೆಯುವ ಮುಖ್ಯ ಮಂತ್ರಿಯವರ ಸಭೆಯಲ್ಲಿ ಕಾರ್ಯಕ್ರಮದ ಸಿದ್ಧತೆ ಬಗ್ಗೆ ಸಿಎಂಗೆ ಮಾಹಿತಿ ನೀಡಲಾಗುವುದು. ಗ್ರಾಮದಲ್ಲಿ ಇರುವ ಸಮಸ್ಯೆಗಳಿಗೆ ಸದ್ಯದಲ್ಲೇ ಜಿಲ್ಲಾಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಪರಿಹಾರ ನೀಡಲಿದ್ದಾರೆ. ಗ್ರಾಮಸ್ಥರ ಒತ್ತಾಸೆಯಂತೆ ಎಲ್ಲವೂ ಒಳ್ಳೆಯ ರೀತಿಯಲ್ಲಿ ನಡೆಯಲಿದೆ. ಸ್ಥಳೀಯರು ಸಹಕಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಎಂ. ಅಶ್ವಿನ್‌ಕುಮಾರ್, ಮರಿತಿಬ್ಬೇಗೌಡ, ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷ ಮೋಹನ್‌ಕುಮಾರ್, ಎಸಿ ಕಮಲಾಬಾಯಿ, ತಹಸೀಲ್ದಾರ್ ಗೀತಾ, ಮಂಗಳಾ ಮೂರ್ತಿ, ಜಗದೀಶ್ ಮೂರ್ತಿ ತಾಪಂ ಸದಸ್ಯ ಎಂ. ಚಂದ್ರಶೇಖರ್, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಕೆ.ಸಿ.ಲೋಕೇಶ್, ಎಂ.ಡಿ. ಬಸವರಾಜು, ಪಾರುಪತೇದಾರ ಸಾಗರ್, ಎಂ.ಪಿ. ನಾಗರಾಜು, ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ: ಸವಾರ ಸಾವು



ನಂಜನಗೂಡು, ಆ.10– ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಚಾಮರಾಜನಗರ ಮುಖ್ಯರಸ್ತೆಯ ಕೋಡಿ ನರಸೀಪುರ ಗೇಟ್ ಬಳಿ ನಡೆದಿದೆ.

ತಾಲೂಕಿನ ಬದನವಾಳು ಗ್ರಾಮದ ಸುರೇಶ್ (50) ಮೃತ ದುರ್ದೈವಿ. ಮೈಸೂರಿನ ನಂದಿನಿ ಹಾಲಿನ ಡೈರಿಯ ಉದ್ಯೋಗಿಯಾಗಿದ್ದ ಸುರೇಶ್ ಮಂಗಳವಾರ ತಾಲ್ಲೂಕಿನ ದೇವಿರಮ್ಮನಹಳ್ಳಿ ಗ್ರಾಮದಲ್ಲಿರುವ ತನ್ನ ಚಿಕ್ಕಮ್ಮನ ಮನೆಗೆ ತೆರಳಿದ್ದರು ಎನ್ನಲಾಗಿದೆ. ಬುಧವಾರ ಮುಂಜಾನೆ ತನ್ನ ಬೈಕ್ ನಲ್ಲಿ ಸ್ವಗ್ರಾಮ ಬದನವಾಳು ಗ್ರಾಮಕ್ಕೆ ವಾಪಸ್ಸಾಗುವ ವೇಳೆ, ಚಾಮರಾಜನಗರ ಮುಖ್ಯರಸ್ತೆಯ ತಾಲ್ಲೂಕಿನ ಕೋಡಿ ನರಸೀಪುರ ಗೇಟ್ ಬಳಿ ಕೆಟ್ಟು ನಿಂತಿದ್ದ ಜೆಸಿಬಿ ಸಾಗಿಸುವ ಲಾರಿಗೆ ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಕೌಲಂದೆ ಪೊಲೀಸ್ ಠಾಣೆಯ ಮಹೇಂದ್ರ ಭೇಟಿ ನೀಡಿ ಲಾರಿಯನ್ನು ವಶಕ್ಕೆ ಪಡೆದು ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ. ಈ ಸಂಬಂಧ ದೊಡ್ಡಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹೆಚ್.ಡಿ.ಕೋಟೆ ತಾಲೋಕಿನ ದೇವಲಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಡಿ.ಡಿ. ತಿಮ್ಮರಾಜು ಅವರನ್ನು ಹ್ಯಾಂಡ್ ಪೋಸ್ಟ್ ನಲ್ಲಿರುವ ಮೈಮುಲ್ ಉಪ ಕಚೇರಿಯಲ್ಲಿ ಮೈಮುಲ್ ನಿರ್ದೇಶಕ ಹಿರೇಗೌಡ ಸನ್ಮಾನಿಸಿದರು. ಮೈಮುಲ್ ವಿಸ್ತರಣಾಧಿಕಾರಿ ಆರಿಫ್ ಇಕ್ಬಾಲ್, ಜಗದಾಂಬ, ಅವಿನಾಶ್, ಬಸವರಾಜು, ದೇವಲಾಪುರ ಮುಖ್ಯ ಕಾರ್ಯನಿರ್ವಾಹಕರಾದ ಪ್ರದೀಪ್, ಜ್ಯೋತಿ ಇತರರಿದ್ದರು.

ನಂ.ಗೂಡು ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ಗೋಶಾಲೆ

ಸಹಿ ಸಂಗ್ರಹ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ



ನಂಜನಗೂಡು, ಆ.9– ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಭಕ್ತರು ಹರಕೆ ರೂಪದಲ್ಲಿ ನೀಡುವ ಹಸುಗಳ ರಕ್ಷಣೆಗಾಗಿ ಗೋಶಾಲೆ ತೆರೆಯುವಂತೆ ಆಗ್ರಹಿಸಿ ಯುವ ಬ್ರಿಗೇಡ್‌ನಿಂದ ಆಯೋಜಿಸಿದ್ದ ಸಹಿ ಸಂಗ್ರಹ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು.

'ಭಕ್ತರು ಹರಕೆ ರೂಪದಲ್ಲಿ ನೀಡುವ ಹಣ ಬೇಕು. ಹರಕೆಯ ಗೋವುಗಳು ಯಾಕೆ ಬೇಡ' ಎಂಬ ಅಡಿ ಬಹರದಲ್ಲಿ ದೇಗುಲ ಮುಂಭಾಗ ಯುವ ಬ್ರಿಗೇಡ್ ಕಾರ್ಯಕರ್ತರು ಅಳವಡಿಸಿದ್ದ ಬೃಹತ್ ಫ್ಲೆಕ್ಸ್‌ನಲ್ಲಿ ನಂಜನಗೂಡಿನ ಅನೇಕ ಗಣ್ಯರು, ಮಹನೀಯರು ಸೇರಿದಂತೆ ದೇಗುಲಕ್ಕೆ ಆಗಮಿಸಿದ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಸಹಿ ಹಾಕಿ ಬೆಂಬಲಿಸಿದರು.

ಇನ್ನು ಪ್ರತಿಯೊಬ್ಬರೂ ಮುಖ್ಯಮಂತ್ರಿಗಳಿಗೆ ಪ್ರತ್ಯೇಕ ಹಕ್ಕೋತ್ತಾಯ ಪತ್ರಕ್ಕೆ ಸಹಿ ಹಾಕುವ ಮೂಲಕ ಗೋ ಶಾಲೆ ತೆರೆಯುವಂತೆ ಆಗ್ರಹಿಸಿದರು. ಬೆಳಗ್ಗೆಯಿಂದ ಸಂಜೆವರೆಗೆ ನಡೆದ ಅಭಿಯಾನದಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಭಕ್ತರು ಪ್ರತ್ಯೇಕವಾಗಿ ಹಕ್ಕೋತ್ತಾಯ ಪತ್ರಕ್ಕೆ ಸಹಿ ಹಾಕಿ ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ.

ಯುವ ಬ್ರಿಗೇಡ್ ವಿಭಾಗೀಯ ಸಂಚಾಲಕ ಎಸ್. ಚಂದ್ರಶೇಖರ್ ಮಾತನಾಡಿ, ದಕ್ಷಿಣ ಕಾಶಿ ಪ್ರಸಿದ್ಧ ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ತಲೆತಲಾಂತರ ಗಳಿಂದಲೂ ಗೋವುಗಳನ್ನು ದೇಗುಲಕ್ಕೆ ಅರ್ಪಿಸುವ ವಾಡಿಕೆಯಿದೆ. ಅವುಗಳನ್ನು ರಕ್ಷಣೆ ಮಾಡಿ ಸಲಹುವ ನಿಟ್ಟಿನಲ್ಲಿ ಗೋಶಾಲೆ ಇಲ್ಲ. ಇದರಿಂದಾಗಿ ಹರಕೆಯ ಗೋವುಗಳು ದೇಗುಲ ಸುತ್ತಮುತ್ತಲಿನ ಪರಿಸರದಲ್ಲಿ ಅಡ್ಡಾಡಿಕೊಂಡಿವೆ. ಇವುಗಳನ್ನು ಖದೀಮರು ರಾತ್ರಿ ಹೊತ್ತು ಹೊಂಚು ಹಾಕಿ ಕಸಾಯಿಖಾನೆಗೆ ಸಾಗಿಸುವ ದಂಧೆಯಲ್ಲಿ ತೊಡಗಿದ್ದಾರೆ. ಇದರಿಂದ ಭಕ್ತರು ಘಾಸಿಗೆ ಒಳಗಾಗಿದ್ದು, ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗಿದೆ. ದೇಗುಲದ ಆಡಳಿತ ಮಂಡಳಿಗೆ ಭಕ್ತರು ಹರಕೆ ರೂಪದಲ್ಲಿ ನೀಡುವ ಹಣ ಬೇಕು. ಆದರೆ, ಗೋವುಗಳು ಬೇಡ ಎಂದರೆ ಹೇಗೆ ಎಂದು ಪ್ರಶ್ನಿಸಿದ್ದಾರೆ.

ಗೋವುಗಳ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ದೇಗುಲದಲ್ಲಿ ಗೋ ಪಾಲಕರ ಹುದ್ದೆಯಲ್ಲಿ ಸಿಬ್ಬಂದಿಯೂ ಇದ್ದಾರೆ. ಆದರೆ ಅವುಗಳ ರಕ್ಷಣೆ ಮಾಡುವ ಕಾರ್ಯ ಮಾತ್ರ ನಡೆಯುತ್ತಿಲ್ಲ. ದೇಗುಲಕ್ಕೆ ಮಾಸಿಕ ಕೋಟ್ಯಾಂತರ ರೂ. ಆದಾಯ ಬರುತ್ತಿದ್ದು, ಗೋಶಾಲೆ ತೆರೆದು ಗೋವುಗಳ ರಕ್ಷಣೆ ಮಾಡಲು ಆರ್ಥಿಕ ಹೊಡೆತವೇನೂ ಇಲ್ಲ. ಇನ್ನು ಗೋವುಗಳಿಗಾಗಿಯೇ ದೇಗುಲದ ಸುಪರ್ದಿಯಲ್ಲಿ ಜಾಗವಿದೆ. ಆ ಸ್ಥಳದಲ್ಲಿ ಗೋಶಾಲೆ ತೆರೆದು ಗೋವುಗಳ ರಕ್ಷಣೆ ಕಾರ್ಯ ಮಾಡಬೇಕು. ಆ ಮೂಲಕ ಖದೀಮರು ಗೋವು ಗಳನ್ನು ಕಸಾಯಿ ಖಾನೆಗೆ ಸಾಗಿಸುವುದಕ್ಕೆ ಅಂಕುಶ ಹಾಕುವ ಮೂಲಕ ಹಿಂದು ಭಕ್ತರ ಧಾರ್ಮಿಕ ಭಾವನೆಗಳನ್ನು ಗೌರವಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಗೋಶಾಲೆ ತೆರೆಯಲು ಸಹಿ ಸಂಗ್ರಹ ಅಭಿಯಾನಕ್ಕೆ ಭಕ್ತವಲಯದಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರತಿಯೊಬ್ಬರು ಪ್ರತ್ಯೇಕ ಪ್ರತಿಗಳಿಗೆ ಸಹಿ ಹಾಕಿ ಒತ್ತಾಯಿಸಿದ್ದಾರೆ. ಎಲ್ಲಾ ಪ್ರತಿಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅವರ ಮೂಲಕ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಅಭಿಯಾನದಲ್ಲಿ ಯುವ ಬ್ರಿಗೇಡ್ ತಾಲೂಕು ಸಂಚಾಲಕ ನಿತಿನ್, ಜಿಲ್ಲಾ ಸಹ ಸಂಚಾಲಕ ಎನ್.ಜೆ.ಸುನಿಲ್, ಪುರೋಹಿತ ಕೃಷ್ಣ ಜೋಯಿಸ್, ಕಾರ್ಯಕರ್ತರಾದ ಚರಣ್, ರವಿಶಾಸ್ತ್ರಿ, ಅರ್ಜುನ್ ಫಿನಿಕ್ಸ್, ಪ್ರಜ್ವಲ್ ಕಶ್ಯಪ್, ಮಹದೇವು, ಕಿಶೋರ್‌ಕುಮಾರ್, ಬಾಲಾಜಿ, ವಿಘ್ನೇಶ್, ಶ್ರೀಕಂಠ, ರವಿ ಸೇರಿದಂತೆ ಹಲವರಿದ್ದರು.

ಸಿಬಿಎಸ್‌ಸಿಯಲ್ಲಿ ಕೀರ್ತಿ ತಾಲೂಕಿಗೆ 3ನೇ ಸ್ಥಾನ



ಹುಣಸೂರು, ಆ.10– ನಗರದ ಶಾಸ್ತ್ರಿ ಪಬ್ಲಿಕ್ ಶಾಲೆ 10ನೇ ತರಗತಿಯ ಸಿಬಿಎಸ್‌ಸಿ ವಿದ್ಯಾರ್ಥಿ ಕೀರ್ತಿ. ಜಿ.ಎಸ್. ಶೇ.90 ರಷ್ಟು ಅಂಕ ಪಡೆಯುವ ಮೂಲಕ 3ನೇ ಸ್ಥಾನ ಪಡೆದು ಶಾಲೆಗೆ ಮತ್ತು ತಾಲೂಕಿಗೆ ಕೀರ್ತಿ ತಂದಿದ್ದಾಳೆ. ಈಕೆ ಯೋಗ ಎಂಟರ್‌ಪ್ರೈಸಸ್ ಹಾರ್ಡ್‌ವೇರ್ ಮಾಲೀಕ ಸ್ವಾಮಿಗೌಡ ಮತ್ತು ಗಿರಿಜಾ ದಂಪತಿ ಪುತ್ರಿ.

ಚಾಲಕನ ನಿಯಂತ್ರಣ ತಪ್ಪಿ ಜಮೀನಿಗೆ ನುಗ್ಗಿದ ಬಸ್

ಸರಗೂರು, ಆ.10– ಚಾಲಕನ ನಿಯಂತ್ರಣ ತಪ್ಪಿದ ಸಾರಿಗೆ ಬಸ್ ಜಮೀನಿಗೆ ನುಗ್ಗಿರುವ ಘಟನೆ ತಾಲೂಕಿನ ಸಾಗರ ಬಳಿ ನಡೆದಿದ್ದು, ಅದೃಷ್ಟವಶಾತ್ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ತಾಲೂಕಿನ ಹೆಗ್ಗನೂರು, ಗದ್ದೆಹಳ್ಳ, ಕಂದೇಗಾಲ ಮಾರ್ಗವಾಗಿ ಸರಗೂರಿಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ (ಕೆಎ.09, ಎಫ್.6041) ಬಸ್ ಸಾಗರೆ ಬಳಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಜಮೀನಿಗೆ ನುಗ್ಗಿದೆ. ಪರಿಣಾಮ ಬಸ್ ಮುಂಭಾಗದ ಗಾಜು ಒಡೆದು ಹೋಗಿದ್ದು, ಬಸ್‌ನಲ್ಲಿದ್ದ ವಿದ್ಯಾರ್ಥಿಗಳು ಸೇರಿದಂತೆ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. 3 ಬಸ್‌ನಲ್ಲಿ ಬರುವ ಪ್ರಯಾಣಿಕರು ಒಂದೇ ಬಸ್‌ನಲ್ಲಿ ಸಂಚರಿಸುತ್ತಿದ್ದು, ಹೆಚ್ಚುವರಿ ಬಸ್ ಹಾಕಿಕೊಡುವಂತೆ ಹಲವು ಬಾರಿ ಡಿಪೋ ಮ್ಯಾನೇಜರ್‌ಗೆ ಮನವಿ ಮಾಡಿದರೂ ಯಾವುದೇ ಮನವಿ ಮಾಡಿ ಪ್ರತಿಭಟನೆ ನಡೆಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ಇದೀಗ ಜಮೀನಿಗೆ ಬಸ್ ನುಗ್ಗಿದ್ದು, ಯಾರಿಗಾದರೂ ಅಪಾಯ ಸಂಭವಿಸಿದ್ದರೇ ಏನೂ ಗತಿ, ಕೂಡಲೇ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಚನ್ನಿಪುರ ಮಲ್ಲೇಶ್, ನಾಗರಾಜು, ಕಂದೇಗಾಲ ಕಾಂತರಾಜು, ಕೊತ್ತೇಗಾಲ ಕುಮಾರ್, ಹಂಚೀಪುರ ಬಸವಣ್ಣ, ಸಾರ್ವಜನಿಕರು ಒತ್ತಾಯಿಸಿದರು.

ಸಾರ್ವಜನಿಕರಿಂದ ದೂರು ಬಾರದಂತೆ ಕಾರ್ಯ ನಿರ್ವಹಿಸಿ

ಸದಸ್ಯರಿಗೆ ಪುರಸಭೆಯ ಸ್ಥಾಯಿ ಸಮಿತಿ ನೂತನ ಅಧ್ಯಕ್ಷ ಅಹಮದ್ ಸಯೀದ್ ಕರೆ



ತಿ.ನರಸೀಪುರ, ಆ.10– ಅಧಿಕಾರಿಗಳು ಸಾರ್ವಜನಿಕರಿಂದ ಪುರಸಭೆ ಹಾಗೂ ಇನ್ನಿತರೆ ಸಮಸ್ಯೆಗಳ ಬಗ್ಗೆ ದೂರು ಬಾರದಂತೆ ನಿಗಾವಹಿಸಿ ಕರ್ತವ್ಯ ನಿರ್ವಹಿಸುವಂತೆ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸಯೀದ್ ಸೂಚಿಸಿದರು.

ಪುರಸಭೆಗೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಆಯ್ಕೆಗೊಂಡ ನಂತರ ಪುರಸಭೆ ಸಭಾಂಗಣದಲ್ಲಿ ಕರೆಯಲಾಗಿದ್ದ ಚೊಚ್ಚಲ ಸಭೆಯಲ್ಲಿ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಪುರಸಭಾ ಸದಸ್ಯರಾಗಿ ಆಯ್ಕೆಯಾಗಿ ಎರಡು ವರ್ಷಗಳೇ ಕಳೆದಿದ್ದರೂ ಸಾರ್ವಜನಿಕರಿಂದ ಪ್ರತಿ ನಿತ್ಯ ದೂರುಗಳು ಬರುತ್ತಲೇ ಇವೆ. ಪಟ್ಟಣದಲ್ಲಿ ಇರುವ ಸಮಸ್ಯೆಗಳ ಬಗ್ಗೆ ಸದಸ್ಯರು ಗಮನಹರಿಸುವ ಜೊತೆಗೆ ಕಚೇರಿಯಲ್ಲಿ ಆಗಬೇಕಾದ ಕೆಲಸಗಳನ್ನು ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಬಗೆ ಹರಿಸಿಕೊಡಬೇಕಿದೆ ಎಂದರ.

ಮೊದಲಿಗೆ ಪರಿಸರ ಅಭಿಯಂತರರಾದ ಲೋಕೇಶ್ವರಿ ಮಾತನಾಡಿ, ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಪೂರ್ಣ ಗೊಂಡಿಲ್ಲ. ಇನ್ನೂ ಸಾಕಷ್ಟು ಕಾಮಗಾರಿಯಾಗಬೇಕಿದೆ. ಆದರೆ ಪುರಸಭೆಯಲ್ಲಿ ಯಾವುದೇ ಅನುದಾನವಿಲ್ಲ ಹಾಗಾಗಿ ಅನುದಾನ ತರುವ ಅವಶ್ಯಕತೆ ಹೆಚ್ಚಿದೆ ಎಂದರು. ಇದಕ್ಕೆ ದನಿ ಗೂಡಿಸಿದ ಸದಸ್ಯ ಎಸ್.ಕೆ.ಕಿರಣ್ ಅಪೂರ್ಣ ಗೊಂಡಿರುವ ಯುಜಿಡಿ ಕಾಮಗಾರಿ ಪೂರ್ಣ ಗೊಳಿಸುವ ಕಡೆಗೆ ಹೆಚ್ಚಿನ ಗಮನ ನೀಡಿ, ಹಾಗೂ ಪಟ್ಟಣದ ಬಹುತೇಕ ಎಲ್ಲ ರಸ್ತೆಗಳು ಓಡಾಡಲು ಅರ್ಹವಾಗಿಲ್ಲ, ಅಷ್ಟು ಮಟ್ಟಿಗೆ ಹಾಳಾಗಿವೆ ಇದರ ದುರಸ್ಥಿ ಕಾಮಗಾರಿಗೆ ಆದ್ಯತೆ ನೀಡಿ ಎಂದರು.

ಸದಸ್ಯ ಎಲ್.ಮಂಜುನಾಥ್ ಮಾತನಾಡಿ, ಪುರಸಭೆಯಲ್ಲಿ ಪೌರ ಕಾರ್ಮಿಕರಾಗಿ ನೇಮಕಗೊಂಡಿರುವ ಕೆಲವರು ಕಚೇರಿ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಅನೇಕ ಬಾರಿ ಸಭೆಯಲ್ಲಿ ಅಧ್ಯಕ್ಷರ ಗಮನ ಸೆಳೆದಿದ್ದೇನೆ. ಪಟ್ಟಣದಲ್ಲಿ ಪೌರ ಕಾರ್ಮಿಕರ ಕೊರತೆ ಇದೆ. ಹಾಗಾಗಿ ಪೌರ ಕಾರ್ಮಿಕರ ಹುದ್ದೆಗೆ ನೇಮಕವಾಗಿ ಬೇರೆ ಹುದ್ದೆ ನಿರ್ವಹಿಸುತ್ತಿರುವವರನ್ನು ವಾಪಸ್ ಮೂಲ ಹುದ್ದೆಗೆ ಕರೆಸುವಂತೆ ಒತ್ತಾಯ ಮಾಡಿದರು.

ಪಟ್ಟಣದಲ್ಲಿ 44 ಮಂದಿ ಪೌರ ಕಾರ್ಮಿಕರಿದ್ದಾರೆ. ವಾರ್ಡ್‌ಗೆ ಒಬ್ಬರನ್ನೂ ನೇಮಿಸಿದರೂ ಇನ್ನೂ ಹೆಚ್ಚುವರಿ ಕಾರ್ಮಿಕರು ಉಳಿಯುತ್ತಾರೆ ಎಂದು ಸದಸ್ಯ ತುಂಬಲ ಪ್ರಕಾಶ್ ಗಮನ ಸೆಳೆದ ಪ್ರಶ್ನೆಗೆ ಪ್ರತಿಯಾಗಿ ಉತ್ತರಿಸಿದ ಲೋಕೇಶ್ವರಿ ದಿನದಿಂದ ದಿನಕ್ಕೆ ಪಟ್ಟಣದ ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಜನಸಂಖ್ಯೆಗನುಗುಣವಾಗಿ ಪೌರ ಕಾರ್ಮಿಕರು ಸಾಲುತ್ತಿಲ್ಲ ಎಂದು ತಿಳಿಸಿದರು.

ಪಟ್ಟಣದಲ್ಲಿ ಬೀದಿ ದೀಪಗಳ ನಿರ್ವಹಣೆ, ಪುರಸಭಾ ವ್ಯಾಪ್ತಿಯ ವಾರ್ಡ್‌ಗಳ ಸ್ವಚ್ಛತೆ ಹಾಗೂ ಚರಂಡಿಗಳ ಸ್ವಚ್ಛತೆ ಹಾಗೂ ಹದಗೆಟ್ಟಿರುವ ರಸ್ತೆಗಳ ದುರಸ್ಥಿಯ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಸಮುದಾಯ ಸಂಘಟಕ ಮಹದೇವಯ್ಯ ಮಾತನಾಡಿ, ಈ ಬಾರಿ 75ನೇ ಸ್ವಾತಂತ್ರ್ಯೋತ್ಸವವನ್ನು ಭಿನ್ನರೀತಿಯಲ್ಲಿ ಆಚರಿಸುವ ಸಲುವಾಗಿ ಸರ್ಕಾರ ಮನೆ ಮನೆ ಮೇಲೆ ರಾಷ್ಟ್ರಧ್ವಜ ಹಾರಿಸಲು ಸೂಚನೆ ನೀಡಿದೆ. ಪುರಸಭೆಗೆ 5500 ಧ್ವಜಗಳು ಬಂದಿವೆ. ಪುರಸಭೆಯ ಸದಸ್ಯರು ತಮ್ಮ ವಾರ್ಡ್‌ನ ಪ್ರತಿ ಮನೆ ಮೇಲೂ ಧ್ವಜ ಆಚರಿಸಲು ಕ್ರಮಕ್ಕೆ ಮುಂದಾಗಬೇಕು ಎಂದು ಮನವಿ ಮಾಡಿದರಲ್ಲದೇ ಆ.13ಕ್ಕೆ ಧ್ವಜ ಹಾರಿಸಿ 15 ಕ್ಕೆ ಇಳಿಸಬೇಕೆಂದು ತಿಳಿಸಿದರು.

ಸಭೆಯಲ್ಲಿ ಮುಖ್ಯಾಧಿಕಾರಿ ಬಸವರಾಜು, ಸದಸ್ಯೆ ಮಹದೇವಮ್ಮ, ಬೇಬಿ ಹೇಮಂತ್, ವಸಂತಾ ಶ್ರೀಕಂಠ, ಇಂಜಿನಿಯರ್ ಸಿದ್ದಪ್ಪ, ವಿನಯ್ ರಾಘವೇಂದ್ರ ಆರ್.ಐ.ಪುಟ್ಟಸ್ವಾಮಿ, ತ್ರಿವೇಣಿ, ರಾಜೇಂದ್ರ ಮತ್ತಿತರರಿದ್ದರು.

ಮಾದಪ್ಪ ನಿಧನ



ಹುಣಸೂರು, ಆ.10– ಹುಣಸೂರಿನ ದಾವಣಿ ಬೀದಿ ನಿವಾಸಿ ರವಿ ಅವರ ತಂದೆ ಮಾದಪ್ಪ (83) ಬುಧವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಬಂಧು–ಮಿತ್ರರನ್ನು ಅಗಲಿದ್ದಾರೆ. ಬುಧವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ: ಕೆ.ಮರೀಗೌಡ



ಮೈಸೂರು ಆ.10– ಕಾಂಗ್ರೆಸ್ ಪಕ್ಷ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು, ಬ್ರಿಟಿಷರು ಲೂಟಿ ಮಾಡಿ ಹೋಗಿದ್ದ ದೇಶವನ್ನು ಅಭಿವೃದ್ಧಿಪಡಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಶಕ್ತಿಯನ್ನು ಹೊಂದುವಂತೆ ಮಾಡಿದ್ದು ಕಾಂಗ್ರೆಸ್ ಪಕ್ಷ ಎಂದು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.

ಮೈಸೂರಿನ ಜನತಾನಗರದಲ್ಲಿ ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಸ್ವಾತಂತ್ರ್ಯ ಬಂದು 75 ವರ್ಷಗಳಾಗಿವೆ. ಸ್ವಾತಂತ್ರ್ಯ ನಂತರದಲ್ಲಿ ಈ ದೇಶದಲ್ಲಿ ಕುಡಿಯುವ ನೀರು, ರಸ್ತೆ, ವಿದ್ಯುತ್, ಅಣೆಕಟ್ಟುಗಳು, ವಿಮಾನ ನಿಲ್ದಾಣಗಳು, ಆಹಾರ ಏನು ಇರಲಿಲ್ಲ. ಕಾಂಗ್ರೆಸ್ ಪಕ್ಷ ಕಳೆದ 65 ವರ್ಷಗಳಲ್ಲಿ ಎಲ್ಲವನ್ನು ಮಾಡಿ ಅಭಿವೃದ್ಧಿ ಪಡಿಸಿದೆ. ಕಾಂಗ್ರೆಸ್ ಆಳ್ವಿಕೆಯಲ್ಲಿ ಮಾಡಿದ್ದ ಸಾಲ 53 ಲಕ್ಷ ಕೋಟಿ. ಕಳೆದ 8 ವರ್ಷಗಳಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ 100 ಲಕ್ಷ ಕೋಟಿ ಸಾಲ ಮಾಡಿ ಇಡೀ ದೇಶವನ್ನು ಸಾಲದ ಕೂಪದಲ್ಲಿ ಕೂರಿಸಿದೆ. ಯಾವುದೇ ಅಭಿವೃದ್ಧಿ ಮಾಡದೆ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆಗಳನ್ನು ಹೆಚ್ಚಿಸಿ ಜನ ಸಾಮಾನ್ಯರ ಬದುಕು ದುಸ್ತರವಾಗುವಂತೆ ಮಾಡಿದ್ದಾರೆ. ಈ ದೇಶದ ಸಂವಿಧಾನದಡಿಯಲ್ಲಿ ಎಲ್ಲರೂ ನೆಮ್ಮದಿಯಿಂದ ಬದುಕಲು ಬಿಜೆಪಿ ಪಕ್ಷ ಬಿಡುತ್ತಿಲ್ಲ. ರಾಜ್ಯ ಬಿಜೆಪಿ ಸರ್ಕಾರ ಜನರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿದೆ. ಮೊಸರು, ಮಜ್ಜಿಗೆ, ಅಕ್ಕಿಯ ಮೇಲೂ ಜಿಎಸ್‌ಟಿ ತೆರಿಗೆ ಹಾಕಿದೆ. ಇಂತಹ ಪಕ್ಷವನ್ನು ಕಿತ್ತೊಗೆಯಲು ಜನರಲ್ಲಿ ಜಾಗೃತಿ ಮೂಡಿಸಬೇಕು. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ 5 ವರ್ಷದ ಆಳ್ವಿಕೆ ಸುವರ್ಣಯುಗವಾಗಿತ್ತು. ಬಡವರು ನೆಮ್ಮದಿಯಿಂದ ಬದುಕುತ್ತಿದ್ದರು ಮತ್ತೆ 2023ಕ್ಕೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು ಎಲ್ಲರೂ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್‌ಗಳಾದ ಟಿ.ಬಿ. ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಕೆ.ಆರ್. ಹೇಮಾವತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ. ಗುರುಸ್ವಾಮಿ, ಜೆ. ಸತೀಶ್‌ಕುಮಾರ್ ಮುಖಂಡರಾದ ಕೃಷ್ಣಕುಮಾರ್‌ಸಾಗರ್, ಬಾಸ್ಕರ್‌ಗೌಡ, ಗುರುಪಾದಸ್ವಾಮಿ, ಜೇಸುದಾಸ್, ಹರೀಶ್‌ಮೊಗಣ್ಣ, ಉಮಾಶಂಕರ್, ಸಿದ್ದರಾಜು, ಸಿ.ಎಸ್. ರಘು, ಶೆಟ್ಟಳ್ಳಿ ಶಿವರಾಜ್, ರವಿ ಹಾಜರಿದ್ದರು.

ಆ.15ರವರೆಗೆ ಟಿಕೆಟ್ ಬುಕ್ ಆದವರಿಗೆ ಮಾತ್ರ ತಿರುಪತಿ ದರ್ಶನ

ಅಮರಾವತಿ, ಆ.10– ನಾಳೆಯಿಂದ ಆಗಸ್ಟ್ 15ರವರೆಗೆ ಸಾಲು ಸಾಲು ರಜೆ ಇರುವುದರಿಂದ ತಿರುಪತಿಗೆ ಹೋಗಲು ಟಿಕೆಟ್ ಬುಕ್ ಮಾಡಿದವರಿಗೆ ಮಾತ್ರ ಅವಕಾಶವಿದೆ ಎಂದು ಟಿಟಿಡಿ ತಿಳಿಸಿದೆ. ಶ್ರಾವಣಮಾಸ ಹಾಗೂ ನಾಳೆಯಿಂದ ಆಗಸ್ಟ್ 15ರವರೆಗೆ ಹಲವು ರಾಜ್ಯಗಳಲ್ಲಿ ಸತತ ರಜೆಗಳು ಇವೆ. ಹೀಗಾಗಿ ತಿರುಪತಿ ತಿರುಮಲಕ್ಕೆ ಅಧಿಕ ಸಂಖ್ಯೆ ಭಕ್ತರು ಬರುವ ನಿರೀಕ್ಷೆ ಇದೆ. ಹೀಗಾಗಿ ಭಕ್ತರು ಯಾವುದೇ ಸಿದ್ಧತೆ, ಯೋಜನೆಗಳು ಇಲ್ಲದೇ ಈ 5 ದಿನ ತಿರುಪತಿಗೆ ಬರಬೇಡಿ ಎಂದು ಟಿಟಿಡಿ ಮನವಿ ಮಾಡಿದೆ.

ಮೊದಲೇ ದರ್ಶನದ ಟಿಕೆಟ್ ಬುಕ್ ಆಗಿದ್ದರೆ, ಇರಲು ವಸತಿ ಸೌಲಭ್ಯವನ್ನು ಮಾಡಿಕೊಂಡಿದ್ದರೆ ಮಾತ್ರ ಬನ್ನಿ. ಇಲ್ಲ ಅಂದರೆ ಬಂದು ಕಷ್ಟ ಪಡಬೇಡಿ. ಚಿಕ್ಕಮಕ್ಕಳು, ವೃದ್ಧರು, ವಿಶೇಷ ಚೇತನರು ತಿರುಮಲ ಯಾತ್ರೆಯನ್ನು ಮುಂದೂಡಿ ಎಂದು ಸೂಚಿಸಿದ್ದಾರೆ. ರಷ್ ಜಾಸ್ತಿ ಇದ್ದಲ್ಲಿ ಭಕ್ತರಿಗೆ, ನಿಗದಿತ ಸಮಯದಲ್ಲಿ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಸರತಿ ಸಾಲಿನಲ್ಲಿ, ಕಂಪಾರ್ಟ್‌ಮೆಂಟ್‌ಗಳಲ್ಲಿ ತುಂಬಾ ಹೊತ್ತು ಕಾಯಬೇಕಾಗುತ್ತದೆ ಎಂದು ಟಿಟಿಡಿ ಎಚ್ಚರಿಸಿದೆ.

ಶ್ರದ್ಧಾಂಜಲಿ

ಜನನ: 04.04.1946 ಮರಣ: 10.08.2022

ಶ್ರೀ ಬಿ.ಹೊಂಬಯ್ಯನವರು

ಜಿಲ್ಲಾ ಖಜಾನಾಧಿಕಾರಿಗಳು (ನಿವೃತ್ತ)
ಸಿದ್ಧಾರ್ಥನಗರ ಮೈಸೂರು.

ದುಃಖತಪ್ತರು:
ಶ್ರೀಮತಿ ಭಾರತಿ ಮತ್ತು ಕುಟುಂಬವರ್ಗ

ಪರಮಪೂಜ್ಯ ತಂದೆಯವರಾದ
ಶ್ರೀ ಬಿ.ಆರ್.ಗೋಪಾಲಪ್ಪನವರ
19ನೇ ವರ್ಷದ ಪುಣ್ಯಸ್ಮರಣೆ

ನಿಮ್ಮ ಆಶೀರ್ವಾದದಿಂದ ನೀವು ತೋರಿಸಿರುವ ಮಾರ್ಗದಲ್ಲಿ ಮುನ್ನಡೆಯುತ್ತಿರುತ್ತೇವೆ.
ದುಃಖತಪ್ತರು: ಮಗ : ಬಿ.ಜಿ.ಪುರುಷೋತ್ತಮ (ಬಾಬು), ಸೊಸೆ: ರಾಧಿಕ, ಮೊಮ್ಮಗ : ಎಂ.ಪಿ.ಪ್ರಜ್ವಲ್, ಮೊಮ್ಮಗಳು: ಎಂ.ಪಿ.ಪ್ರಿಯಾಂಕ

ಎರಡನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಸಹೋದರರು, ಮಗ, ಹೆಣ್ಣುಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು

ಡಾ|| ಎಸ್.ಸುಬ್ರಮಣ್ಯಂ
ಜಿಲ್ಲೆಗಳ ವಲಯಗಳ ಆರೋಗ್ಯಾಧಿಕಾರಿ ಹಾಗೂ ಜೆ.ಎಸ್.ಎಸ್ ಆಸ್ಪತ್ರೆಯ ಚರ್ಮರೋಗ ವಿಭಾಗದ ಹಿಂದಿನ ಮುಖ್ಯಸ್ಥರು

6ನೇ ವರ್ಷದ ಸವಿನೆನಪು

ಚಂದ್ರು

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು : ಕುಟುಂಬವರ್ಗದವರು, ದಾಸನಕೊಪ್ಪಲು ಮೈಸೂರು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಷೆಡ್ಯೂಲ್ ಸ್ವತ್ತಿನ ಹಾಲಿ ಮಾಲೀಕರಾದ, ಮೈಸೂರು ಸಿಟಿ–570026, ಬೋಗಾದಿ, ಬ್ಯಾಂಕ್ ಎಂಪ್ಲಾಯೀಸ್ ಕಾಲೋನಿ, 11ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, "ಅನುಗ್ರಹ", ಮನೆ ನಂಬರ್ 239 ರಲ್ಲಿ ವಾಸವಾಗಿರುವ ಶ್ರೀ. ಮಲ್ಲಪ್ಪ ಎಸ್. ಜಡೇದ ರವರ ಮಗನಾದ ಶ್ರೀ ಮಂಜುನಾಥ ಎಂ. ಜಡೇದ ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಚೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ. ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು. ಕಸಬಾ ಹೋಬಳಿ, ಬೋಗಾದಿ ಗ್ರಾಮದ ಸರ್ವೆ ನಂಬರ್268/4 ಹಾಗೂ 268/5, ಒಟ್ಟು 04 ಎಕರೆ ಜಮೀನಿನಲ್ಲಿ ನಿರ್ಮಿಸಿರುವ ಬಡಾವಣೆಯ ಲ್ಲಿರುವ ನಿವೇಶನ ಸಂಖ್ಯೆ 3, ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ – 12 ಮೀಟರ್, ದಕ್ಷಿಣೋತ್ತರ – 18 ಮೀಟರ್‌ಗಳುಳ್ಳ ಪೂರ್ತ ನಿವೇಶನ ಹಾಗೂ ಇದರ ಚಕ್ಕುಬಂದಿ – ಪೂರ್ವಕ್ಕೆ: 2ನೇ ನಂಬರ್ ನಿವೇಶನ, ಪಶ್ಚಿಮಕ್ಕೆ: 4ನೇ ನಂಬರ್ ನಿವೇಶನ, ಉತ್ತರಕ್ಕೆ: ಖಾಸಗಿ ಸ್ವತ್ತು ಹಾಗೂ ದಕ್ಷಿಣಕ್ಕೆ: ರಸ್ತೆ.

ದಿನಾಂಕ: 10–08–2022
ಸ್ಥಳ: ಮೈಸೂರು

Sd/- D.G.Nagendra Prasad
ILP, #663, 1st Floor,
17th Main, Saraswathipuram,
Mysore -570009,
Tel : 0821-2543770

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.

ಚಾಮರಾಜನಗರ

ಅಸಲು ದಾವಾ ಸಂಖ್ಯೆ : 138 / 2016

ವಾದಿಗಳು: 1) ಆಲ್ವಿನ್ ಕ್ರಿಸ್ಟೋಫರ್ ಬಿನ್ ಗುರುಶಾಂತ, ಸುಮಾರು 28 ವರ್ಷ, ಜನತಾ ಕಾಲೋನಿ, ಹೀರಿಸಾವೆ ಅಂಚೆ, ಚನ್ನರಾಯಪಟ್ಟಣ ತಾಲ್ಲೋಕು, ಹಾಸನ ಜಿಲ್ಲೆ.
2) ರೂತ್ ಲಿಡಿಯಾ ಬಿನ್ ಗುರುಶಾಂತ ಕೋಂ ಆನಂದರಾಜ್, ಸುಮಾರು 30 ವರ್ಷ, ರಾಜಪ್ಪ ಲೇಔಟ್, 1ನೇ ಕ್ರಾಸ್, ಜನ್ನಾಪುರ ಅಂಚೆ, ಜಯಶ್ರೀ ವೃತ್ತ, ಭದ್ರಾವತಿ, ಶಿವಮೊಗ್ಗ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು

ಶ್ರೀ ಭಾಸ್ಕರ್ ಮನೋರಾಜ್ ಮತ್ತು ಇತರರು 3. ವಿಜಯ ಕ್ರೀಸ್ಟೋಫರ್ ಮೃತ, ಇವರ ವಾರಸುದಾರರು, 3(ಎ) ಕವಿತಾ ಕೋಂ ಲೇಟ್ ವಿಜಯಕ್ರೀಸ್ಟೋಫರ್ ಬಿನ್ ಸಿದ್ದಯ್ಯ, ವಯಸ್ಸು 32 ವರ್ಷ. 3(ಬಿ) ಸಾಮುಲ್ ವಿ. ಕ್ರೀಸ್ಟೋಫರ್ (ಚಿಂಟು), ಬಿನ್ ಲೇಟ್ ವಿಜಯಕ್ರೀಸ್ಟೋಫರ್, ಮೈನರ್.
ಈ ಮೇಲೆ ಹೇಳಿದ 3(ಬಿ)ರವರು ಮೈನರ್ ಆಗಿದ್ದು, ಸದರಿಯವರನ್ನು ಪ್ರತಿನಿಧಿಸುವವರು ತಾಯಿ ಕವಿತಾ ಆಗಿರುತ್ತಾರೆ. ಇವರ ವಾಸ: ಕೋಡಿಉಗನೆ ಗ್ರಾಮ, ವೆಂಕಟಯ್ಯನ ಛತ್ರ ಅಂಚೆ, ಹರದನಹಳ್ಳಿ ಹೋಬಳಿ, ಚಾಮರಾಜನಗರ ತಾಲ್ಲೋಕು ಮತ್ತು ಜಿಲ್ಲೆ. ಪಿನ್ ಕೋಡ್ ನಂ. 571127.
6) ಆಯಿಷಾ ಮುಬಿನ್ ತಾಜ್ ಕೋಂ ಮಹಮದ್ ಸೈಯದ್ ಅಹಮದ್, ಮನೆ ನಂಬರ್ 804, ಎಂ.ಐ.ಜಿ. 1, 4ನೇ ಕ್ರಾಸ್, ಕಲ್ಯಾಣಗಿರಿ, ಮೈಸೂರು ಸಿಟಿ.

ಸಾರ್ವಜನಿಕ ಪ್ರಕಟಣೆ

ವಾದಿಗಳು ಘನ ನ್ಯಾಯಾಲಯದಲ್ಲಿ ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಈ ಮೇಲ್ಕಂಡ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 29–8–22 ರಂದು ಇಯರಿಂಗ್ ಇರುತ್ತದೆ. ಸದರಿ ವಿಷಯಕ್ಕೆ ಸಂಬಂಧಪಟ್ಟಲ್ಲಿ ಅಥವಾ ಹಿತಾಸಕ್ತಿ ಇರುವವರು ಮಧ್ಯಾಹ್ನ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ಖುದ್ದು ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸುವುದು ಇಲ್ಲದಿದ್ದರೆ ತಮ್ಮ ತಕರಾರು ಯಾವುದು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು, ತಿಳಿಯುವುದು.

ಅನುಸೂಚಿ ಸ್ವತ್ತು

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಕಿರಗಸೂರು ಗ್ರಾಮದ ಸ.ನಂ. 111/2 ರಲ್ಲಿ 1 ಎಕರೆ 39 ಗುಂಟೆ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಯೇಸುರತ್ನ ಬಿನ್ ಪಾಂಡುರಾಜ್ ರವರ ಜಮೀನು ; ಪಶ್ಚಿಮಕ್ಕೆ: ಯೇಸುದಾಸ್ ಬಿನ್ ದಿಲೀಪ್ ರವರ ಜಮೀನು ; ಉತ್ತರಕ್ಕೆ: ಸರ್ಕಾರಿ ಗೋಮಾಳ ; ದಕ್ಷಿಣಕ್ಕೆ: ದೊಳ್ಳೇಗೌಡ ಬಿನ್ ದೊರೆಸ್ವಾಮಿರವರ ಜಮೀನು.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಾಮರಾಜನಗರ

ವಾದಿಗಳ ಪರ ವಕೀಲರು
ಸಹಿ/– ರಂಗಸ್ವಾಮಿ, ಬಿ.ಎ.ಎಲ್.ಎಲ್.ಬಿ
ವಕೀಲರು
#23/293, 4ನೇ ಕ್ರಾಸ್, ಶಂಕರಪುರ ಬಡಾವಣೆ, ಚಾಮರಾಜನಗರ ಟೌನ್.

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಸಿಟಿ, ಡಿ. ದೇವರಾಜ ಅರಸ್ ರಸ್ತೆ, ಕಛೇರಿ ಸಂಖ್ಯೆ 40/A ರಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಪಾಲುದಾರಿಕೆ ಸಂಸ್ಥೆಯಡಿ Registration No. 204/2001-2002 ಪ್ರಕಾರ ನೋಂದಾಯಿಸಲ್ಪಟ್ಟಿರುವ ಮೆಸರ್ಸ್ ಇಸ್ಮಾಯಿಲ್ ಚೆಷ್ಮಾವಾಲ ಮತ್ತು ಕಂ., ಇದರ ಪರವಾಗಿ ಪಾಲುದಾರರಾದ ಮೈಸೂರು – 570 007, ಸುಭಾಷ್ ನಗರ, 4ನೇ ಮುಖ್ಯ ರಸ್ತೆ, ಮನೆ ನಂ. 91ರಲ್ಲಿ ವಾಸವಾಗಿರುವ ಲೇಟ್ ಗುಲ್ ಮೊಹಮ್ಮದ್ ಸೇಠ್ ರವರ ಮಕ್ಕಳಾದ (1) ಶ್ರೀ ಮೊಹಮ್ಮದ್ ಮುಬೀನ್ ಸೇಠ್, (2) ಶ್ರೀ ಮೊಹಮ್ಮದ್ ಮೊಹ್‌ಸಿನ್ ಸೇಠ್, (3) ಶ್ರೀ ಮೊಹಮ್ಮದ್ ಹಸಾನ್ ಸೇಠ್, (4) ಶ್ರೀ ರಿಜ್ವಾನ್ ಸೇಠ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಹತ್ತು (10) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತು

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಡಿ. ದೇವರಾಜ ಅರಸ್ ರಸ್ತೆಯಲ್ಲಿರುವ ವಾಣಿಜ್ಯ ಕಟ್ಟಡದ ಸಂಖ್ಯೆ 40/A, ಇದರ ವಿಸ್ತೀರ್ಣ ಪೂರ್ವ ಪಶ್ಚಿಮ 15.00 ಅಡಿ, ದಕ್ಷಿಣೋತ್ತರ 30.00 ಅಡಿಗಳ ನೆಲ ಮಹಡಿ ಮತ್ತು ಮೊದಲನೇ ಮಹಡಿಯ ವಾಣಿಜ್ಯ ಕಟ್ಟಡ ಹಾಗೂ ಈ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಮಳಿಗೆ ಸಂಖ್ಯೆ 40 ; ಪಶ್ಚಿಮಕ್ಕೆ: ಮಳಿಗೆ ಸಂಖ್ಯೆ 41 ; ಉತ್ತರಕ್ಕೆ: ಖಾಸಗೀ ಸ್ವತ್ತು ; ದಕ್ಷಿಣಕ್ಕೆ: ಡಿ. ದೇವರಾಜ ಅರಸ್ ರಸ್ತೆ.

ಸಹಿ/– ಕೆ.ಎನ್. ಮಹಾದೇವಸ್ವಾಮಿ,
ಬಿ.ಎಸ್ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ರೂಂ ನಂ. ಎಫ್–1 & 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕೃಪ ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು–570 004. Mob No.: 94482-22522, Office No. :0821-4287998.

ದಿನಾಂಕ: 10–08–2022

ಕರ್ನಾಟಕ ಸರ್ಕಾರ
ಹಗಿನವಾಳು ಗ್ರಾಮ ಪಂಚಾಯ್ತಿ ಕಾರ್ಯಾಲಯ

ಹಗಿನವಾಳು, ಹುಲ್ಲಹಳ್ಳಿ, ಹೋ, ನಂಜನಗೂಡು ತಾ|| ಮೈಸೂರು ಜಿಲ್ಲೆ.
ಪತ್ರ ಸಂಖ್ಯೆ : ಹ.ಗ್ರಾ.ಪಂಕಾ:/2022–23 ದಿನಾಂಕ:10.08.2022

ಹರಾಜು ಪ್ರಕ್ರಿಯೆ

ಹಗಿನವಾಳು ಗ್ರಾಮದ ಪಂಚಾಯಿತಿ ವ್ಯಾಪ್ತಿಯ 3 ಗ್ರಾಮಗಳಾದ ಹಗಿನವಾಳು, ಅಚಿಬಳೆ, ವಳಗೆರೆ ಗ್ರಾಮಗಳ ಕೆರೆಗಳನ್ನು ಮೀನು ಸಾಕಾಣಿಕೆಗೆ ಹರಾಜು ಹಾಕಲು ದಿ.12.08.2022ರ ಶುಕ್ರವಾರ ಬೆಳಿಗ್ಗೆ :10.30ಕ್ಕೆ ಸಮಯ ನಿಗದಿ ಮಾಡಿದ್ದು ಆಸಕ್ತರು ಭಾಗವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ/ ಅಧ್ಯಕ್ಷರು,
ಹಗಿನವಾಳು ಗ್ರಾಮ ಪಂಚಾಯಿತಿ, ನಂಜನಗೂಡು ತಾಲ್ಲೂಕು

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ವಾವಿನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಸಂಖ್ಯೆ: ಮೈನಪಾ/ಕಾಇಂ/ವಾವಿನೀಸ&ಒಚ(ಪೂರ್ವ)/ಟಿಎನ್–03/483/2022–23 ದಿನಾಂಕ: 10–08–2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರುಗಳ ಕೋರಿಕೆ ಮೇರೆಗೆ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ / ಜೆಎನ್‌ನರ್ಮ್ ಅನುದಾನ / 15ನೇ ಹಣಕಾಸು ಅನುದಾನ / 24.10% ಮತ್ತು 7.25% ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
				ಸಂಜೆ 5.30 ಗಂಟೆಗೆ		
1	ಕಾರ್ಯಪಾಲಕ ಅಭಿಯಂತರರು (ಒಳಚರಂಡಿ ವಿಭಾಗ)	3	21.5	11.08.2022	20.08.2022	23.08.2022
		4	52.69	12.08.2022	03.09.2022	05.09.2022
2	ಕಾರ್ಯಪಾಲಕ ಅಭಿಯಂತರರು (ವಾ.ವಿ.ನೀ.ಸ ವಿಭಾಗ)	46	973.58	18.08.2022	01.09.2022	02.09.2022
3	ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ)	3	49.85	17.08.2022	01.09.2022	02.09.2022
		2	245.00	12.08.2022	03.09.2022	05.09.2022

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ವಾವಿನೀಸ&ಒಚ (ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

18ನೇ ವರ್ಷದ ಪುಣ್ಯಸ್ಮರಣೆ

ಎಸ್.ಮಾದಣ್ಣನವರು
ಸಂಸ್ಥಾಪಕ ಕಾರ್ಯದರ್ಶಿ
ಶ್ರೀ ಬೀರೇಶ್ವರ ಶಿಕ್ಷಣ ಸಂಸ್ಥೆ (ರಿ), ಹೆಡಿಯಾಲ.
ನೀವು ನಮ್ಮನ್ನು ಅಗಲಿ ಇಂದಿಗೆ 18 ವರ್ಷವಾದರೂ ನಿಮ್ಮ ಸವಿನೆನಪು ಸದಾ ನಮ್ಮ ಮನಸ್ಸಿನಲ್ಲಿ ಹಸಿರಾಗಿರುತ್ತದೆ.
ಇಂತಿ ದುಃಖತಪ್ತರು: ಪತ್ನಿ ಎಸ್.ಮಹಾಲಕ್ಷ್ಮಿ, ಶ್ರೀಮತಿ ಹೇಮಾವತಿ ಮಹೇಶ್ (ವಕೀಲರು). ಶ್ರೀಮತಿ ವಸಂತ, ಬಸವರಾಜು, ಶ್ರೀಮತಿ ಮಮತಾ ವೆಂಕಟೇಶ್, ಶ್ರೀಮತಿ ಶಿಲ್ಪ ಪ್ರವೀಣ್ ಮತ್ತು ಮೊಮ್ಮಕ್ಕಳಾದ ಚೈತ್ರಶ್ರೀ . ಮೇಘಶ್ರೀ. ನಿತೀಶ್. ವಿಕ್ಕಿ. ಚಂದನ. ಭರತ್. ವೈಷ್ಣವಿ. ವಿಘ್ನೇಶ್ ಹಾಗೂ ಕುಟುಂಬವರ್ಗದವರು. ಹೆಡಿಯಾಲ. ನಂ.ಗೂಡು

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ವೆಬ್ : www.bandipurtigerreserve.in ದೂರವಾಣಿ: 08229–236043, 08229–236060
ಇ–ಮೇಲ್: directorbandipur@gmail.com

ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕರ ಕಛೇರಿ,
ಹುಲಿಯೋಜನೆ, ಬಂಡೀಪುರ, ಗುಂಡ್ಲುಪೇಟೆ ತಾಲ್ಲೂಕು

ಸಂ. ಎ4/ಬಿಯುಡಿ/ಆರ್&ಎಂ/ಸಿಆರ್ 14/ಸಿ.ಇ.ಪಿ.ಬಿ./2022–23 ದಿನಾಂಕ: 08–08–2022

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಪಶು ವೈದ್ಯಾಧಿಕಾರಿಗಳ ಸಹಾಯಕರು **(Veterinary Assistant)** ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಒಬ್ಬರು **Botanist** ಅವಶ್ಯಕತೆ ಇದ್ದು, ಪಶು ವೈದ್ಯಾಧಿಕಾರಿಗಳ ಸಹಾಯಕ ಹುದ್ದೆಗೆ **Diploma / Degree in Veterinary Sciences with experience** ಮತ್ತು **Botanist** ಹುದ್ದೆಗೆ **B.Sc. / M.Sc. in Wildlife / Botany / Forestry / Zoology with experience** ಹೊಂದಿರುವ ಅಭ್ಯರ್ಥಿಗಳು 3 (ಮೂರು) ವರ್ಷಗಳ ಅವಧಿಗೆ ಒಪ್ಪಂದದ ಮೇರೆಗೆ **Veterinary Assistant** ಹುದ್ದೆಗೆ ಅರ್ಜಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ **https://bandipurtiger reserve.in** ಗೆ ಭೇಟಿ ನೀಡುವುದು.

ಸಹಿ/– ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕರು,
ಹುಲಿಯೋಜನೆ, ಬಂಡೀಪುರ

ವಾಸಾಸಂಇಚಾನಗರ:241:2022–23

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗ,
ಮುಕ್ತಗಂಗೋತ್ರಿ, ಮೈಸೂರು–570 006

ಕರಾಮುವಿ/ಯುಇಡಿ/68/ವಾಹನ/2021–22 ದಿನಾಂಕ : 06.08.2022

ಹಳೆಯ ವಾಹನ ಬಹಿರಂಗ ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿರುವ ಈ ಕೆಳಕಂಡ ಹಳೆಯ ವಾಹನವನ್ನು ಪ್ರಸ್ತುತವಿರುವ ಸ್ಥಿತಿಯಲ್ಲಿಯೇ **ದಿನಾಂಕ: 18.08.2022**ರಂದು ವಿವಿನಿಲಯವು ನಿಯಮಾನುಸಾರ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದ್ದು ಭಾಗವಹಿಸಲು ಇಚ್ಚಿಸುವವರು ವಿವಿನಿಲಯವು ಸದರಿ ವಾಹನಕ್ಕೆ ನಿಗದಿಪಡಿಸಿರುವ ಇ.ಎಂ.ಡಿ ಮೊತ್ತದ ಡಿಡಿಯನ್ನು **ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು,** ಇವರ ಹೆಸರಿನಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು **ದಿನಾಂಕ: 16.08.2022ರ ಸಂಜೆ 5.30ರ ಒಳಗೆ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು–06,** ಇವರಿಗೆ ಖುದ್ದಾಗಿ ಸಲ್ಲಿಸುವಂತೆ ತಿಳಿಸಿದೆ. ಬಹಿರಂಗ ಹರಾಜಿನಲ್ಲಿ ಬಾಗವಹಿಸಲು ಇಚ್ಚಿಸುವವರು ಅರ್ಜಿ ಹಾಗೂ ಪ್ರತ್ಯೇಕ ಇ.ಎಂ.ಡಿ. ಮೊತ್ತದ ಡಿ.ಡಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ.

ಮುಂದುವರಿದು, ನಿಗದಿತ ಅರ್ಜಿ ನಮೂನೆ, ಷರತ್ತು ಮತ್ತು ನಿಬಂಧನೆಗಳನ್ನು ವಿ.ವಿ. ನಿಲಯದ ಅಧಿಕೃತ ಜಾಲತಾಣ **ksoumysuru.ac.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು ಹಾಗೂ ಸದರಿ ವಾಹನವನ್ನು ಕಚೇರಿ ವೇಳೆಯಲ್ಲಿ ಖುದ್ದಾಗಿ ವೀಕ್ಷಿಸಬಹುದಾಗಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ **ಮೊ. ಸಂ.: 6366199836 ಸಂಪರ್ಕಿಸಬಹುದು.**

ಕ್ರ. ಸಂ.	ವಾಹನದ ವಿವರ	ವಾಹನ ಸಂಖ್ಯೆ	ನಿಗದಿತ ಹರಾಜು ಮೌಲ್ಯ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ ಶೇ.7.5
1)	ಐಚರ್ ಎಲ್. ಸಿ. ವಿ ಶಾಲಾ ವಾಹನ (ಡೀಸೆಲ್ – ಮಾಡೆಲ್–1999)	ಕೆ.ಎ.09.8894	54,000/–	4,050/–

ಸದರಿ ಹರಾಜನಲ್ಲಿ ಭಾಗವಹಿಸಿ ಯಶಸ್ವಿಯಾದ ಬಿಡ್ಡುದಾರರು ತಾವು ಬಿಡ್ಡು ಮಾಡಿರುವ ಹರಾಜು ಮೌಲ್ಯದ ಶೇ.25% ಮುಂಗಡ ಮೊತ್ತವನ್ನು ಮತ್ತು ನಿಯಮಾನುಸಾರ ತೆರಿಗೆಯನ್ನು ಸ್ಥಳದಲ್ಲಿಯೇ ಪಾವತಿಸಬೇಕಾಗಿರುತ್ತದೆ. ವಾಹನಗಳ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿವಿನಿಲಯವು ಕಾಯ್ದಿರಿಸಿಕೊಂಡಿದ್ದು, ಯಾವುದೇ ಆಕ್ಷೇಪಣೆಗಳಿಗೆ ಅವಕಾಶವಿರುವುದಿಲ್ಲ. ಆಕ್ಷೇಪಣಾರ್ಹ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ವಿವಿನಿಲಯವು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ಕುಲಸಚಿವ.

ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ.

ಚಾಮರಾಜನಗರ ಜಿಲ್ಲೆ–571111
E-mail : tmc_gundlupet@yahoo.com
Website : www.gundlupettown.gov.in
office :08229-222226
Fax : 08229-222226
Helpline:08229-223377

ಸಂಖ್ಯೆ: ಪುಗು/ಪಠ/ಪಿಆರ್/ಅಮೃತನಗರ/04/2022–23 ದಿನಾಂಕ: 10.08.2022

ಟೆಂಡರ್ ಪ್ರಕಟಣೆ (4ನೇ ಕರೆ)
(ಇ–ಪ್ರೋಕ್ಯೂರ್ಮೆಂಟ್ ಪೋರ್ಟಾಲ್ ಮುಖಾಂತರ)

ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–1 (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ಷರತ್ತುಗಳಿಗೆ ಒಳಪಟ್ಟಂತೆ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ; 18.08.2022 ಸಂಜೆ 4.00 ವರೆಗೆ, ಟೆಂಡರ್‌ನ್ನು ತೆರೆಯುವ ದಿನಾಂಕ; 20.08.2022. ಕಾಮಗಾರಿಗಳ ವಿವರ: 01) ಇಂಡೆಂಟ್: 128148. ಆಧುನಿಕ ಮಾದರಿಯ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ ರೂ. 12.00 ಲಕ್ಷ. ಮೇಲಿನ ಕಾಮಗಾರಿಗಳಿಗೆ ಕಾಲಾವಧಿ(ಮಳೆಗಾಲ ಸೇರಿ);– 04 ತಿಂಗಳು. ಮೇಲಿನ ಎಲ್ಲಾ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ದರ್ಜೆ:– 3ನೇ ದರ್ಜೆ ಮೇಲ್ಪಟ್ಟು. ಕಾಮಗಾರಿಗಳ ವಿವರಗಳನ್ನು **www.eproc.karnataka.gov.in** ಮತ್ತು ಇತರೆ ಷರತ್ತುಗಳ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಶಾಖೆಯಲ್ಲಿ ತಿಳಿದುಕೊಳ್ಳಬಹುದು.

ಸಹಿ/– ಪಿ.ಗಿರೀಶ್, ಅಧ್ಯಕ್ಷರು, ಪುರಸಭೆ, ಗುಂಡ್ಲುಪೇಟೆ
ಸಹಿ/– ಆರ್.ಹೇಮಂತರಾಜು ಮುಖ್ಯಾಧಿಕಾರಿ, ಪುರಸಭೆ, ಗುಂಡ್ಲುಪೇಟೆ